Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 155
ಶುಕ್ರವಾರ,5 ಜೂನ್ 2026 | ಪುಟಗಳು: 17+4 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
ಇಂದು ವಿಶ್ವಪರಿಸರ ದಿನ
PRIDE OF YOUNG KARNATAKA

VK ವಿಜಯ ಕರ್ನಾಟಕ

ಪ್ರಧಾನಿಯಾಗಿ ಸುದೀರ್ಘ ಅವಧಿ: ಜೂನ್ 10ಕ್ಕೆ ನೆಹರೂ ದಾಖಲೆ ಮುರಿಯಲಿರುವ ಮೋದಿ

ಭವಿಷ್ಯದ ಭೂಮಿಗೆ ಪುಟ್ಟ ಗಿಫ್ಟ್

ಲವಲVK ನೋಡಿ

ಹಿಂದಿನ ಸರಕಾರ ₹5.07 ಲಕ್ಷ ಕೋಟಿ ಸಾಲ ಉಳಿಸಿದೆ: ಕೇರಳದ ಸಿಎಂ ಸತೀಶನ್ ಶ್ವೇತಪತ್ರ

47 YEARS OF EXCELLENCE
SRAMAYEVA JAYATHE
NARAYANA® EDUCATIONAL INSTITUTIONS
nLearn® Online learning app

JEE-ADV.2026

THE MAGNIFICENT SEVEN!

NARAYANA SECURES 7 OF THE TOP 20 RANKS IN OPEN CATEGORY

7 STUDENTS IN TOP 20
36 STUDENTS IN TOP 100
150 STUDENTS IN TOP 500

NARAYANA STUDENTS IN TOP 100 OPEN CATEGORY RANKS

AIR 22 ADITYA PAVANKUMAR T · AIR 23 A VENKATA HEMANTH KUMAR REDDY · AIR 24 T SAI VINEEL · AIR 27 ABHIPRAY · AIR 33 KOUSTUB DESPANDAY · AIR 35 UTKARSH · AIR 39 MADHAV VIRADIYA · AIR 41 SNEHAL ROY CHOUDHURY · AIR 44 YASH YADAV · AIR 51 MOPURI VEDA CHARAN REDDY

AIR 54 KOTA YASHWIN · AIR 57 PIYUSH DAKAD · AIR 58 SHRESTH SURAIYA · AIR 60 AGASTYA REMANI · AIR 61 VIVAN SHARAD MAHISWARI · AIR 63 DEEKSHANT SHARMA · AIR 71 PRANEEL DEBNATH · AIR 72 NISHKARSH SINGH · AIR 75 DORANALA BHAVITESH REDDY · AIR 78 ADULA SAI NIKITH

AIR 79 VISHRUT BHATT · AIR 80 TELLURI SHREYAS REDDY · AIR 83 SHIVAM JYOTI · AIR 84 ARNAV JAIN · AIR 88 BEJUGAMA ANSHUL · AIR 89 THAMMINA GIRISH · AIR 98 ANSHU · AIR 99 RUCHIT AGARWAL · AIR 100 ISHAN GUPTA

and many more...

NARAYANA KARNATAKA'S BEST PERFORMERS

AIR 6 B JAYAKRISHNA SRINIVAS · AIR 13 MANU PARAMESHWARAN · AIR 54 KOTA YASHWIN · AIR 165 A VISHNU SAI THEJA · AIR 178 AKSHIT BOYAPATI · AIR 191 SHAIK FAISAL AHMED · AIR 202 NIRANJAN BABU · AIR 251 MUHAMMED EHAN YASEER · AIR 320 ADITYA KUMAR · AIR 337 ROHIT SREENIVAS

AIR 386 V SHREYAS REDDY · AIR 580 A SRICHARAN · AIR 654 UTTHAMAN N IYENGAR · AIR 749 PRANAV KODALI · AIR 773 MAKKENA NIRANTH · AIR 811 SHUBIR SINGH · AIR 854 BHASKAR GHILDIYAL · AIR 865 SACHET BHAT · AIR 942 SASMIT GUDLA · AIR 959 SWARAJ NITIN BIRJE · AIR 976 ADHIRATH M PATIL

many more...

Disclaimer: Any inadvertent error published in this advertisement could be brought to our notice
nPrep: Narayana Digital Learning Programme

Narayana Schools, CBSE & PU Colleges in Karnataka

SCHOOLS - • ADUR Ph: 7022970085, 7349738563 • BANNERGHATTA Ph: 7022293937, 7022192319 • BALLARI Ph: 7022293903/904, 7022293958 • BELLANDUR Ph: 63662 38956, 70222 93941 • CHANDAPURA Ph: 70220 37238, 8179922582 • ELECTRONIC CITY - 2 Ph: 7022037241, 7024162286 • ECITY Ph: 7022293935, 8088602238 • GORAVIGERE Ph: 7899969873,9608084927 • HOSUR Ph: 8438653429, 8438664529 • HSR LAYOUT Ph: 7022027517,7022293992 • JP NAGAR Ph: 7022293914/920 KAMMANAHALLI Ph: 7022293902, 7022293901 • KAGADASAPURA Ph: 70222 93845, 70222 93844 • KASTURI NAGAR Ph: 7022293862, 7022293863 • KORAMANGALA Ph: 7022294007, 7022192275 • KR PURAM Ph: 70222 93859, 70222 93856 • MARAGONDANAHALLI Ph: 70222 93861 / 981 • MARATHAHALLI Ph: 70222 93890 / 875 MATHIKERE Ph: 7022293870, 8179934718 • MYSURU Ph: 7022293922,7022662586 • NAGARBHAVI Ph: 7022293912, 7022281466 • TUMKUR Ph: 7349738565,8179948017 • NANDINI LAYOUT Ph: 7022293872, 7022293870 • MALLASANDRA Ph: 70220 01272, 7899964836 • RAMAMURTHY NAGAR Ph: 7022293867, 7022293866 • RK LAYOUT Ph: 7022293884, 7022293864 RT NAGAR Ph: 7022294015/014 SAHAKAR NAGAR Ph: 7349738570, 7022293942 UTTARAHALLI Ph: 7022192738, 7411125668 • VIDYARANYAPURA Ph: 7022293943, 7022293944 • WHITEFIELD Ph: 7022960894, 7022192032 • YELAHANKA Ph: 7349738562, 7022293880 CO SCHOOLS • CO-CV Raman Bhavan, Kasturi Nagar Ph: 70222 24095 • CO-Bhaskara Bhavan BTM- Hulimavu Ph: 7022293931 • CO- Prasanthi Bhavan, Whitefield Ph: 702201267 • Marathahalli CO Ph: 7022293955 • CO Sindhu Bhavan, Sahakar Nagar Ph: 7022293881 • CO Kaveri Bhavan, Kasavanahalli Ph: 70222 93858 • STAR CO, Nagarbhavi Ph: 7022293962 • CO- Triveni Bhavan, JP Nagar Ph: 7022293922 • STAR CO Ballari Ph: 7022293903

COLLEGES • VIDYARANYAPURA - Ph: 7022294002, 9606980496 • RAJAJINAGAR COE - Ph: 7022294013, 9606980313 • ELECTRONIC CITY (PHASE-2) - Ph: 7022293930, 8179945272 • BALLARI - Ph: 7022293903, 7022293905 • RAMAMURTHY NAGAR - Ph: 7022381465, 7022293854 • CV RAMAN NAGAR - Ph: 7022281463, 7022293953 • BELLANDUR - Ph: 7022293948, 7022293858 • CHANDAPURA - Ph: 7349738574, 7022030836 • HULIMAVU, NOBONAGAR (CO-BHASKARA BHAVAN) - Ph: 7022293931, 9606084890, 7022960891 • KASAVANAHALLI (CO KAVERI BHAVAN) - Ph: 7022293858, 7022293894 • KEMPAPURA, DASARAHALLI (CO-KUVEMPU BHAVAN) - Ph: 7022294013, 7022294004 • WHITEFIELD (CO PRASHANTHI BHAVAN) - Ph: 7022001267 • SAHAKAR NAGAR (CO-SINDHU BHAVAN) - Ph: 7022293924, 7022293926 • JP NAGAR - Ph: 7022293922, 7022293921 • GIRINAGAR - Ph: 7022293962/946, 8722278676 • MARATHAHALLI - Ph: 7022293955, 7022304342 • MALLASANDRA - Ph: 7022293922, 7022001268 • NAGARBHAVI - Ph: 7022293879, 7022293939, 7022293962 • MYSURU - Ph: 7022293922, 7022662586 • TUMKUR - Ph: 7349738565, 8179939626 • BYRATHI - Ph: 7022293850, 7022293853 • KASTURI NAGAR (CO-CV RAMAN BHAVAN) - Ph: 7022224095, 7022224102 • YELAHANKA - Ph: 7022017474, 7022012424 • HOSUR - Ph: 8438653429, 8438664529 • RESIDENTIAL COLLEGES - PUNEET BHAVAN (BANDAPURA - GIRLS) - Ph: 7337587421, 7022001271 • NLM GIRLS (NELAMANGALA) - Ph: 7022293938 • NLM BOYS (NELAMANGALA) - Ph: 7022294001 • BLR-SAMETHANALLI - PRASHANTHI CO BOYS - Ph: 7337587421 • RESIDENTIAL CO SCHOOLS - CO - Saraswathi Bhavan, Boys Campus, Goravigere - Ph: 9642412345 • Girls Campus: Bandapura - Ph: 8351056789

SCAN QR FOR ADMISSIONS

nConnect Tech-enabled performance tracking

#YourDreamsAreOurDreams

Call: 1800 102 3344 | www.narayanagroup.com

ನನ್ನ ಭೂಮಿ- ನನ್ನ ಹೆಜ್ಜೆ
ಪರಿಸರದ ಋಣ ತೀರಿಸೋಣ

ನಾವು ಬದುಕುತ್ತಿರುವ ಈ ಭೂಮಿ, ಉಸಿರಾಡುತ್ತಿರುವ ಗಾಳಿ, ಕುಡಿಯುವ ನೀರು ಎಲ್ಲವೂ ಪ್ರಕೃತಿ ನಮಗೆ ಕೊಟ್ಟ ಉಚಿತ ಕೊಡುಗೆಗಳು. ಆದರೆ, ಪ್ರತಿಯಾಗಿ ನಾವು ಪ್ರಕೃತಿಗೆ ಏನನ್ನು ನೀಡುತ್ತಿದ್ದೇವೆ ಎನ್ನುವುದೇ ಈ ಪರಿಸರ ದಿನದಂದು ನಾವೆಲ್ಲ ಕೇಳಿಕೊಳ್ಳಬೇಕಾದ ಬಹುಮುಖ್ಯ ಪ್ರಶ್ನೆ. ತಿಂಗಳಿಗೊಂದರಂತೆ ಪರಿಸರಕ್ಕೆ ಸಂಬಂಧಿಸಿದಂತೆ ಜಲ ದಿನ, ಪರಿಸರ, ಅರಣ್ಯ, ಭೂ ದಿನ... ಹೀಗೆ ಏನೇನೋ ಆಚರಿಸುತ್ತೇವೆ. ಡಿಪಿಗಳನ್ನು, ಸ್ಟೇಟಸ್‌ಗಳನ್ನು ಹಸಿರಾಗಿಸಿಕೊಳ್ಳುತ್ತೇವೆ. ಆದರೆ, ಇಷ್ಟು ಸಾಕೇ? ನಮ್ಮ ದೈನಂದಿನ ಅಭ್ಯಾಸಗಳಲ್ಲಿ ಸಣ್ಣ ಬದಲಾವಣೆ ತರುವ ಮೂಲಕ ಭೂಮಿಗೆ ಕೃತಜ್ಞತೆ ಸಲ್ಲಿಸುವುದು ಯಾವಾಗ? 'ವಿಶ್ವ ಪರಿಸರ ದಿನ'ದ ಈ ಹೊತ್ತಿನಲ್ಲಿ 'ವಿಜಯ ಕರ್ನಾಟಕ' ಇದೇ ಉದ್ದೇಶದಿಂದಲೇ 'ನನ್ನ ಭೂಮಿ ನನ್ನ ಹೆಜ್ಜೆ' ಅಭಿಯಾನ ಕೈಗೊಂಡಿದೆ. ಇಂಥ ಪುಟ್ಟಪುಟ್ಟ ಈ ಹೊತ್ತಿನಲ್ಲಿ ಪರಿಸರಕ್ಕೆ ಪೂರಕವಾಗಿ ಬದುಕುವುದು ಕೂಡ ಒಂದು ಸರಳತೆ. ಈ ಬಂಗಾರದ ಸಲಹೆಗಳನ್ನು ಮೈಗೂಡಿಸಿಕೊಳ್ಳೋಣ.

ನನ್ನ ಭೂಮಿ ಹೆಜ್ಜೆ – ವಿಕ ಅಭಿಯಾನ

ನಮ್ಮೊಳಗೊಬ್ಬ ಪ್ಲಂಬರ್ ಇರಲಿ

ಮನೆಯ ಮೂಲೆಯಲ್ಲೋ, ಅಂಗಳದಲ್ಲೋ ರಾತ್ರಿಯ ನಿಶ್ಯಬ್ದದಲ್ಲಿ 'ಟಪ್... ಟಪ್...' ಎಂದು ನೀರು ತೊಟ್ಟಿಕ್ಕುವ ಸದ್ದು ಕೇಳಿಸಿದಾಗ ಅದೇನೋ ಮನಸ್ಸು ತಳಮಳಿಸುತ್ತದೆ. ಅದು ಕೇವಲ ನೀರ ಸೋರಿಕೆಯಲ್ಲ, ಭೂಮಿಯ ಕಣ್ಣೀರಿನಂತೆ ಭಾಸವಾಗುತ್ತದೆ. ಆ ನಲ್ಲಿ ಸೋರಿಕೆಗೆ ಒಂದು ಪುಟ್ಟ ವಾಷರ್ ಹಾಕಿ ಬಂದ್ ಮಾಡಿದಾಗ, ಇಡೀ ರಾತ್ರಿ ನಿರಾಳವಾಗಿ ನಿದ್ದೆ ಆವರಿಸುತ್ತದೆ. ನಮ್ಮೊಳಗೊಬ್ಬ ಪ್ಲಂಬರ್ ಇದ್ದರೆ, ಜಲಸಂರಕ್ಷಣೆಗೆ ಅದೇ ದೊಡ್ಡ ಉಪಕಾರ.

ಕಚೇರಿ ಸಮೀಪವಿದ್ದರೆ ಸೈಕಲ್ ಬಳಸಿ

ಬೆಳ್ಳಂಬೆಳಗ್ಗೆ ಗಾಡಿಯ ಕೀ ತಿರುಗಿಸಿ, ಹಾರ್ನ್ ಮಾಡುತ್ತಾ ಟ್ರಾಫಿಕ್ ಗದ್ದಲಕ್ಕೆ ಬೀಳುವ ಬದಲು, ಕಚೇರಿ ಹತ್ತಿರವೇ ಇದ್ದರೆ ಸೈಕಲ್ ಹತ್ತುವುದು ಒಂಥರಾ ಬಾಲ್ಯದ ದಿನಗಳನ್ನು ಕೈಬೀಸಿ ಕರೆದಂತೆ. ಮುಖಕ್ಕೆ ಸೋಕುವ ಮುಂಜಾವಿನ ತಂಗಾಳಿ, ಪೆಡಲ್ ತುಳಿಯುವಾಗ ಹಗೆಲೇರುವ ನಿರಾಳತೆ, ದೈಹಿಕ ವ್ಯಾಯಾಮ... ಇವೆಲ್ಲ ಆರೋಗ್ಯಕ್ಕೂ ಹಿತ. ಬದುಕಿನ ವೇಗವನ್ನು ಕೊಂಚ ನಿಧಾನಿಸಿ ಪ್ರಕೃತಿಯನ್ನು ಆಸ್ವಾದಿಸಲು ಇದಕ್ಕಿಂತ ಚೆಂದದ ದಾರಿ ಬೇರೆ ಇಲ್ಲ.

ಝೀರೋ ವೇಸ್ಟೇಜ್ ವೆಡ್ಡಿಂಗ್



ತ್ಯಾಜ್ಯಮುಕ್ತ ಶುಭ ಸಮಾರಂಭದ ಸಂಕಲ್ಪ ತೊಡೋಣ. ಮದುವೆ ಎಂದರೆ ಕೇವಲ ಸಡಗರ, ಧಾಮ್ ಧೂಮ್ ಅಷ್ಟೇ ಅಲ್ಲ; ಅದು ಎರಡು ಜೀವಗಳು ಪ್ರಕೃತಿಯ ಸಾಕ್ಷಿಯಾಗಿ ಒಂದಾಗುವ ಪವಿತ್ರ ಕ್ಷಣ ಕೂಡ. ಆ ಸಂಭ್ರಮದ ಕೊನೆಯಲ್ಲಿ ಪ್ಲಾಸ್ಟಿಕ್ ಕಸದ ರಾಶಿ ಉಳಿಸುವ ಬದಲು, ಬಾಳೆಎಲೆಯ ಊಟದ ಸುವಾಸನೆ, ಸ್ಟೀಲ್ ಲೋಟದ ತಣ್ಣನೆ ನೀರು, ಮತ್ತೆ ದೆಯರ ಕೈಸೇರುವ ಪುಟ್ಟ ಹೂಕುಂಡ ಸುಗಂಧದಲ್ಲಿ ಆ ಮದುವೆಯ ನೆನಪು ಸದಾ ಹಸಿರಾಗಿಯೇ ಉಳಿಯುತ್ತದೆ.

ಹಾಲಿನ ಪಾಕೆಟ್ ಕತ್ತರಿಸುವಾಗ ತುದಿಯನ್ನು ಬೇರ್ಪಡಿಸಬೇಡಿ

ಬೆಳಗ್ಗೆ ಒಲೆಯ ಮೇಲೆ ಹಾಲು ಉಕ್ಕುವಾಗ ನಾವೆಲ್ಲೋ ಗಡಿಬಿಡಿಯಲ್ಲಿರುತ್ತೇವೆ. ಆ ಹೊತ್ತಿನಲ್ಲಿ ಹಾಲಿನ ಕವರ್‌ನ ಪುಟ್ಟ ಮೂಲೆಯನ್ನು ಪೂರ್ತಿಯಾಗಿ ಕತ್ತರಿಸಿ ಬಿಸಾಕುವ ಆ ಸಣ್ಣ ನಡೆ, ಮಣ್ಣಿನ ಒಡಲಿಗೆ ನಾವು ಚುಚ್ಚುವ ಸಣ್ಣ ಮುಳ್ಳೇ ಸರಿ. ಆ ತುಂಡು ಕವರ್‌ನಿಂದ ಬೇರ್ಪಡದಂತೆ ಅರ್ಧ ಮಾತ್ರ ಕತ್ತರಿಸುವ ಜಾಗರೂಕತೆ ನಮ್ಮದಿದ್ದರೆ, ಮಣ್ಣು ಕೂಡ ನಮ್ಮನ್ನು ಹರಸುತ್ತದೆ. ಭೂಮಿಗೆ ಪ್ಲಾಸ್ಟಿಕ್ ಕಣ ಸೇರದಂತಾಗುತ್ತದೆ.

ಪ್ರತಿ ಬರ್ತ್ ಡೇಗೆ ಒಂದು ಗಿಡ ಉಡುಗೊರೆ



ವರ್ಷದ ಕ್ಯಾಲೆಂಡರ್‌ನ ಪುಟ ಉರುಳುವಾಗ ಬರೀ ಕೇಕ್ ಕತ್ತರಿಸಿ ಸಂಭ್ರಮಿಸುವ ಬದಲು, ಮಣ್ಣಿನಲ್ಲಿ ಒಂದು ಜೀವದ ಬೊಳಕೆ ನೆಡುವುದು ಬದುಕಿಗೆ ಒಂದು ಅರ್ಥ ತರುವ ವಿಷಯ. ನಾವು ಬೆಳೆದಂತೆ, ನಮ್ಮೊಂದಿಗೆ ಆ ಸಸಿಯೂ ರೆಂಬೆ-ಕೊಂಬೆ ಚಾಚಿ ಮರವಾಗಿ ಬೆಳೆಯುವುದನ್ನು ಕಿಟಕಿಯಿಂದ ನೋಡುವ ಸುಖವಿದೆಯಲ್ಲ, ಅದು ಜಗತ್ತಿನ ಯಾವುದೇ ದುಬಾರಿ ಗಿಫ್ಟ್‌ಗೂ ಸಮನಾಗಲಾರದು.

ಭೂಮಿಯ ಕಿಟಕಿಗೆ ಕಾಂಕ್ರೀಟ್ ಬಳಿಯದಿರೋಣ

ಮನೆಯ ಮುಂದೆ, ರಸ್ತೆ ಬದಿಯಲ್ಲಿ ತಣ್ಣಗೆ ತಲೆಯೆತ್ತಿ ನಿಲ್ಲುವ ಸಣ್ಣಪುಟ್ಟ ಹಸಿರು ಹುಲ್ಲು ಕಾಡುಗಿಡಗಳ ಚೆಲುವು ಅನನ್ಯ. ಅವುಗಳನ್ನು ಕಾಂಕ್ರೀಟ್ ಹಾಕಿ ಮುಚ್ಚುವ ಬದಲು ಹಾಗೆಯೇ ಬಿಟ್ಟರೆ, ಮಳೆಹನಿಗಳು ಭೂಮಿಯ ಒಡಲನ್ನು ನೇರವಾಗಿ ತಲುಪಲು ದಾರಿ ಸಿಗುತ್ತದೆ. ಭೂಮಿ ಕೂಡ ತಂಪಾಗಿರುತ್ತದೆ. ಕಾಂಕ್ರೀಟ್ ಕಾಡಿನ ಮಧ್ಯೆ ಭೂಮಿ ಮುಕ್ತವಾಗಿ ಉಸಿರಾಡಲು ಇರುವ ಪುಟ್ಟ ಕಿಟಕಿಗಳಿವು.

Bennett & Coleman – THE TIMES OF INDIA | ಸಂಪಾದಕೀಯ EDITORIAL

ಮತ್ತೊಂದು ಭೂಮಿ ಸೃಷ್ಟಿಸಲು ನಮಗೆಲ್ಲಿ ಸಾಧ್ಯ?

ನಮ್ಮ ಭೂಮಿ ನಮ್ಮ ಹೆಜ್ಜೆ... ಪ್ರಕೃತಿಯ ಉಳಿವಿಗಾಗಿ ವಿಜಯ ಕರ್ನಾಟಕ ಇಡುತ್ತಿರುವ ಈ ಹೆಜ್ಜೆ ಕೇವಲ ಜಾಗೃತಿ ಅಭಿಯಾನವಲ್ಲ; ಇದು ಜೀವಸಂಕುಲದ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಾವೇ ಮಾಡಿಕೊಳ್ಳಬೇಕಾದ ಆತ್ಮಾವಲೋಕನದ ಕರೆ. ಇಂದು ನಮ್ಮ ಕಣ್ಣೆದುರೇ ಪ್ರಕೃತಿ ಮುನಿಸಿಕೊಂಡಿದೆ. ಎಂದೋ ಕೇಳುತ್ತಿದ್ದ ಜಾಗತಿಕ ತಾಪಮಾನದ ತೀವ್ರತೆ ಈಗ ನಮ್ಮ ಮನೆಬಾಗಿಲಿಗೆ ಬಂದು ನಿಂತಿದೆ. ಭೂಮಿ ಕೆಂಡದಂತೆ ಕಾಯುತ್ತಿದೆ, ಸಕಾಲಕ್ಕೆ ಬರಬೇಕಾದ ಮಳೆ ಮಾಯವಾಗಿದೆ, ಹವಾಮಾನದ ಏರುಪೇರಿನಿಂದಾಗಿ ಚಳಿ-ಬಿಸಿಲಿನ ತೀವ್ರತೆ ವಿಪರೀತ ಎನ್ನುವಂತಾಗಿದೆ. ಇವೆಲ್ಲವೂ ಪ್ರಕೃತಿ ನಮಗೆ ನೀಡುತ್ತಿರುವ ಅಂತಿಮ ಎಚ್ಚರಿಕೆಯ ಗಂಟೆಗಳು. ಈ ಬ್ರಹ್ಮಾಂಡದಲ್ಲಿ ಜೀವಸಂಕುಲಕ್ಕೆ ನೆಲೆಕೊಟ್ಟ ಏಕೈಕ ಅದ್ಭುತ ಗ್ರಹ ನಮ್ಮ ಭೂಮಿ. ಆದರೆ, ನಮ್ಮ ಸ್ವಾರ್ಥ, ಬೇಜವಾಬ್ದಾರಿತನ ಮತ್ತು ಹಸಿರು ನಾಶ ಹೀಗೆಯೇ ಮುಂದುವರಿದರೆ, ಈ ಸುಂದರ ಗ್ರಹ ಕೇವಲ ಬರಡು ಭೂಮಿಯಾಗಿ ಮರುಭೂಮಿಯಾಗಲು ಬಹಳ ದಿನ ಬೇಕಾಗಿಲ್ಲ.

ನಾವು ಪರಿಸರ ರಕ್ಷಣೆ ಎಂದರೆ ಕೇವಲ ದೊಡ್ಡ ದೊಡ್ಡ ಭಾಷಣಗಳು, ಕೋಟಿ ವೃಕ್ಷ ಆಂದೋಲನಗಳು ಎಂದುಕೊಳ್ಳುತ್ತೇವೆ. ಆದರೆ ನಿಜವಾದ ಬದಲಾವಣೆ ಆರಂಭವಾಗಬೇಕಿರುವುದು ನಮ್ಮ ದೈನಂದಿನ ಬದುಕಿನ ಸಣ್ಣಪುಟ್ಟ ಅಭ್ಯಾಸಗಳಿಂದ. ಅನಗತ್ಯವಾಗಿ ಉರಿಯುವ ಒಂದು ವಿದ್ಯುತ್ ದೀಪವನ್ನು ಆರಿಸುವುದು, ಹಲ್ಲುಜ್ಜುವಾಗ ನಲ್ಲಿಯನ್ನು ಬಂದ್ ಮಾಡಿ ನೀರು ಉಳಿಸುವುದು, ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಿ ಬಟ್ಟೆ ಬ್ಯಾಗ್ ಹಿಡಿದು ಮಾರುಕಟ್ಟೆಗೆ ಹೋಗುವುದು, ಹನಿ ನೀರನ್ನೂ ವ್ಯರ್ಥ ಮಾಡದೆ ಮಳೆನೀರು ಕೊಯ್ಲು ಮಾಡುವುದು ಹಾಗೂ ನಮ್ಮ ಮನೆಯ ಸುತ್ತಮುತ್ತ ಕನಿಷ್ಠ ಒಂದಾದರೂ ಗಿಡ ನೆಟ್ಟು ಪೋಷಿಸುವುದು... ಇವೇ ನಮ್ಮ ಭೂಮಿಗಾಗಿ ನಾವಿಡಬೇಕಾದ ಹೆಜ್ಜೆಗಳು. ಈ ಅಂಶಗಳೆಲ್ಲ ಸಣ್ಣದಾಗಿ ಕಂಡರೂ, ಕೋಟ್ಯಂತರ ಜನರು ಇದನ್ನು ಪಾಲಿಸಿದಾಗ ಜಾಗತಿಕ ಮಟ್ಟದಲ್ಲಿ ದೊಡ್ಡ ಕ್ರಾಂತಿಯೇ ಸೃಷ್ಟಿಯಾಗುತ್ತದೆ.

ನಾವು ಇಂದೇ ಎಚ್ಚೆತ್ತುಕೊಳ್ಳದಿದ್ದರೆ, ಭವಿಷ್ಯದಲ್ಲಿ ನಾವಷ್ಟೇ ಅಲ್ಲ, ನಮ್ಮ ಮುಂದಿನ ಪೀಳಿಗೆ ಅತ್ಯಂತ ದುಬಾರಿ ದಿನಗಳನ್ನು ಎದುರಿಸಬೇಕಾಗುತ್ತದೆ. ಶುದ್ಧ ಗಾಳಿ ಮತ್ತು ಕುಡಿಯುವ ನೀರಿಗಾಗಿ ಯುದ್ಧಗಳು ನಡೆದರೂ ಆಚ್ಚರಿಯಿಲ್ಲ. ಪ್ರಕೃತಿಯನ್ನು ಲೂಟಿ ಮಾಡಿ ನಾವು ಗಳಿಸುವ ಕೋಟ್ಯಂತರ ರೂಪಾಯಿ ಆಸ್ತಿ, ಉಸಿರಾಡಲು ಶುದ್ಧ ಗಾಳಿಯೇ ಇಲ್ಲದಾಗ ಸಂಪೂರ್ಣ ವ್ಯರ್ಥವಾಗುತ್ತದೆ. ಕಾಡನ್ನು ಕಡಿದು ಕಾಂಕ್ರೀಟ್ ಜಗತ್ತನ್ನು ಸೃಷ್ಟಿಸುತ್ತಿರುವ ನಮಗೆ, ಪ್ರಕೃತಿಯ ಮುನಿಸನ್ನು ಎದುರಿಸುವ ಶಕ್ತಿ ಖಂಡಿತಾ ಇಲ್ಲ. ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಮತ್ತೊಂದು ಜೀವಂತ ಭೂಮಿಯನ್ನು ಸೃಷ್ಟಿಸಲು ಮಾನವನಿಗೆ ಸಾಧ್ಯವಿಲ್ಲ ಎಂಬುದನ್ನು ನಾವು ಮರೆಯಬಾರದು.

ಹಾಗಾಗಿ, ಪರಿಸರ ದಿನದ ಆಚರಣೆ ಕೇವಲ ಒಂದು ದಿನದ ಸಂಭ್ರಮ ಅಥವಾ ಫೋಟೊ ಕ್ಲಿಕ್ಕಿಸಿಕೊಳ್ಳುವ ಕಸರತ್ತಾಗಬಾರದು. ಬದಲಾವಣೆಯ ಸಂಕಲ್ಪ ಇಂದಲ್ಲ, ಈ ಕ್ಷಣದಿಂದಲೇ ಜಾರಿಗೆ ಬರಬೇಕು. ಪ್ರಕೃತಿಯನ್ನು ರಕ್ಷಿಸುವುದು ಎಂದರೆ ನಮ್ಮನ್ನು ನಾವೇ ರಕ್ಷಿಸಿಕೊಳ್ಳುವುದು ಎಂದರ್ಥ. ಬನ್ನಿ, ಇಂದಿನಿಂದಲೇ ನಮ್ಮ ದಿನಚರಿಯಲ್ಲಿ ಪರಿಸರಸ್ನೇಹಿ ಬದಲಾವಣೆಗಳನ್ನು ರೂಢಿಸಿಕೊಳ್ಳೋಣ. 'ವಿಕ' ಅಭಿಯಾನದ ಈ ಆಶಯ ಮನೆ-ಮನಗಳ ನಿತ್ಯ ಮಂತ್ರವಾಗಲಿ. ಹಾಗಾದಾಗಲೇ ಈ ಹೆಜ್ಜೆಗೆ ಸಾರ್ಥಕತೆ.

ಕರೆಂಟ್ ಉಳಿಸಿ, ಕತ್ತಲೆಯನ್ನೂ ಓಡಿಸಿ

ಹಗಲಿನ ಹೊತ್ತು ಕಿಟಕಿಗಳ ಪರದೆಯನ್ನು ಸರಿಸಿ, ಸೂರ್ಯನ ಬೆಳಕನ್ನು ಮನೆ ತುಂಬಿಸಿಕೊಳ್ಳುವಾಗ ಸಿಗುವ ಪಾಸಿಟಿವ್ ಎನರ್ಜಿಯೇ ಬೇರೆ. ಕೋಣೆಯಿಂದ ಹೊರಡುವಾಗ ಸ್ವಿಚ್ ಆಫ್ ಮಾಡುವ ಆ ಒಂದು ಸೆಕೆಂಡ್‌ನ ಅಭ್ಯಾಸ; ಮೊಬೈಲ್ ಚಾರ್ಜ್ ಆದ ತಕ್ಷಣ ಸ್ವಿಚ್ ಆಫ್ ಮಾಡಿ ಪ್ಲಗ್‌ನಿಂದ ಕಿತ್ತು ತೆಗೆಯುವ ಜಾಗ್ರತೆ, ಬೇಸಿಗೆಯಲ್ಲಿ ಗೀಸರ್ ಬಳಸದೆ ತಣ್ಣೀರ ಸ್ನಾನ... ಇವೆಲ್ಲವೂ ಕತ್ತಲೆಯನ್ನು ಓಡಿಸುವ ಬೆಳಕಿನೆಡೆಗಿನ ನಮ್ಮ ಪುಟ್ಟ ಹೆಜ್ಜೆಗಳು.

ಬಕೆಟ್ ಸ್ನಾನವೇ ಬೆಸ್ಟ್, ಶವರ್‌ಗೆ ಗುಡ್ ಬೈ ಹೇಳಿ

ಶವರ್ ಕೆಳಗೆ ನಿಂತು ಮೈಮರೆಯುವುದು ಇಷ್ಟವಾಗಬಹುದು, ಆದರೆ ಬಕೆಟ್ ತುಂಬಿದ ನೀರಿನಲ್ಲಿ ಚೊಂಬಿನಿಂದ ನೀರು ತಲೆಯ ಮೇಲೆ ಸುರಿದುಕೊಳ್ಳುವಾಗ ಸಿಗುವ ಆ ಹಿತವಾದ ಸುಖವೇ ಬೇರೆ. ನದಿಯೊಂದರಲ್ಲಿ ಮುಳುಗೆದ್ದ ಅನುಭವ ಅದು. ನೀರನ್ನು ಅಳೆದು ಸುರಿದು ಬಳಸುವಾಗ, ಆ ನೀರ ಹನಿಗಳ ಮೇಲಿನ ಗೌರವ ನಮಗರಿಯದಂತೆ ಹೆಚ್ಚಾಗುತ್ತಾ ಹೋಗುತ್ತದೆ.

'ಹಸಿ ಕಸ'ದೊಳಗಿದೆ ಚೆನ್ನದಂಥ ಗೊಬ್ಬರ

ತರಕಾರಿ ಸಿಪ್ಪೆ, ಹಣ್ಣಿನ ತರಕಲು, ಒಣಗಿದ ಹೂವುಗಳು... ಇವೆಲ್ಲವೂ ಕಸದ ತೊಟ್ಟಿಗೆ ಸೇರಿದರೆ ದುರ್ನಾತ. ಅದೇ ಇವುಗಳನ್ನು ಒಂದು ಸಣ್ಣ ಕುಂಡದಲ್ಲಿ ಪ್ರೀತಿಯಿಂದ ಕರಗಿಸಿದರೆ ಕಪ್ಪನೆಯ ಮಣ್ಣಿನ ಸುವಾಸನೆಯುಳ್ಳ ಗೊಬ್ಬರ ಸಿದ್ಧವಾಗುತ್ತದೆ. ನಮ್ಮ ಕೈಯ್ಯಾರೆ ಸಿದ್ಧಪಡಿಸಿದ ಆ ಗೊಬ್ಬರವನ್ನು ಬಾಲ್ಕನಿಯ ಗಿಡಗಳಿಗೆ ಹಾಕಿದಾಗ, ಅವು ಮತ್ತಷ್ಟು ನಕ್ಕಂತೆ ಕಾಣುತ್ತವೆ. ಮನೆ-ಮನಸ್ಸು ತಂಪಾಗಿರಲು ಇದಕ್ಕಿಂತ ಉತ್ತಮ ಐಡಿಯಾ ಇದೆಯೇ?

ಬಟ್ಟೆ ಬ್ಯಾಗ್ ಸದಾ ನಿಮ್ಮ ಬಂಡಿಯ ಡಿಕ್ಕಿಯಲ್ಲಿರಲಿ

ಮಾರುಕಟ್ಟೆಗೆ ಹೊರಡುವಾಗ ಕೈಯಲ್ಲೊಂದು ಬಟ್ಟೆ ಬ್ಯಾಗ್ ಇಟ್ಟುಕೊಳ್ಳುವುದು ಅಥವಾ ಬಂಡಿಯ ಡಿಕ್ಕಿಯಲ್ಲಿ ಸದಾ ಅದಕ್ಕೊಂದು ಜಾಗ ಕಾಯ್ದಿರಿಸುವುದು ನಮ್ಮ ಆತ್ಮೀಯ ಗೆಳೆಯನನ್ನು ಜತೆಯಲ್ಲಿ ಕರೆದೊಯ್ದಂತೆ. ಅಂಗಡಿಯವನು ಪ್ಲಾಸ್ಟಿಕ್ ಕವರ್ ಕೈಗಿಡಲು ಬಂದಾಗ, ಮುಗುಳ್ನಗುತ್ತಾ ''ಬೇಡಪ್ಪಾ, ನನ್ನ ಹತ್ತಿರ ಬ್ಯಾಗ್ ಉಂಟು,'' ಎನ್ನುವಾಗ ಮನಸ್ಸಿನ ಮೂಲೆಯಲ್ಲಿ ಎಲ್ಲೋ ಒಂದು ಸಣ್ಣ ತೃಪ್ತಿ ಮೂಡುತ್ತದೆ. ಮಾರುಕಟ್ಟೆಗೆ ಧಾವಿಸುವಾಗ ಬಟ್ಟೆ ಬ್ಯಾಗ್ ನಮಗೆ ಭಾರವಾಗದಿರಲಿ.

ಹಳೆಯ ಬಟ್ಟೆಗಳಿಗೆ ಹೊಸ ಜನ್ಮ ನೀಡಿ

ಅದೆಷ್ಟೋ ನೆನಪುಗಳನ್ನು ಹೊತ್ತ ಹಳೆಯ ಕುರ್ತಾ, ನೆಚ್ಚಿನ ಟೀ ಶರ್ಟ್ ಮೈಗೆ ಹಿಡಿಸದಾದಾಗ ಅದನ್ನು ಎಸೆದುಬಿಡಲು ಮನಸ್ಸೇ ಒಪ್ಪುವುದಿಲ್ಲ. ಅದನ್ನು ಅಡುಗೆ ಮನೆಯ ಒರೆಸುವ ಬಟ್ಟೆಯಾಗಿ, ಡಸ್ಟಿಂಗ್ ಪ್ಯಾಡ್, ಕಾಲೊರೆಸುವ ಮ್ಯಾಟ್ ಆಗಿಯೂ ರೂಪಾಂತರಿಸಿದಾಗ ಆ ಬಟ್ಟೆಯ ಆಯಸ್ಸು ಹೆಚ್ಚುತ್ತದೆ. ವಸ್ತುಗಳನ್ನು ಕೊನೆಯವರೆಗೂ ಪ್ರೀತಿಯಿಂದ ಬಳಸುವ ಹಳೇ ಕಾಲದ ಬಂಗಾರದ ಗುಣವೇ ಪರಿಸರಕ್ಕೆ ಶ್ರೀರಕ್ಷೆ.

ಎಳನೀರು ಕುಡಿಯುವಾಗ 'ಸ್ಟ್ರಾ' ಬಳಸದಿರಿ



ಕಡು ಬೇಸಿಗೆಯಲ್ಲಿ ರಸ್ತೆ ಬದಿಯ ಗಾಡಿಯ ಬಳಿ ನಿಂತು ಎಳನೀರು ಕುಡಿಯುವ ಮಜಾವೇ ಬೇರೆ. ಆ ಎಳನೀರಿನ ಗಂಟಲಿಗೆ ಪ್ಲಾಸ್ಟಿಕ್‌ನ ಸ್ಟ್ರಾ ಚುಚ್ಚಿ ಕುಡಿಯುವ ಬದಲು, ಆ ಕಾಯನ್ನು ಹಾಗೆಯೇ ಕೈಗೆತ್ತಿಕೊಂಡು ನೇರವಾಗಿ ತುಟಿಗೆ ಅಂಟಿಸಿ ಕುಡಿಯುವಾಗ ಪ್ರಕೃತಿಯ ಅಮೃತ ನಮ್ಮ ಒಡಲು ಸೇರುವ ನೈಜ ಅನುಭವವಾಗುತ್ತದೆ. ಪ್ಲಾಸ್ಟಿಕ್ ಸ್ಟ್ರಾ ಭೂ ಒಡಲು ಸೇರಿ ವಿಷಭೂತವಾಗುವುದೂ ತಪ್ಪುತ್ತದೆ.

ಡಿಜಿಟಲ್ ಪಾವತಿ, ಪೇಪರ್ ರಸೀದಿಗೆ ಮುಕ್ತಿ

ಎಟಿಎಂನಿಂದ ಹಣ ಡ್ರಾ ಮಾಡಿದಾಗಲೋ, ಸೂಪರ್ ಮಾರ್ಕೆಟ್‌ನಲ್ಲಿ ಬಿಲ್ ಮಾಡಿದಾಗಲೋ ಕೈಗೆ ಬರುವ ಆ ಬಿಳಿ ಪೇಪರ್‌ನ ಪುಟ್ಟ ಚೂರು ಕೆಲವೇ ನಿಮಿಷಗಳಲ್ಲಿ ಕಸದ ಬುಟ್ಟಿ ಸೇರುವಂಥದ್ದು. ಅದರ ಬದಲು ಮೊಬೈಲ್‌ಗೆ ಬರುವ ಎಸ್‌ಎಂಎಸ್ ನಮಗೆ ಸಾಕೆನಿಸಿದಾಗ, ಆ ಪುಟ್ಟ ಕಾಗದದ ತಯಾರಿಕೆಗೆ ಬಲಿಯಾಗಬೇಕಿದ್ದ ಅದೆಷ್ಟೋ ಕಾಡಿನ ಮರಗಳು ನಿರಾಳವಾಗಿ ಉಸಿರಾಡುತ್ತವೆ.

ಮಳೆ ನೀರನ್ನು ಇಂಗಿಸಿ, ಭೂಮಿಯನ್ನು ನಗಿಸಿ

ಮೊದಲ ಮಳೆಯ ಮಣ್ಣಿನ ವಾಸನೆಗೆ ಮನಸ್ಸು ಸೋಲದವರಿಲ್ಲ, ಆಕಾಶದಿಂದ 'ಧೋ' ಎಂದು ಸುರಿಯುವ ಮಳೆಹನಿಗಳು ಚಾವಣಿಯಿಂದ ಹರಿದು ನೇರವಾಗಿ ಭೂಮಿಯ ಒಡಲು ಸೇರುವಂತೆ ಬಾವಿಗೋ, ಇಂಗುಗುಂಡಿಗೋ ಹರಿಸುವಾಗ ನಾವು ಪ್ರಕೃತಿಯ ಋಣ ತೀರಿಸಿದಂತೆ ಭಾಸವಾಗುತ್ತದೆ. ಆಕಾಶದ ಅತಿಥಿಯನ್ನು ಮನೆ ತುಂಬಿಸಿಕೊಂಡು ಜೋಪಾನ ಮಾಡುವ ಕಲೆ ಇದು. ಭೂತಾಯಿಗೆ ತೀರಿಸುವ ಋಣವೂ ಹೌದು.

ಪಕ್ಷಿಗಳಿಗೆ ಉಚಿತ ರೆಸ್ಟೋರೆಂಟ್

ಕಾಂಕ್ರೀಟ್ ಕಾಡಿನ ಮಧ್ಯೆ ಹಕ್ಕಿಗಳ ಚಿಲಿಪಿಲಿ ಸದ್ದು ಕೇಳಿಸುವುದೇ ಅಪರೂಪವಾಗಿದೆ. ಬಾಲ್ಕನಿಯ ಮೂಲೆಯಲ್ಲೋ, ಕಿಟಕಿಯ ಹಜಾರದಲ್ಲೋ ಮಣ್ಣಿನ ಹಣತೆಯೊಂದರಲ್ಲಿ ನೀರಿಟ್ಟು, ಕಂಕುಳಲ್ಲಿ ಒಂದಿಷ್ಟು ಧಾನ್ಯಗಳನ್ನು ಇಟ್ಟರೆ ಸಾಕು; ಎಲ್ಲೆಲ್ಲಿಂದಲೋ ಬರುವ ಗುಬ್ಬಚ್ಚಿಗಳು, ಪಾರಿವಾಳಗಳು ರೆಕ್ಕೆ ಬಡಿಯುತ್ತಾ ನೀರು ಕುಡಿಯುವ ದೃಶ್ಯ ನಮ್ಮ ಇಡೀ ದಿನದ ಆಯಾಸವನ್ನು ಮರೆಸುತ್ತದೆ. ನಿಸರ್ಗದ ಜೀವಸಂಕುಲಗಳಿಗೆ ಗೆಳೆಯರಾಗಿ ಬದುಕೋಣ.

ತಟ್ಟೆಯಲ್ಲಿ ಅನ್ನ ಬಿಡಬೇಡಿ

ಕಣ್ಣು ಮತ್ತು ಹಸಿವಿನ ನಡುವೆ ಸಣ್ಣದೊಂದು ಯುದ್ಧ ಯಾವಾಗಲೂ ಇದ್ದಿದ್ದೇ. ಹೋಟೆಲ್‌ಗೆ ಹೋದಾಗ ಹಸಿವಿನ ಆತುರಕ್ಕೆ ಸಿಕ್ಕಾಪಟ್ಟೆ ಆರ್ಡರ್ ಮಾಡಿ, ನಂತರ ತಟ್ಟೆಯಲ್ಲಿ ಅನ್ನ ಬಿಟ್ಟು ಏಳುವಾಗ ಮನಸ್ಸಿಗೆ ಎಲ್ಲೋ ಒಂದು ಕಡೆ ಅಪರಾಧಪ್ರಜ್ಞೆ ಕಾಡುತ್ತದೆ. ತಟ್ಟೆಗೆ ಬಿದ್ದ ಅನ್ನದ ಪ್ರತಿ ಅಗುಳು ಕೂಡ ರೈತನ ಶ್ರಮದ ಕಥೆ ಹೇಳುತ್ತದೆ. ಬೇಕಿದ್ದಷ್ಟೇ ಉಣ್ಣುವ ಹದ ಬದುಕಿಗೂ ಒಳ್ಳೆಯದು. ಕೇವಲ ಹೋಟೆಲ್ ಅಲ್ಲ; ಮನೆಯಲ್ಲೂ ಇದನ್ನು ರೂಢಿಸಿಕೊಳ್ಳಿ.

ಹಲ್ಲುಜ್ಜುವಾಗ ನಲ್ಲಿ ಆಫ್ ಇರಲಿ

ಬೆಳಗ್ಗೆ ಎದ್ದು ಕನ್ನಡಿಯ ಮುಂದೆ ನಿಂತು ಹಲ್ಲುಜ್ಜುವಾಗ ಆ ಎರಡು ನಿಮಿಷಗಳು ನಾವ್ಯಾವುದೋ ಆಲೋಚನೆಯ ಜಗತ್ತಿನಲ್ಲಿರುತ್ತೇವೆ. ಆ ಹೊತ್ತಿನಲ್ಲಿ ನಲ್ಲಿಯಿಂದ ನೀರು ಹರಿದು ಹೋಗುತ್ತಿದ್ದರೂ ಅದರ ಅರಿವು ನಮಗಾಗದು. ಬ್ರಶ್ ಮಾಡುವಾಗ ನಲ್ಲಿಯನ್ನು ಬಂದ್ ಮಾಡಿ, ಕೊನೆಯಲ್ಲಿ ಮಾತ್ರ ಆನ್ ಮಾಡುವ ಪುಟ್ಟ ಎಚ್ಚರವೇ ನೀರಿನ ಮೇಲಿನ ಪರಮ ಕಾಳಜಿ.

ಆರ್‌ಒ ತ್ಯಾಜ್ಯ ನೀರಿನ ಮರುಬಳಕೆ

ಮನೆಯಲ್ಲಿನ ಆರ್‌ಒ ವಾಟರ್ ಫಿಲ್ಟರ್ ಆನ್ ಆದಾಗ ಒಂದು ಕಡೆ ಶುದ್ಧ ನೀರು ಸಿಕ್ಕರೆ, ಮತ್ತೊಂದು ಪೈಪ್‌ನಿಂದ ನೀರು ಸದ್ದಿಲ್ಲದೆ ತ್ಯಾಜ್ಯದ ಪಾಲಾಗುತ್ತಿರುತ್ತದೆ. ಆ ಪೈಪ್‌ನ ಕೆಳಗೆ ಒಂದು ಹಳೆಯ ಬಕೆಟ್ ತಂದು ಇಟ್ಟರೆ ಸಾಕು, ಆ ನೀರು ತಾನಾಗಿಯೇ ತುಂಬಿಕೊಳ್ಳುತ್ತದೆ. ಅದನ್ನು ತಂದು ಮನೆಯ ನೆಲ ಒರೆಸಲು ಬಳಸಿದಾಗ ಅಥವಾ ಗಿಡದ ಬುಡಕ್ಕೆ ಸುರಿದಾಗ ಆ ವ್ಯರ್ಥ ಹನಿಯೂ ಸಾರ್ಥಕತೆ ಪಡೆದುಕೊಳ್ಳುತ್ತದೆ.

ಆನ್‌ಲೈನ್ ಶಾಪಿಂಗ್ ಹುಚ್ಚಿಗೆ ಬ್ರೇಕ್ ಹಾಕಿ

ಒಂದು ಪುಟ್ಟ ವಸ್ತುವಿಗೂ ಮೊಬೈಲ್‌ನಲ್ಲಿ ಕ್ಲಿಕ್ ಮಾಡಿ ಆನ್‌ಲೈನ್ ಶಾಪಿಂಗ್ ಮಾಡುವಾಗ ಮನೆಗೆ ಬರುವ ದೊಡ್ಡ ಪ್ಲಾಸ್ಟಿಕ್ ಬಾಕ್ಸ್, ಬಬಲ್ ರಾಪ್‌ಗಳು ಮನೆಯಲ್ಲಿ ಕಸದ ರಾಶಿಯನ್ನೇ ಸೃಷ್ಟಿಸುತ್ತವೆ. ಅದರ ಬದಲು ಸಂಜೆ ಹೊತ್ತು ನೆರೆಹೊರೆಯ ಅಂಗಡಿಗೆ ನಿಧಾನವಾಗಿ ನಡೆದುಕೊಂಡು ಹೋಗಿ ವಸ್ತು ಖರೀದಿಸುವಾಗ, ಅಂಗಡಿಯವನ ಪರಿಚಯದ ಮುಗುಳ್ನಗೆಯೂ ಸಿಗುತ್ತದೆ, ಪ್ಯಾಕಿಂಗ್ ಕಸವೂ ಉಳಿಯುತ್ತದೆ.

ಎಐ ಬಳಕೆಗೆ ಮಿತಿ ಇರಲಿ, ಪರಿಸರ ಉಳಿಯಲಿ

ಇತ್ತೀಚಿನ ದಿನಗಳಲ್ಲಿ ಸಣ್ಣಪುಟ್ಟ ಇಮೇಲ್ ಬರೆಯುವುದಕ್ಕೂ, ಕಲ್ಪನೆಗಳ ಹುಡುಕಾಟಕ್ಕೂ ನಾವು ತಕ್ಷಣ ಮೊಬೈಲ್‌ನಲ್ಲಿ 'ಎಐ' ಮೊರೆ ಹೋಗುತ್ತಿದ್ದೇವೆ. ಆದರೆ, ನಮ್ಮ ಪ್ರತಿಯೊಂದು ಡಿಜಿಟಲ್ ಹುಡುಕಾಟದ ಹಿಂದೆಯೂ ಎಲ್ಲೋ ದೂರದ ಡೇಟಾ ಸೆಂಟರ್‌ಗಳಲ್ಲಿನ ಸೂಪರ್ ಕಂಪ್ಯೂಟರ್‌ಗಳು ಹಗಲಿರುಳು ಕೆಲಸ ಮಾಡುತ್ತಿರುತ್ತವೆ ಮತ್ತು ಅವುಗಳನ್ನು ತಂಪಾಗಿಸಲು ಲಕ್ಷಾಂತರ ಲೀಟರ್ ನೀರು ಹಾಗೂ ವಿದ್ಯುತ್ ವ್ಯರ್ಥವಾಗುತ್ತದೆ. ನಮ್ಮದೇ ಆದ ಆಲೋಚನೆಗಳಿಗೆ, ಕಲ್ಪನೆಗಳಿಗೆ ಕೊಂಚ ಜಾಗ ನೀಡಿ, ಎಐ ಬಳಕೆಯನ್ನು ಅಗತ್ಯವಿದ್ದಷ್ಟೇ ಮಿತವಾಗಿ ಬಳಸುವ ವಿವೇಕ ನಮ್ಮದಾಗಲಿ; ಅದು ನಮ್ಮ ಮಿದುಳಿಗೂ ಒಳ್ಳೆಯದು, ಪ್ರಕೃತಿಗೂ ಹಿತ.

ಪ್ರಕೃತಿಯ ಒಡನಾಟವೇ ಮನುಕುಲದ ಕೊನೆಯ ರಕ್ಷಾಕವಚ

ಜೀವಯಾನ
ಪ್ರಸನ್ನ ಆಡುವಳ್ಳಿ

''ಈ ಪುಸ್ತಕವೇನಾದರೂ ಎರಡನೇ ಮಹಾಯುದ್ಧ ಕಾಲದಲ್ಲಿ ನೇತಾಜಿಯವರ ಸೈನ್ಯದಲ್ಲಿದ್ದ ಭಾರತೀಯರಿಗೆ ಸಿಕ್ಕಿದ್ದರೆ ನಮ್ಮವರ ಸಾವು- ನೋವು ಸ್ವಲ್ಪವಾದರೂ ಕಡಿಮೆಯಾಗುತ್ತಿತ್ತೇನೋ,'' ಎಂದು ನಿಟ್ಟುಸಿರು ಬಿಟ್ಟರು ಡಾ. ನೃಪಮ್ ಓಡ್ಯೋ. ಅವರು ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ ಭಾರತೀಯ ಸಸ್ಯ ಸರ್ವೇಕ್ಷಣಾ ಸಂಸ್ಥೆಯ ಮುಖ್ಯಸ್ಥರು. ದೇಶದ ಹಿರಿಯ ಸಸ್ಯ ವಿಜ್ಞಾನಿಗಳಲ್ಲೊಬ್ಬರು. ಕಳೆದ ಹತ್ತು ವರ್ಷಗಳಿಂದ ಈಶಾನ್ಯ ರಾಜ್ಯಗಳ ಕಾಡು ಮೇಡು ಅಲೆದು, ಅಲ್ಲಿನ ವಿವಿಧ ಬುಡಕಟ್ಟು ಜನರ ಆಹಾರ ಸಂಸ್ಕೃತಿಯನ್ನು ಅಧ್ಯಯನ ಮಾಡಿ, ಅಲ್ಲಿನ ತಿನ್ನಬಹುದಾದ ಹಾಗೂ ತಿನ್ನಬಾರದ ಸಸ್ಯಗಳ ವಿವರಗಳನ್ನು ಜತನವಾಗಿ ದಾಖಲಿಸಿದ ಪುಸ್ತಕವದು.

ಎರಡನೇ ಮಹಾಯುದ್ಧ ಕಾಲದಲ್ಲಿ ನೇತಾಜಿಯವರ ನೇತೃತ್ವದಲ್ಲಿ ಭಾರತೀಯರ ಸೈನ್ಯ ಜಪಾನ್ ಬೆಂಬಲದೊಂದಿಗೆ ಅಂಡಮಾನ್ ಹಾಗೂ ನಮ್ಮ ಈಶಾನ್ಯ ರಾಜ್ಯಗಳಲ್ಲಿ ಬ್ರಿಟಿಷ್ ಸೈನ್ಯದೊಂದಿಗೆ ಸೆಣಸಾಡಿದ್ದರಷ್ಟೇ. ಈಶಾನ್ಯ ರಾಜ್ಯಗಳ ದುರ್ಗಮ ಬೆಟ್ಟ ಕಣಿವೆಗಳಲ್ಲಿದ್ದ ಸೈನಿಕರಿಗೆ ಅಲ್ಲಿ ಬದುಕುವುದೇ ಕಷ್ಟವಿತ್ತು. ಸೈನ್ಯ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗುತ್ತಿರುವಾಗ ಜತೆಗೆ ಸಾಕಷ್ಟು ಯುದ್ಧೋಪಕರಣಗಳಷ್ಟೇ ಅಲ್ಲ, ಇತರ ಸರಕು- ಸರಂಜಾಮುಗಳನ್ನೂ ಕೊಂಡೊಯ್ಯಬೇಕಷ್ಟೇ? ಖಾಲಿಯಾಗುತ್ತಿದ್ದಂತೆ ಅಕ್ಕಿ- ಬೇಳೆಗಳೂ ಮತ್ತೆಲ್ಲಿಂದಲೋ ಬರಬೇಕು. ದುರ್ಗಮ ಕಾಡಿನ ನಡುವೆ ಇರುವ ಭಾರತೀಯ ಸೈನಿಕರಿಗೆ ಬಹಳಷ್ಟು ಸಲ ಆಹಾರ- ಆಯುಧ ಸಾಗಿಸುವ ದಾರಿಗಳನ್ನೇ ಶತ್ರುಸೈನ್ಯ ಬಂದ್ ಮಾಡುತ್ತಿತ್ತು. ಶತ್ರುಗಳ ಗುಂಡಿಗೆ ಎದೆಯೊಡ್ಡಿ ಸತ್ತವರಷ್ಟೇ ಅಲ್ಲ, ಕಾಡೊಳಗೆ ಆಹಾರ- ಔಷಧಿ ಸಿಗದೇ ರೋಗ- ರುಜಿನ ಬಂದು ಸತ್ತವರೆಷ್ಟೋ. ತಾವು ಹಿಂದೆಂದೂ ನೋಡಿರದ ದುರ್ಗಮ ಕಾಡಿನಲ್ಲಿ, ಅಲ್ಲಿನ ಬುಡಕಟ್ಟು ಜನರ ಆಹಾರ ವಿಧಾನಗಳ ಪರಿಚಯವೂ ಇಲ್ಲದ ಸೈನ್ಯ ಗೆಲ್ಲುವುದು ಕಷ್ಟವೇ ಇತ್ತು. ಹೊರೆ ಹೊರಲು ಬಳಸುತ್ತಿದ್ದ ಕುದುರೆಗಳೇ ಕೆಲವೊಮ್ಮೆ ಆಹಾರವಾದವು. ಬೇಟೆ ಮಾಡಲೂ ಎಲ್ಲರಿಗೂ ಸಾಕಷ್ಟು ತರಬೇತಿ, ಅವಕಾಶ ಇರಲಿಲ್ಲ. ಬಿದಿರಿನ ಕಳಲೆ, ಕಂಡ ಕಾಡು ಹಣ್ಣು, ಹುಲ್ಲು ತಿಂದು ಬದುಕಿದವರ ಕಥೆಗಳು ಆಗಿನ ಪರಿಸ್ಥಿತಿಯ ದಾರುಣತೆಯನ್ನು ಹೇಳುತ್ತವೆ. ಶತ್ರುಗಳ ಆಧುನಿಕ ಸೈನ್ಯದ ಜತೆಗಷ್ಟೇ ಅಲ್ಲ, ತಮ್ಮೊಳಗಿನ ಹಸಿವಿನೊಂದಿಗೂ ಸೆಣಸಬೇಕಿತ್ತು. ಗೆಲುವು ಸುಲಭವಿರಲಿಲ್ಲ.

ಈಗ ಸಾಮಾನ್ಯವಾಗಿ ಸೈನಿಕ ತರಬೇತಿಯಲ್ಲಿ ಇಂಥ ದುರ್ಗಮ ಕಾಡಿನೊಳಗೆ ಅನ್ನಾಹಾರವಿಲ್ಲದೇ ಬದುಕಲು ಬೇಕಾದ ಯುಕ್ತಿಗಳನ್ನೂ ಹೇಳಿಕೊಡಲಾಗುತ್ತದೆ. ಹಾಗಿದ್ದೂ ಪ್ರತಿ ಪ್ರದೇಶದ ಆಹಾರ ಲಭ್ಯತೆಯಲ್ಲಿ ವ್ಯತ್ಯಾಸವಿದೆ. ಅವುಗಳ ಅರಿವು ಅತ್ಯಗತ್ಯ.

ಹೀಗಾಗಿಯೇ ದಶಕದ ಹಿಂದೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (DRDO) ಡಾ. ನೃಪಮ್ ಓಡ್ಯೋ ಅವರಿಗೆ ಈ ಕೆಲಸ ವಹಿಸಿತ್ತು. ಈಶಾನ್ಯ ರಾಜ್ಯಗಳ ಗಡಿ ಪ್ರದೇಶಗಳಲ್ಲಿ ಲಭ್ಯವಿರುವ ವನ್ಯಾಹಾರಗಳ ಪಟ್ಟಿ ಮಾಡಬೇಕಿತ್ತು. ಎಲ್ಲೆಲ್ಲಿ ತಿನ್ನಬಹುದಾದ ಗಿಡಮರ ಬಳ್ಳಿಗಳಿವೆ, ಯಾವ ಕಾಲದಲ್ಲಿ ತಿನ್ನಲು ಸಿಗುತ್ತವೆ, ತಿನ್ನುವ ಬಗೆ ಹೇಗೆ, ಅದರ ಫೋಟೊ ಇತ್ಯಾದಿಗಳ ಜತೆ ದಾಖಲಿಸಬೇಕಿತ್ತು. ಅಲ್ಲದೆ ಚೀನಾ, ಮ್ಯಾನ್ಮಾರ್, ಬಾಂಗ್ಲಾದೇಶಗಳ ಗಡಿಯಲ್ಲಿರುವ ಹತ್ತಾರು ಬುಡಕಟ್ಟು ಸಮೂಹಗಳು ಬಳಸುವ ಸ್ಥಳೀಯ ಆಹಾರ, ಔಷಧಿ ಇತ್ಯಾದಿಗಳನ್ನೂ ದಾಖಲಿಸಿ ನೀಡಬೇಕಿತ್ತು. ಹತ್ತು ವರ್ಷಗಳ ಪ್ರಯತ್ನವಾದ ಈ ಬೃಹತ್ ಮಾಹಿತಿ ಭಂಡಾರ ಈಗ ಭಾರತೀಯ ರಕ್ಷಣಾ ಇಲಾಖೆಯ ಕೈಗೆ ಸಿಕ್ಕಿದೆ. ದುರಿತಕಾಲದಲ್ಲಿ ಕಾಡುತ್ಪನ್ನಗಳನ್ನು ಉಂಡು ಬದುಕಬಹುದಾದ ದಾರಿಯನ್ನು ನಮ್ಮ ಸೈನಿಕರಿಗೆ ಕಲಿಸಲು ಸಾಧ್ಯವಾಗಲಿದೆ. ತಿನ್ನಬಹುದಾದ್ದನಷ್ಟೇ ಅಲ್ಲ, ತಿನ್ನಬಾರದ ವಿಷಕಾರಿ ಗಿಡಗಳನ್ನೂ ಇದು ದಾಖಲಿಸಿದೆ.

ದೇಶರಕ್ಷಣೆಯ ವಿಷಯದಲ್ಲಿ ಯುದ್ಧೋಪಕರಣಗಳ ಸಂಶೋಧನೆಯಷ್ಟೇ ಅಲ್ಲ, ಗಡಿ ಪ್ರದೇಶಗಳ ಪರಿಸರದ ಬಗ್ಗೆಯೂ ಇಂಥ ಹತ್ತಾರು ಸಂಶೋಧನೆಗಳು, ದಾಖಲೀಕರಣಗಳು ನಡೆಯುತ್ತಿವೆ. ''ನಮ್ಮಲ್ಲಿರಬಹುದಾದ ವನೋತ್ಪನ್ನಗಳ ಮಾಹಿತಿ ಭಂಡಾರ ನೆರೆಯ ಅಥವಾ ಶತ್ರು ದೇಶಗಳಿಗೆ ಸಿಗದಂತೆ ನೋಡಿಕೊಳ್ಳುವುದು ಅಗತ್ಯ. ಹೀಗಾಗಿ ಈ ಮಾಹಿತಿ ಮುಕ್ತವಾಗಿ ಲಭ್ಯವಿಲ್ಲ,'' ಅಂತಾರೆ ಡಾ. ಓಡ್ಯೋ.

ನಮ್ಮ ಪರಿಸರದ ಪ್ರಾಣಿ, ಪಕ್ಷಿ, ಗಿಡ, ಮರ, ಗುಡ್ಡ, ಬೆಟ್ಟ, ನದಿಗಳಷ್ಟೇ ನಮ್ಮ ಅಮೂಲ್ಯ ಸಂಪನ್ಮೂಲಗಳಲ್ಲ, ಅದರ ಜತೆಗೆ ಅವುಗಳ ಉಪಯೋಗಗಳ ಬಗೆಗಿನ ಮಾಹಿತಿಯೂ ಅಮೂಲ್ಯ. ನಮ್ಮಲ್ಲಿ ಎಷ್ಟೆಲ್ಲ ಬಗೆಯ ಔಷಧೀಯ ಗಿಡಗಳಿವೆ! ಅವುಗಳನ್ನು ಬಳಸಲು ಬಲ್ಲ ಪಾರಂಪರಿಕ ಗ್ರಾಮವೈದ್ಯರಿದ್ದಾರೆ. ಮನೆಯಂಗಳದ ಸೊಪ್ಪು ಬಿಡಿಸಿ ತಂದು ಹತ್ತಾರು ಬಗೆಯ ಖಾದ್ಯ ಮಾಡುವ ನಮ್ಮ ಹಳ್ಳಿಗರ ಜ್ಞಾನ ಭಂಡಾರವೂ ಅಮೂಲ್ಯವಾದದ್ದು. ಕಪ್ಪತಗುಡ್ಡದ ಔಷಧೀಯ ಗಿಡಗಳನ್ನಷ್ಟೇ ಅಲ್ಲ, ಅದರ ಉಪಯೋಗ ಬಲ್ಲ ವೈದ್ಯರನ್ನೂ ಗುರುತಿಸಬೇಕಿದೆ. ಬಗೆಬಗೆಯ ತಂಬುಳಿ ಮಾಡಬಲ್ಲ ಸಸ್ಯಗಳನ್ನಷ್ಟೇ ಅಲ್ಲ, ಅವನ್ನು ಮಾಡಲು ತಿಳಿದ ಮಲೆನಾಡಿನ ಅಮ್ಮಂದಿರ ಜ್ಞಾನವೂ ಮುಂದುವರಿಯಬೇಕಿದೆ.

ಪರಿಸರ ಎಂದರೆ ಭೌತಿಕ ಪ್ರಕೃತಿಯಷ್ಟೇ ಅಲ್ಲ, ಅದರೊಡನೆ ಶತಮಾನಗಳ ಕಾಲ ಬದುಕುತ್ತಾ ನಮ್ಮವರು ಕಲಿತ ಪಾಠಗಳೂ ಅಷ್ಟೇ ಅಮೂಲ್ಯವಾದವು. ನಮ್ಮೊಡನೆಯೇ ನೂರೆಂಟು 'ಕರ್ವಾಲೋ' ಕಾದಂಬರಿಯ ಮಂದಣ್ಣನಂಥವರಿದ್ದಾರೆ. ಮದ್ದು ಕೊಡುವ ಅಜ್ಜನಿಂದ ಹಿಡಿದು ಸದ್ದು ಕೇಳಿ ಕಾಡಿನ ಕತೆ ಹೇಳಬಲ್ಲವರಿದ್ದಾರೆ. ಹುಳ ನೋಡಿ ಮಳೆ- ಬರದ ಅಂದಾಜು ಮಾಡಬಲ್ಲ ಹವಾಮಾನ ತಜ್ಞರಿದ್ದಾರೆ. ವನ್ಯ ಸಂಪತ್ತು ಉಳಿದರೂ ಅದರ ಜ್ಞಾನ ಅಳಿವಿನತ್ತ ಸಾಗುತ್ತಿದೆ.

ಕರ್ನಾಟಕದಲ್ಲಿ ಅತ್ತ ಕರಾವಳಿಯಲ್ಲಿ, ಇತ್ತ ಮಲೆನಾಡಿನಲ್ಲಿ ನೂರೆಂಟು ಯೋಜನೆಗಳು ಅಭಿವೃದ್ಧಿಯ ಹೆಸರಲ್ಲಿ ಕಾಲೂರುತ್ತಿವೆ. ಉತ್ತರ ಕರ್ನಾಟಕವೂ ಮರುಭೂಮಿಯಾಗುತ್ತಿದೆ. ಈ ನಡುವೆ ನೆಲಜಲವನ್ನು ಬಲಿ ಕೊಡುವ ನೂರೆಂಟು ಪ್ರಸ್ತಾವನೆಗಳು ನಮ್ಮ ಸರಕಾರಗಳ ಮುಂದಿವೆ. ಅಭಿವೃದ್ಧಿಯ ಈ ಅಬ್ಬರದಲ್ಲಿ ನಾವು ಕೇವಲ ಕಾಡನ್ನು ಮಾತ್ರವಲ್ಲ, ತಲೆಮಾರುಗಳಿಂದ ಬೆಳೆದುಬಂದ 'ಬದುಕುಳಿಯುವ ಕಲೆ'ಯನ್ನು ಕಳೆದುಕೊಳ್ಳುತ್ತಿದ್ದೇವೆ. ಹವಾಮಾನ ವೈಪರೀತ್ಯ ಹಾಗೂ ಜಾಗತಿಕ ಸಂಕಷ್ಟಗಳ ಇಂದಿನ ಕಾಲದಲ್ಲಿ, ಪ್ರಕೃತಿಯ ಒಡನಾಟದ ಈ ಪಾರಂಪರಿಕ ಜ್ಞಾನವೇ ಮಾನವಕುಲದ ನಿಜವಾದ ರಕ್ಷಾಕವಚ.

ಪರಿಸರದ ವಿಷಯದಲ್ಲಿ ವೈಜ್ಞಾನಿಕ ವೇದಿಕೆಗಳಲ್ಲಿ ವಿಜ್ಞಾನಿಗಳು ಚರ್ಚಿಸುವ ವಿಷಯಗಳಷ್ಟೇ ಅಲ್ಲ, ಬಿದಿರಕ್ಕಿ ಹೆಕ್ಕಿ, ಗಡ್ಡೆಗೆಣಸು ತಿಂದು ಬರ ನೀಗಿದ ಬಡಬೋರೇಗೌಡನ ಅನುಭವವೂ ಅಮೂಲ್ಯವಾದುದು. ಕಾಡಿನ ರಹಸ್ಯ ತಿಳಿದಿರುವ ಸ್ಥಳೀಯ ಜನರನ್ನು ನಾವು ಕೇವಲ ಅರಣ್ಯವಾಸಿಗಳೆಂದು ಒಕ್ಕಲೆಬ್ಬಿಸದೇ, ಪರಿಸರ ವಿಜ್ಞಾನದ ಜೀವಂತ ಗ್ರಂಥಾಲಯಗಳೆಂದು ಗೌರವಿಸಬೇಕಿದೆ. ವನ್ಯಜೀವಿಗಳನ್ನಷ್ಟೇ ಅಲ್ಲ, ವನ್ಯಜ್ಞಾನವನ್ನೂ ಉಳಿಸುವ ಕೆಲಸ ಆಗಬೇಕಿದೆ. ಶತಮಾನಗಳ ಸಹಬಾಳ್ವೆಯ ಫಲವಾದ ಈ ಜ್ಞಾನದ 'ಅರಿವಿನ ಅಳಿವು' ಆಗದಂತೆ ತಡೆಯಬೇಕಿದೆ. ಈ ನಿಟ್ಟಿನಲ್ಲಿ ಹೊಸ ಸರಕಾರದಿಂದ ಹೊಸ ನಿರೀಕ್ಷೆಗಳನ್ನು ಇಟ್ಟುಕೊಳ್ಳಬಹುದೇ?

(ಲೇಖಕರು: ಪರಿಸರ ವಿಜ್ಞಾನಿ)

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74 /2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಶುಕ್ರವಾರ,5 ಜೂನ್ 2026 | ಪುಟಗಳು: 17+4 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 155
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಇಂದು ವಿಶ್ವಪರಿಸರ ದಿನ

ಕೇಂದ್ರ ಗೃಹ ಸಚಿವಾಲಯದ ವಿರುದ್ಧ ಪ್ರಚೋದನಕಾರಿ ಹೇಳಿಕೆ: ಮಮತಾ ಬ್ಯಾನರ್ಜಿ ವಿರುದ್ಧ ಎಫ್‌ಐಆರ್

ಶುಭಾ ಪೂಂಜಾ ದಾಂಪತ್ಯದಲ್ಲಿ ಬಿರುಕು?
» ಲವಲVK ನೋಡಿ

ಟಿವಿಕೆಗೆ ಬೆಂಬಲ: ಜೂನ್ 8ರಂದು ನಡೆಯಲಿರುವ ಐಎನ್‌ಡಿಐಎ ಮೈತ್ರಿಕೂಟದ ಸಭೆಗೆ ಡಿಎಂಕೆ ಗೈರು

THE BIGGEST JEWELLERY SALE OF THE YEAR

ಜೋಯಾಲುಕ್ಕಾಸ್

SHOP NOW

ನಂಬಲಾಗದ ಫ್ಲಾಟ್
40% OFF
ಎಲ್ಲಾ ಆಭರಣಗಳ ಮಜೂರಿಯ ಮೇಲೆ

ಚಿನ್ನ, ವಜ್ರ, ಅನ್‌ಕಟ್ ವಜ್ರ, ಪ್ಲಾಟಿನಂ
ಅಮೂಲ್ಯ ಹರಳು ಮತ್ತು ಬೆಳ್ಳಿ ಆಭರಣ

ಆಫರ್ 14ನೇ ಜೂನ್ ವರೆಗೆ ಅನ್ವಯ

ಭಾರತ ಇನ್ನಷ್ಟು ಬಲವಾಗಿ ಬೆಳಗಲು
ನಿಮ್ಮ ಹಳೆಯ ಚಿನ್ನ ನೆರವಾಗುತ್ತದೆ

ಜೋಯಾಲುಕ್ಕಾಸ್‌ನಲ್ಲಿ ನಿಮ್ಮ ಹಳೆಯ ಚಿನ್ನವನ್ನು ಸಮಕಾಲೀನ ಆಭರಣಗಳಾಗಿ ಮರುಕಲ್ಪಿಸಿ ಮತ್ತು ಭಾರತದ ಅಮೂಲ್ಯ ಆಸ್ತಿಯನ್ನು ಸುಭದ್ರವಾಗಿ ಮುಂದುವರಿಸಿ.

ತ್ವರಿತ ನಗದು
ಯಾವುದೇ ಜ್ಯುವೆಲ್ಲರಿಯ ನಿಮ್ಮ ಹಳೆಯ ಚಿನ್ನವನ್ನು ಮಾರಾಟ ಮಾಡಿ, 15 ನಿಮಿಷದಲ್ಲಿ ತ್ವರಿತ ನಗದು ಪಡೆಯಿರಿ.

0% ಕಡಿತ
ಯಾವುದೇ ಜ್ಯುವೆಲ್ಲರಿಯ ಹಳೆಯ ಚಿನ್ನಾಭರಣ ವಿನಿಮಯದ ಮೇಲೆ

*T&C Apply. Not applicable for Gold coins & bars.

SHOP ONLINE @
joyalukkas.com

Joyalukkas
World's favourite jeweller

BENGALURU: M G ROAD • DICKENSON ROAD • JAYANAGAR • MALLESWARAM • MARATHAHALLI • PHOENIX MARKETCITY • KAMMANAHALLI • FORUM SOUTH BENGALURU, PRESTIGE FALCON CITY • HSR LAYOUT • KORAMANGALA • RAJAJINAGAR | MANGALURU • MYSURU • HUBBALLI • SHIVAMOGGA • BELAGAVI • UDUPI • HASSAN • DAVANAGERE • KALABURAGI
INDIA • USA • UK • UAE • KSA • QATAR • BAHRAIN • KUWAIT • OMAN • SINGAPORE • MALAYSIA • AUSTRALIA

ವಿಕೆಸಿ ಸಂಸ್ಥೆಯ ಝೀರೊ ಫುಟ್ ಮಾರ್ಕ್ಸ್‌ಗೆ ಅಮಿತಾಭ್ ಚಾಲನೆ

ಬೆಂಗಳೂರು: ಬಳಸಿ ಬಿಸಾಡುವ ಪಾದರಕ್ಷೆಗಳನ್ನು ಸಂಗ್ರಹಿಸಿ ಅದನ್ನು ಪರಿಸರ ಮಾಲಿನ್ಯವಾಗದಂತೆ ವಿಲೇವಾರಿ ಮಾಡುವ ವಿಶಿಷ್ಟ ಅಭಿಯಾನವನ್ನು ವಿಕೆಸಿ ನಡೆಸುತ್ತಿದೆ. 'ಝೀರೊ ಫುಟ್ ಮಾರ್ಕ್ಸ್' ಎಂಬ ಈ ಆನ್‌ಲೈನ್ ಉಪಕ್ರಮಕ್ಕೆ ಬಾಲಿವುಡ್ ದಂತಕತೆ ಎಂದೆನಿಸಿರುವ ಅಮಿತಾಭ್ ಬಚ್ಚನ್ ಚಾಲನೆ ನೀಡಿದರು. ''ಇದು ಭಾರತದಲ್ಲಷ್ಟೇ ಅಲ್ಲ, ವಿಶ್ವದಲ್ಲಿ ವಿಶಿಷ್ಟ ಕಾರ್ಯಕ್ರಮವಾಗಿದೆ. ಬಳಸಿದ ಪಾದರಕ್ಷೆಗಳಿಗೂ ವಿಶಿಷ್ಟ ಮೌಲ್ಯವಿದೆ ಎಂಬ ಹೊಸ ತತ್ವವನ್ನು ಝೀರೊ ಫುಟ್‌ಮಾರ್ಕ್ಸ್ ಸಾರುತ್ತದೆ,'' ಎಂದು ಅವರು ತಿಳಿಸಿದರು.

''ನಾವು ಮಾಡುವ ಪ್ರತಿಯೊಂದು ಕೆಲಸದಲ್ಲೂ ಜಾಗರೂಕರಾಗಿರಬೇಕು. ಇದಕ್ಕೆ 'ಝೀರೊ ಫುಟ್‌ಮಾರ್ಕ್ಸ್' ಅತ್ಯುತ್ತಮ ಮಾದರಿ,'' ಎಂದು ಅವರು ಹೊಗಳಿದರು. ಅಮಿತಾಭ್ ವಿಕೆಸಿಯ ಬ್ರ್ಯಾಂಡ್ ಅಂಬಾಸಿಡರ್ ಕೂಡ ಆಗಿದ್ದಾರೆ.

ಆಯ್ದ ನಗರಗಳ ಆಯ್ದ ಪಾದರಕ್ಷೆ ಅಂಗಡಿಗಳ ಮೂಲಕ ತ್ಯಾಜ್ಯ ವಿಲೇವಾರಿ ನಡೆಯುತ್ತಿದೆ. ಈ ಯೋಜನೆಯನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ವಿಕೆಸಿ ಸಂಸ್ಥೆ ಅಧ್ಯಕ್ಷ ಮಮ್ಮದ್ ಕೋಯ ತಿರುವನಂತಪುರದಲ್ಲಿ ಆರಂಭಿಸಿದರು ಎಂದು ಮೂಲಗಳು ತಿಳಿಸಿವೆ.

'ಝೀರೊ ಫುಟ್‌ಮಾರ್ಕ್ಸ್' ಅನ್ನು ರೂಪಿಸಿದ ವಿಕೆಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ. ಕೆ. ಸಿ. ರಜಾಕ್ ''ಇದೊಂದು ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವ ಯೋಜನೆ,'' ಎಂದಿದ್ದಾರೆ. www.zerofootmarks.com ನಿಂದ ಹೊಸ ಪಾದರಕ್ಷೆ ಖರೀದಿಸಿ. ಅದನ್ನು ತಂದು ಕೊಡುವವರಿಗೆ ಹಳೆಯ ಪಾದರಕ್ಷೆಗಳನ್ನು ನೀಡಿ ಎಂಬುದು ಸಂಸ್ಥೆಯ ಧ್ಯೇಯ ಎಂದರು.

ಷೇರುಪೇಟೆ ಮಂದಗತಿ ಹೂಡಿಕೆದಾರರ ಜಾಗರೂಕ ನಡೆ

ಮುಂಬಯಿ: ಮಧ್ಯಪ್ರಾಚ್ಯ ಬಿಕ್ಕಟ್ಟು ಹಾಗೂ ವಿದೇಶಿ ನಿಧಿ ಹೊರ ಹರಿವಿನಿಂದ ಹೂಡಿಕೆದಾರರು ಎಚ್ಚರದ ನಡೆ ಇಡುತ್ತಿದ್ದಾರೆ. ಹೀಗಾಗಿ ಗುರುವಾರ ಷೇರುಪೇಟೆ ತೀರ ಅಲ್ಪ ಮಟ್ಟದ ಏರಿಕೆ ಕಂಡಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' ಕೇವಲ 13.84 ಅಂಕ ಏರಿ 74,360.01ರಲ್ಲಿ ಸ್ಥಿರವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 10.95 ಅಂಕ ಏರಿ 23,416.55 ರಲ್ಲಿ ವಹಿವಾಟು ಮುಗಿಸಿತು. ದಿನದ ಒಂದು ಹಂತದಲ್ಲಿ ಭಾರಿ ಏರಿಕೆ ಮತ್ತು ಇಳಿಕೆ ಕೂಡ ದಾಖಲಾಯಿತು. ಶುಕ್ರವಾರ ಆರ್‌ಬಿಐ ಹಣಕಾಸು ನೀತಿ ಸಮಿತಿ ಕೆಲವೊಂದು ನಿರ್ಧಾರಗಳನ್ನು ಪ್ರಕಟಿಸಲಿದೆ. ಇದು ಕೂಡ ಹೂಡಿಕೆದಾರರ ಜಾಗರೂಕ ನಡೆಗೆ ಒತ್ತಾಸೆ ನೀಡಿತು.

ಶೇ. 79 ಮಂದಿಗೆ ತಾಪತ್ರಯ | ವ್ಯಾಪಾರ, ವ್ಯವಹಾರ, ಸೇವಾ ವಲಯಕ್ಕೆ ನಷ್ಟ | ವೃತ್ತಿಪರ ಇಮೇಜ್ ಜಖಂ

ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಕರೆ ಕಡಿತ ಕಂಟಕ

ಹೊಸದಿಲ್ಲಿ: ನಿತ್ಯ ಸಂಚರಿಸುವ ಹೆದ್ದಾರಿಗಳು, ಮೆಟ್ರೊ, ಕಡಿಮೆ ಸಿಗ್ನಲ್ ಇರುವ ಸ್ಥಳಗಳಲ್ಲಿ ಕರೆ ಮಾಡುವ ಪ್ರತಿ 10 ಸ್ಮಾರ್ಟ್‌ಫೋನ್ ಬಳಕೆದಾರರ ಪೈಕಿ 8 ಮಂದಿಗೆ ಅಂದರೆ ಶೇ. 79ರಷ್ಟು ಬಳಕೆದಾರರಿಗೆ ಕಾಲ್ ಡ್ರಾಪ್ ಆಗುತ್ತದೆ. ಇದು ಸಾಮಾನ್ಯ ತೊಂದರೆಯಲ್ಲ, ನೆಟ್‌ವರ್ಕ್ ತುಂಡಾಗುವುದರಿಂದ ವ್ಯಾಪಾರ, ವ್ಯವಹಾರ ಮತ್ತು ಸೇವಾ ವಲಯದಲ್ಲಿ ವ್ಯಾಪಕ ನಷ್ಟವಾಗುತ್ತಿದೆ. ವೃತ್ತಿಪರರು ಬಗ್ಗೆ ಆಗುವುದಷ್ಟೇ ಅಲ್ಲ, ಮಾನಸಿಕವಾಗಿಯೂ ಕುಗ್ಗುತ್ತಿದ್ದಾರೆ ಎಂದು ಸೈಬರ್ ಮೀಡಿಯಾ ರಿಸರ್ಚ್ ವರದಿ ತಿಳಿಸಿದೆ.

ಹೊಸದಿಲ್ಲಿ, ಬೆಂಗಳೂರು, ಮುಂಬಯಿ, ಕೋಲ್ಕೊತಾ ನಗರಗಳಲ್ಲಿ ಸಾವಿರಾರು ಸ್ಮಾರ್ಟ್‌ಫೋನ್ ಬಳಕೆ ಮಾಡುವವರ ಸಮೀಕ್ಷೆ ಮಾಡಿದಾಗ ಈ ಸಂಗತಿ ಬಯಲಾಗಿದೆ. ''ಮೊಬೈಲ್ ನೆಟ್‌ವರ್ಕ್ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಭಾರತ ದೊಡ್ಡ ಸಾಧನೆ ಮಾಡಿದೆ ಆದರೆ ಅಡಚಣೆ ಇಲ್ಲದ ನಿರಂತರ ಸಂಪರ್ಕ ದೊಡ್ಡ ಸವಾಲಿನ ಸಂಗತಿಯಾಗಿದೆ,'' ಎಂದು ಸಿಎಂಆರ್ ಇಂಡಸ್ಟ್ರಿ ರಿಸರ್ಚ್ ಗ್ರೂಪ್ ವಿಪಿ ಪ್ರಭು ರಾಮ್ ತಿಳಿಸಿದ್ದಾರೆ.

''ವ್ಯಾಪಾರ ಅಥವಾ ವ್ಯವಹಾರಕ್ಕಾಗಿ ಫೋನ್ ಬಳಸುವವರ ಪೈಕಿ ಶೇ. 64 ರಷ್ಟು ಮಂದಿ, ಕಾಲ್ ಡ್ರಾಪ್‌ನಿಂದಾಗಿ ತಮಗೆ ಸಿಗಬೇಕಿದ್ದ ಮಾರಾಟದ ಅವಕಾಶ ತಪ್ಪಿ ಹೋಗಿದೆ ಎಂದಿದ್ದಾರೆ. ಕ್ಲೈಂಟ್‌ಗಳನ್ನು ಕಳೆದುಕೊಂಡಿದ್ದೇವೆ,'' ಎಂದು ಮೂವರಲ್ಲಿ ಇಬ್ಬರು ನೋವಿನಿಂದ ನುಡಿದಿದ್ದಾರೆ. ''ಮಾತುಕತೆ ನಿರ್ಣಾಯಕ ಘಟ್ಟದಲ್ಲಿದ್ದಾಗ ಕರೆ ತುಂಡಾದಾಗ ಎಲ್ಲವೂ ಮುರಿದು ಬೀಳುತ್ತದೆ. ಆತಂಕ ಮತ್ತು ಅಸಹಾಯಕತೆ ಮಾತ್ರ ಭದ್ರವಾಗಿರುತ್ತದೆ,'' ಎಂದು ಶೇ. 83 ಸ್ಮಾರ್ಟ್ ಮಂದಿ ಹೇಳಿಕೊಂಡಿದ್ದಾರೆ.

''ಕರೆ ಕಡಿತಗೊಂಡ ನಂತರ ಮತ್ತೆ ಕರೆ ಮಾಡುವುದರಿಂದ ನಮ್ಮ ವೃತ್ತಿಪರ ಇಮೇಜ್‌ಗೆ ಧಕ್ಕೆಯಾಗುತ್ತದೆ,'' ಎಂದು ಶೇ. 71 ಮಂದಿ ತಿಳಿಸಿದ್ದಾರೆ.

ನೆಟ್‌ವರ್ಕ್ ಸಂಪರ್ಕವನ್ನು ಉತ್ತಮಗೊಳಿಸಲು ಸ್ಮಾರ್ಟ್‌ಫೋನ್ ವಿನ್ಯಾಸವು ಪ್ರಮುಖ ಪಾತ್ರ ವಹಿಸಬಹುದು ಎಂದು ವರದಿ ಹೇಳಿದೆ. ಡ್ಯುಯಲ್-ಸಿಗ್ನಲ್ ಚಿಪ್‌ಸೆಟ್ ಟೆಕ್ನಾಲಜಿ (ಫೋವಾ ಸರಣಿ) ಹೊಂದಿರುವ ಸ್ಮಾರ್ಟ್‌ಫೋನ್ ಬಳಸುವವರಿಗೆ ಸಂಪರ್ಕ ತುಂಡಾಗುವ ತೊಂದರೆ ತಪ್ಪಿದೆ ಎಂದು ವರದಿ ಗಮನ ಸೆಳೆದಿದೆ.

ಸುಮಾರು ಶೇ. 74ರಷ್ಟು ಜನರು ಹೆದ್ದಾರಿ ಪ್ರಯಾಣದ ಸಮಯದಲ್ಲಿ ಹೆಚ್ಚು ವಿಶ್ವಾಸಾರ್ಹ ಕರೆ ಅನುಭವವನ್ನು ಪಡೆದಿದ್ದಾರೆ ಮತ್ತು ಶೇ. 72ರಷ್ಟು ಜನರು ಕಡಿಮೆ ನೆಟ್‌ವರ್ಕ್ ವ್ಯಾಪ್ತಿಯ ಪ್ರದೇಶಗಳನ್ನು ದಾಟಿದ ನಂತರ ಸಿಗ್ನಲ್ ವೇಗವಾಗಿ ಮತ್ತೆ ಸಂಪರ್ಕಕ್ಕೆ ಸಿಗುತ್ತದೆ ಎಂದು ತಿಳಿಸಿದ್ದಾರೆ.

ಡಿಆರ್‌ಎಎಂ ಮತ್ತು ನ್ಯಾಂಡ್ ಫ್ಲ್ಯಾಶ್ ಮೆಮೊರಿ ಬೆಲೆಗಳ ಏರಿಕೆಯಿಂದಾಗಿ 2026ರ ಮೊದಲ ತ್ರೈಮಾಸಿಕದಲ್ಲಿ ಭಾರತದ ಸ್ಮಾರ್ಟ್‌ಫೋನ್ ಬೇಡಿಕೆ ಶೇ. 2ರಷ್ಟು ಇಳಿಕೆಯಾಗಿದೆ. ಇತ್ತೀಚಿನ ವರ್ಷಗಳಲ್ಲೇ ಅತ್ಯಂತ ದುರ್ಬಲ ತ್ರೈಮಾಸಿಕ ಕಾರ್ಯಕ್ಷಮತೆಯನ್ನು ದಾಖಲಿಸಿದೆ ಎಂದು ಸಿಎಮ್‌ಆರ್‌ನ ಮಾಹಿತಿ ತಿಳಿಸಿದೆ.

ಮೆಮೊರಿ ಬೆಲೆಗಳ ಈ ಏರಿಕೆಯು ಮೊಬೈಲ್ ಸಾಧನಗಳ ಬೆಲೆ ಹೆಚ್ಚಾಗುವಂತೆ ಮಾಡಿದೆ, ಇದರಿಂದಾಗಿ ಬಜೆಟ್ ಬಗ್ಗೆ ಹೆಚ್ಚು ಗಮನ ಹರಿಸುವ ಗ್ರಾಹಕರು ಹೊಸ ಫೋನ್‌ಗಳಿಗೆ ಅಪ್‌ಗ್ರೇಡ್ ಮಾಡಿಕೊಳ್ಳುವುದನ್ನು ಮುಂದೂಡುತ್ತಿದ್ದಾರೆ.

ನೆಟ್‌ವರ್ಕ್ ವ್ಯಾಪ್ತಿ ವಿಸ್ತರಣೆ
ಅಡಚಣೆ ರಹಿತ ಸಂಪರ್ಕ ದೊಡ್ಡ ಸವಾಲು

ರಾಜೇಶ್ ಎಕ್ಸ್‌ಪೋರ್ಟ್ಸ್ ಷೇರುಗಳ ಕುಸಿತ

ಹೊಸದಿಲ್ಲಿ: ಚಿನ್ನದ ಸಂಸ್ಕರಣೆ ಮತ್ತು ರಫ್ತಿನಲ್ಲಿ ಮುಂಚೂಣಿಯಲ್ಲಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಕಂಪನಿಯ ಷೇರುಗಳು ಗುರುವಾರ ಶೇ.5ರಷ್ಟು ಕುಸಿತ ಕಂಡಿತು. ಇದರಿಂದ ಈ ಕಂಪನಿಯಲ್ಲಿ ಪಾಲುದಾರಿಕೆ ಇರುವ ಎಲ್‌ಐಸಿ ಷೇರುಗಳಲ್ಲೂ ಇಳಿಕೆ ಟ್ರೆಂಡ್ ಕಂಡು ಬಂದಿತು.

ಹಣ ದುರುಪಯೋಗ ಆರೋಪದಿಂದ ಸೆಬಿ ಕ್ರಮ

''ರಾಜೇಶ್ ಎಕ್ಸ್‌ಪೋರ್ಟ್ಸ್ ಭಾರಿ ಪ್ರಮಾಣದಲ್ಲಿ ಹಣಕಾಸು ದುರುಪಯೋಗ ಪಡಿಸಿಕೊಂಡಿದೆ. ದುರುದ್ದೇಶ ಪೂರ್ವಕವಾಗಿ ಹಣ ವರ್ಗಾವಣೆಯಾಗಿದೆ. ಹೀಗಾಗಿ ಇದರ ಕಾರ್ಯನಿರ್ವಾಹಕ ಅಧ್ಯಕ್ಷ ರಾಜೇಶ್ ಮೆಹ್ತಾ ಕಂಪನಿಯ ಸೆಕ್ಯುರಿಟೀಸ್ ವಹಿವಾಟು ನಡೆಸುವಂತಿಲ್ಲ,'' ಎಂದು ಸೆಬಿ ಬುಧವಾರ ಮಧ್ಯಂತರ ಆದೇಶ ನೀಡಿತ್ತು.

''ಸೆಬಿ ಮತ್ತು ನಮ್ಮ ನಡುವೆ ಸಂವಹನದ ಕೊರತೆ ಮತ್ತು ಗೊಂದಲ ಇದ್ದುದರಿಂದ ಹೀಗಾಗಿದೆ. ನಾವು ದಾಖಲಿಸಿರುವ ಆದಾಯ ಸರಿಯಾಗಿಯೇ ಇದೆ. ಇದರಲ್ಲಿ ಯಾವುದೇ ತಪ್ಪಾಗಿಲ್ಲ,'' ಎಂದು ಷೇರು ವಿನಿಮಯ ಕೇಂದ್ರಕ್ಕೆ ರಾಜೇಶ್ ಎಕ್ಸ್‌ಪೋರ್ಟ್ಸ್ ಸ್ಪಷ್ಟನೆ ನೀಡಿದೆ. ''ನಾವು ಅಗತ್ಯವಿರುವ ಎಲ್ಲ ದಾಖಲೆಗಳನ್ನು ನೀಡಿ ಸಹಕರಿಸಲಿದ್ದೇವೆ. ಇದನ್ನು ಪರಿಶೀಲಿಸಿ ಸೆಬಿ ಸರಿಯಾದ ತೀರ್ಮಾನಕ್ಕೆ ಬರುತ್ತದೆ ಎಂಬ ವಿಶ್ವಾಸ ನಮಗಿದೆ,'' ಎಂದಿದೆ.

ಸೆಬಿ ವರದಿಯಲ್ಲಿ ಏನಿದೆ?

ಕಂಪನಿಯು ಹಣಕಾಸು ವರ್ಷ 2021 ಮತ್ತು 2025ರ ನಡುವೆ ತೋರಿಸಿರುವ ಒಟ್ಟು ಏಕೀಕೃತ ಆದಾಯದಲ್ಲಿ ಸುಮಾರು 15.15 ಲಕ್ಷ ಕೋಟಿ ರೂ. ತಪ್ಪು ಮಾಹಿತಿಯಿಂದ ಕೂಡಿದೆ. ಅಥವಾ ಸರಿ ಎಂಬುದಕ್ಕೆ ಸೂಕ್ತ ಪುರಾವೆ ಸಿಕ್ಕಿಲ್ಲ ಎಂದು ಸೆಬಿ ಹೇಳಿದೆ. ಈ ಮೊತ್ತವು ಕಂಪನಿಯು ಆ ಅವಧಿಯಲ್ಲಿ ಘೋಷಿಸಿದ ಒಟ್ಟು ಆದಾಯದ ಶೇ. 99.8 ರಷ್ಟಿದೆ. ಕಂಪನಿಯು ಒಟ್ಟು ಆದಾಯದ ಶೇ. 97 ರಿಂದ ಶೇ. 99 ರಷ್ಟು ಭಾಗ ಅದರ ವಿದೇಶಿ ಅಂಗಸಂಸ್ಥೆಯಾದ 'ವ್ಯಾಲ್ಯಂಬ ಎಸ್‌ಎ' ಮೂಲಕವೇ ಬಂದಿದೆ ಎಂದು ತೋರಿಸಲಾಗಿದೆ. ಆದರೆ ವ್ಯಾಲ್ಯಂಬ ಕಂಪನಿಯ ಆಡಿಟ್ ಆದ ಸ್ವತಂತ್ರ ಹಣಕಾಸು ವರದಿಗಳನ್ನು ಪರಿಶೀಲಿಸಿದಾಗ ಅದರಲ್ಲಿ ಕಂಡು ಬಂದಿದ್ದು ಮುಖ್ಯ ಸಂಸ್ಥೆ ತೋರಿಸಿದ ಆದಾಯದ ಕೇವಲ ಒಂದು ಸಣ್ಣ ಭಾಗ ಮಾತ್ರ!

43 ಲಕ್ಷ ಟನ್ ಬೇಳೆ ಕಾಳು ದಾಸ್ತಾನು

ಹೊಸದಿಲ್ಲಿ: ಸರಕಾರದ ಮಳಿಗೆಗಳಲ್ಲಿ 43 ಲಕ್ಷ ಟನ್ ಬೇಳೆ ಕಾಳುಗಳ ಕಾಪು ದಾಸ್ತಾನು ಇದೆ. ಇದರಿಂದ ಎಲ್‌ನಿನೋದಿಂದ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ನಿವಾರಿಸಬಹುದು ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ. ಒಂದು ವೇಳೆ ಎಲ್‌ನಿನೋ ಪ್ರಭಾವದಿಂದ ''ಮುಂಗಾರು ಬಿತ್ತನೆಯ ಮೇಲೆ ಅಲ್ಪ ಪರಿಣಾಮವಾದರೆ, ಈ ಬೇಳೆಕಾಳುಗಳ ದಾಸ್ತಾನನ್ನು ಬಳಸಿಕೊಳ್ಳಲಾಗುವುದು,'' ಎಂದಿದ್ದಾರೆ.

ಎಲ್‌ನಿನೋ ಸವಾಲಿಗೆ ರಕ್ಷೆ

ಸರಕಾರಿ ಮಾಹಿತಿ ಪ್ರಕಾರ ಈಗ ಇರುವ ಬೇಳೆಕಾಳುಗಳ ದಾಸ್ತಾನು ಮೇ 2025ರಲ್ಲಿದ್ದ 18 ಲಕ್ಷ ಟನ್‌ಗಳಿಗಿಂತ ದುಪ್ಪಟ್ಟಾಗಿದೆ ಮತ್ತು ಮೇ 2024ರಲ್ಲಿ ದಾಖಲಾಗಿದ್ದ 21 ಲಕ್ಷ ಟನ್‌ಗಳಿಗಿಂತ ಗಣನೀಯವಾಗಿ ಹೆಚ್ಚಾಗಿದೆ. ದೇಶೀಯ ಉತ್ಪಾದನೆಯನ್ನು ಉತ್ತೇಜಿಸಲು, ಆಮದು ಅವಲಂಬನೆಯನ್ನು ಕಡಿಮೆ ಮಾಡಲು ಮತ್ತು ಗ್ರಾಹಕರನ್ನು ಬೆಲೆ ಏರಿಕೆಯಿಂದ ರಕ್ಷಿಸಲು ಕೇಂದ್ರ ಸರಕಾರ ಹಾಗೂ ತಂದ ನೀತಿಯ ಕಾರಣದಿಂದಾಗಿ ಈ ಬಾರಿ ಇಷ್ಟೊಂದು ದೊಡ್ಡ ಪ್ರಮಾಣದ ಸಂಗ್ರಹ ಸಾಧ್ಯವಾಗಿದೆ.

ಬಂಡವಾಳ ಗಳಿಕೆ ತೆರಿಗೆ ರದ್ದುಗೊಳಿಸಲು ಕೇಂದ್ರ ಚಿಂತನೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ದೇಶದ ಆರ್ಥಿಕತೆಯ ಮೇಲೆ ಉಂಟಾಗುತ್ತಿರುವ ಪ್ರತಿಕೂಲ ಪರಿಣಾಮಗಳನ್ನು ತಗ್ಗಿಸಲು ಕೇಂದ್ರ ಸರಕಾರ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರ ಭಾಗವಾಗಿ ವಿದೇಶಿ ಬಂಡವಾಳದ ಒಳಹರಿವನ್ನು ಹೆಚ್ಚಿಸಲು ವಿದೇಶಿ ಹೂಡಿಕೆದಾರರು, ಸರಕಾರಿ ಬಾಂಡ್‌ಗಳ ಮೇಲಿನ ಹೂಡಿಕೆ ಮೇಲಿನ ಬಂಡವಾಳ ಗಳಿಕೆ ತೆರಿಗೆಯನ್ನು ರದ್ದುಗೊಳಿಸಲು ಮುಂದಾಗಿದೆ ಎನ್ನಲಾಗಿದೆ.

ಈ ತೆರಿಗೆ ವಿನಾಯಿತಿಗೆ ಹಾದಿ ಮಾಡಿಕೊಡಲು ಆದಾಯ ತೆರಿಗೆ ಕಾಯಿದೆಗೆ ತಿದ್ದುಪಡಿ ತರುವ ಸುಗ್ರೀವಾಜ್ಞೆಯನ್ನು ಹೊರಡಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಮೂಲಗಳು ಹೇಳಿವೆ. ಈ ಸುಗ್ರೀವಾಜ್ಞೆಗೆ ರಾಷ್ಟ್ರಪತಿಗಳು ಅಂಕಿತ ಹಾಕಿದ ತಕ್ಷಣ ಅಧಿಕೃತ ಸೂಚನೆ ಹೊರಬೀಳುವ ನಿರೀಕ್ಷೆಯಿದೆ.

ಈಗ ವಿದೇಶಿ ಹೂಡಿಕೆದಾರರು 12 ತಿಂಗಳಿಗಿಂತ ಹೆಚ್ಚು ಅವಧಿಗೆ ಹೊಂದಿರುವ ಪಟ್ಟಿ ಮಾಡಲಾದ ಷೇರುಗಳು ಮತ್ತು ಸರಕಾರಿ ಸೆಕ್ಯೂರಿಟಿಸ್‌ಗಳ ಮೇಲೆ ಶೇ. 12.5 ರಷ್ಟು ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಇದರೊಂದಿಗೆ ಸರಕಾರಿ ಬಾಂಡ್‌ಗಳಿಂದ ಗಳಿಸುವ ಬಡ್ಡಿಯ ಮೇಲೆ ಶೇ. 20 ರಷ್ಟು ಮೂಲದಲ್ಲೇ ಕಡಿತಗೊಳಿಸುವ ತೆರಿಗೆ ಪಾವತಿಸಬೇಕು.

ಖಾಸಗಿ ಹೂಡಿಕೆ ಉತ್ತೇಜಿಸಲು ಕಾರ್ಪೊರೇಟ್ ತೆರಿಗೆ ದರವನ್ನು ಕಡಿತಗೊಳಿಸಲು ಕೇಂದ್ರ ಸರಕಾರ 2019ರಲ್ಲಿ ಇದೇ ರೀತಿ ಸುಗ್ರೀವಾಜ್ಞೆ ಮಾರ್ಗವನ್ನು ಬಳಸಿಕೊಂಡಿತ್ತು ಎಂಬುದು ಗಮನಾರ್ಹ. ಇಂಥ ತೆರಿಗೆಗಳನ್ನು ಇಳಿಸಬೇಕು ಎಂದು ಮಾರುಕಟ್ಟೆ ತಜ್ಞರು ಒತ್ತಾಯಿಸುತ್ತಲೇ ಇದ್ದರು. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ, ಆರ್ಥಿಕತೆಯ ಮೇಲೆ ವಿದೇಶಿ ಹೂಡಿಕೆದಾರರ ವಲಸೆ ತಪ್ಪಿಸಲು ಇಂಥ ಕ್ರಮಗಳು ಅಗತ್ಯ ಎಂದು ತಜ್ಞರ ಅಭಿಪ್ರಾಯ.

ಪ್ರಸಕ್ತ ವರ್ಷ ವಿದೇಶಿ ಹೂಡಿಕೆದಾರರು ಭಾರತೀಯ ಮಾರುಕಟ್ಟೆಯಿಂದ ನಿವ್ವಳ 2.47 ಲಕ್ಷ ಕೋಟಿ ರೂ.ಗಳನ್ನು ಹಿಂತೆಗೆದುಕೊಂಡಿದ್ದಾರೆ. 2025ರಲ್ಲಿ ಈ ಮೊತ್ತ 1.04 ಲಕ್ಷ ಕೋಟಿ ರೂ. ಇತ್ತು.

TIMES interact

Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ADMINISTRATION

EXECUTIVES

ಪಾರ್ಟ್ ಟೈಮ್ ಕೆಲಸ ಬಯಸುವವರು ನೀವು ಇರುವಲ್ಲಿ 1 ಗಂಟೆ ಕೆಲಸ ಮಾಡಿ ಪ್ರತಿದಿನ 500ಗಳಿಂದ ಸಾವಿರ ರೂ ಹಣ ಗಳಿಸುವ ಅವಕಾಶ ಸಂಪರ್ಕಿಸಿ: 97433 09498

SENIOR / TOP MANAGERS

EXCELLENT Career offer Retd Govt/Bank/ Teachers, Housewives, Businessmen. Fixed Salary Incntvs,PF/ ESI benefits. 8197273568 /9480656160

MARKETING, ADVERTISING & SALES

Tele Caller

"REQ, Experienced / Fresher Tele callers, Team Leaders, For Bank Loan collection. Salary 25,000 + Incentive 9620206754 / 7019700755.

OTHER VACANCIES

DRIVERS

DRIVER Reqd for Business Deliveries. Valid DL. Reading & Writing Skills Essential. For Electric e-Loader. Loc. Koramangala B'lore-95: 9972471563.

GENERAL

ನೇರ ನೇಮಕಾತಿ ಅಧಿಸೂಚನೆ: ಭಾರತ ಸರ್ಕಾರದ ಕಾರ್ಪೊರೇಟ್ ಅಫೇರ್ಸ್ ಸಚಿವಾಲಯದ ಅಡಿಯಲ್ಲಿ ನೋಂದಾಯಿತ ದಕ್ಷಿಣಕನ್ನಡ ಬೆಳೆಗಾರರ ಸಾವಯವ ಸಂಯುಕ್ತ ರೈತ ಉತ್ಪಾದಕ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಶಿವಮೊಗ್ಗ, ಮಂಗಳೂರು ಮೂಡಬಿದ್ರೆ , ಕುಂದಾಪುರ, ಸುರತ್ಕಲ್, ಕಾರ್ಕಳ ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭವಾಗಲಿರುವ ಶಾಖೆಗಳಲ್ಲಿ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳು: ಮ್ಯಾನೇಜರ್, ಸಹಾಯಕ ಮ್ಯಾನೇಜರ್, ಕ್ಯಾಶ್ ಅಧಿಕಾರಿ, ಸಾಲ ಅಧಿಕಾರಿ, ಗ್ರಾಹಕ ಸೇವಾ ಅಧಿಕಾರಿ, ಫೀಲ್ಡ್ ಕಲೆಕ್ಷನ್ ಅಧಿಕಾರಿ. ಒಟ್ಟು ಹುದ್ದೆಗಳು: 65 ವೇತನ: ₹18,500 ರಿಂದ ₹45000 (ಅರ್ಹತೆ/ಅನುಭವ ಆಧಾರಿತ ವೇತನ). ಸೌಲಭ್ಯಗಳು: ESI, PF. ಅರ್ಹತಾ ಪ್ರದೇಶ: ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹುದ್ದೆಗಳಿಗೆ ಆಯ್ಕೆಯ ಕೊನೆಯ ದಿನಾಂಕ: 20-06-2026 ಸಂಪರ್ಕಿಸಿ : ಎಸ್. ಸತೀಶ್ ನಾಯಕ್. +919980496533/ 9448627226

ಮನೆಯಿಂದಲೇ ಕೆಲಸ ಡೇಟಾಎಂಟ್ರಿ, ಎಸ್‌ಎಮ್‌ಎಸ್ ಸೆಂಡಿಂಗ್, ಟೆಲಿ ಕಾಲರ್ಸ್, ವರ್ಕ್‌ಗಳಿಗೆ ಮಹಿಳೆಯರಿಗೆ ಪುರುಷರಿಗೆ, ವಿದ್ಯಾರ್ಥಿಗಳಿಗೆ 20,000/25,000, ಸಂ: 7090177446

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರಿಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77608 35029

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

REQD Financial Consultants. Retd Govt officials/VRS/ Tax Consultants/ CA/CS/Auditors/ Bankers/Housewives/ Business Owners: 7204169733

TECHNICAL

ENGINEERS

CIVIL Engineer, 5+ years Experience, Office in Jakkur, Site North B'lore, Computer Knowledge Must. 9343771149 info@behlconstruction.com

SITUATION VACANT

ಬೆಳ್ಳಂದೂರು, ಬೆಂಗಳೂರಿನ ಹೋಟೆಲ್‌ಗೆ ರೂಮ್ ಕ್ಲೀನಿಂಗ್ ಹೆಲ್ಪರ್‌ಗಳು ಬೇಕಾಗಿದ್ದಾರೆ. ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ. 7981086239

JOB WANTED

WANTED Helpers & Sales Man for Ready made Blouse Show Room in Chickpet Age: 18-35 in Showroom activities Manoj Bafna Call: 9448121073

WANTED
Exp Field officer near doddbalapura and office accountant near Bangalore contact: 9845044293

tender & notices

PUBLIC NOTICE

PUBLIC NOTICE

Public are hereby notified that our client, is intending to purchase of the immovable property described in the Schedule hereunder from Sri. Guninder Singh Chandok, Son of Late Sri. Ujagar Singh Chandok Residing at No.3 Nandi Durga Road Extn. Bangalore-560046, having acquired the property under a family Partition deed Registered as document No. **GAN-1:-02749-2007-08** dated **17.10.2007** In the office of the Sub Registrar, Gandhl Nagar (Ganga Nagar) Bangalore. If any person/s, financial institutions/Bank has any claim, right, interest or title over the Schedule property, the same may be made known to the undersigned in writing with documentary proof within **15 days** of this Notice from today, failing which it will be presumed that the schedule property is free from any such claim and any claim received thereafter will not bind my client and will not be entertained by my client.

SCHEDULE OF PROOPERTY

All that piece an d parcel of the immovable property including super built up structure consisting two floors, bearing old No.95, New No. 3, 7th Road, Nandi Durga Extension, Bangalore-560046 measuring East to West 44ft. North to South 65 feet + 67/2 bounded on **East by** : Site No. 94, **West by** : Site No.96, **North by**: Private land & **South by** : Road.

Sd/- E.K.THANKAPPAN, BA, BGL, LLB
M. RAMESH, BA,LL.M.
ADVOCATES
No.49, 1st Floor, Opp 12th Cross Cubbon Pet Main Road, Bangalore-560002
Mobile No. 9845276609 & 9845465428
Place: Bangalore Date: 05-06-2026

ROUNAQH

PUBLIC NOTICE

My client intends to Purchase with respect to properties mentioned and described in the Schedule hereunder, with its owner, **Mrs. Alice Carri,** wife of late Mr. S. X. Carri. The Owner represents that she is the absolute owner of the Schedule Property and have good marketable, right, title and interest therein and that apart from her, there are no other entity/ies, person/s having any right or claim over the Schedule Property. The Owner further represents that she has not entered into any Agreements/ MoU with any entity/ies, person/s and that she has not mortgaged, created any lien or encumbered the Schedule Property or any part thereof in any manner, to any person/s. Any person/s having objection/s or claim/s shall with documentary evidence, lodge their objection(s)/ claim(s) within **15 (Fifteen)** days from the date of publication of this Notice with the Undersigned failing which, my client shall proceed with the above-mentioned transaction.

SCHEDULE

All that piece and parcel of the converted property bearing Sy.No.109, [A.L.N (Jala) S. R. 78/2014-15 dated 04-07-2015] PID No. 150200200900420843, measuring in total 6 Acres, situated at situated at Navarathna Agrahara Village, Jala Hobli, Bengaluru North Taluk, Bengaluru Urban District and bounded on
East by: Sy.Nos.108, 107, 106,
West by: Sy.No.110 and Gadenahalli boundary,
North by: Sy.No.114 &
South by: Gadenahalli boundary.
Place: Bengaluru
Date: 04.06.2026

Sd/-
RAVEENDRA T R, Advocate,
No.C-205, House of Lords, St.Marks Road, Bangalore-560001
Ph No. 96861 64255

ಪ್ರವಾಸ TRAVEL

PACKAGE TOURS

14.6.2026 1 ದಿನ ಕೊಟ್ಟಿಯೂರು ಮಹದೇವ. 19.6.2026, 2 ದಿನ ಕೊಟ್ಟಿಯೂರು, ಮೃದಂಗ ಶೈಲೇಶ್ವರಿ, ಪರಸ್ಸಿನಿಕಡವು ಮುತ್ತಪ್ಪ, ಶ್ರೀ ರಾಜ ರಾಜೇಶ್ವರ ಇತ್ಯಾದಿ. 94814 33157.

TOURS & TRAVELS

07-06-2026 1 ದಿನ ಕೊಟ್ಟಿಯೂರ್ 11-6-26 3 ದಿನ ಕೊಟ್ಟಿಯೂರು, ವೈನಾಡು, 17-6-26 5 ದಿನ ಪಳನಿ, ರಾಮೇಶ್ವರಂ, ಕನ್ಯಾಕುಮಾರಿ ಇತ್ಯಾದಿ ಶ್ರೀವಿನಾಯಕ ಟ್ರಾವಲ್ಸ್9972500645

ವ್ಯಾಪಾರ BUSINESS

FOR SALE

BUSINESS (Name Kofresh) for Sale in Uttarahalli - Manufacturing unit of Snacks & Savories running business incl goodwill & customers. All machines are 1yr old only. Price 12L (Neg) Cont: 8884253229

ಎಚ್ಚರಿಕೆ ನೋಟೀಸು

ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

personal

CHANGE OF NAME

I, Hamlin Sebastin S/o Sebastin Arockia Leo Raju R/o 24/25 Galway Cottage 1st Main 2nd Cross Behind Gandhipuram Whitefield Bengaluru 560066 I have change my name from S Hamlin to Hamlin Sebastin vide sworn before notary Uday Kumar K Bengaluru dated 01.06.2026

I, Tasneem Ara Farahana W/o Hyder Nasir Ali, R/o No 90/47, Almas 8th Cross, Manjunatha Hospital, Wilson Garden, Bangalore - 560027, have changed my name from Tasneem Ara to Tasneem Ara Farahana vide sworn before notary S. Jayanth, Bangalore, dated 22.05.2026

I, AHAMED NAWAZ KHAN, S/o Mahaboob Ali Khan, R/o Meher Enclave 1st Floor, 14 Kutty Colony 3rd cross Bengaluru - 560011. I have changed my name to AHMED NAWAZ KHAN vide affidavit dated: 02/06/2026 FOR ALL FUTURE PURPOSES.

I Vidhyalakshmi Pandiyan W/O, Senthil Kumar.k R/o N0-5,kanni Sundari Nilayam,behind Mahesh Bhupathi Tennis Court,thindlu,vidyaranyapura, bengaluru-560097 have changed my name to Vidhyalakshmi Senthil Kumar.

I Nagaraj Yaduri S/o Channappa, H.N. 419, Mathad Galli, Nidasoshi, Belagavi, Karnataka-591236, Have Changed My Name To Nagaraj Channappa Yaduri Vide Affidavit Dt: 04/06/26 Before Notary M. Rajendra, Blr.

I, Alexandar Stephen R/o A 204 Emmanuel Meadows , Kammasandra , Electronic City Phase 2 , Bangalore - 560100 have changed my minor daughter's name from Alexandar Abigail Suzanne to Abigail Suzanne.

I, MD Azam Khan R/O No 42 Thanisandra Main Road Opposite to Raza Masjid bharath Nagar Bangalore 560077 Have Changed My Name to Mohammed Azam Khan for All Purposes.

I Nadim Iqbal s/o Majid Hassan r/o No 60,Ground Floor 3rd Cross,4th Main,New Bagalur Layout, St Thomas Town, Bangalore,Karnataka-560084 have changed my name To Nadeem Iqbal for all purposes

I, MERCY MARY NEELAMKAVIL VARGHESE, W/o. John V A, aged about 59 years, residing at No. 18, Vadukkoot, Behind Govt School, Adarsh Nagar, Shettihalli, Jalahalli West, Bangalore North, Bengaluru, Karnataka 560015, have changed my name from MERCY MARY N V to MERCY MARY NEELAMKAVIL VARGHESE, vide Affidavit dt: 02-06-2026 before Notary N. Mahesha, Bengaluru. Henceforth, I shall be known as MERCY MARY NEELAMKAVIL VARGHESE, for all purposes.

I, Tousif Asgar R/O No 13/2 2nd Floor 1st Main Road Bismillah Nagar Dharmaram College Post Bengaluru 560029 Have Changed My Name to Tousif for All Purposes.

I Anand Kumar Raul R/o Purva Fountain Square, B 402, Marathahalli, Bengaluru, Karnataka, have changed my minor son's name from Anvay Raul to Anvai Raaul for all future purposes.

I Ayush Vikasbhai Wani S/O, Vikas Balkrishna Wani R/o F-1201, Rajhans Cremona, Opp. Rajhans Altezza, Near C.b. Patel Club, Vesu, Surat have changed my name to Ayush Vikas Wani.

I, Mrs. LALPANCHHUNGI CHHAKCHHUAK, D/o of C Lalhmingliana R/A No 9th A Main 3rd Cross Opp. SysAid Technologies Jayaram Reddy Garden Doddabanaswadi Kalyan Nagar B'lore - 43 hereby declare that the name as "LALRAMPANCHHUNGI CHHAKCHHUAK" and "LLALPANCHHUNGI CHHAKCHHUAK" refer to one and the same person

I, GAURAV ASHISH SURAPURAJU, residing at #116, 22nd Cross, Basavanapura Main Road, Near Govt School, Gayathri Layout, Bangalore North, Krishnarajapuram, Bangalore – 560036, Karnataka, India, have changed my name to ASHISH GAURAV SURAPURAJU. Hereafter I shall be known by this name for all purposes.

I, Nagabooshanam R/o #62/52 Karnur Village HCF Post Hosur Krishnagiri-635110 have changed my name to Nagabushanam.

I, N R Gopala Krishnan, F/o, JC 676047W–Nb Sub–Sanoop N G, R/o, Padichira, Amara Kuni, Wayanad, KL, changed name to Gopalakrishnan Nair, for all purpose.

I, Krish, S/o Srisaravanakumar Krishnaswamy Raman, Residing at 14, 2nd Flr, Parambeth House, 27th Mn, 2nd Crs, Vgs Lyt, Ejipura, Blr-560047, Have changed my name to Krish Srisaravanakumar. Vide affidavit date: 1.6.2026

I, VARSHITHA, D/o B S Manjunath, aged about 29 years, residing at No. 2, Sri Venkateshwara Nilaya, Chikkabanavara Main Road, Abbigere, Bangalore North, Bengaluru, Karnataka 560090, have changed my name from VARSHITHA to VARSHITHA MANJUNATH vide Affidavit dated 02-06-2026 before Notary N. Mahesha, Bengaluru. Henceforth, I shall be known as VARSHITHA MANJUNATH, for all purposes.

I, Umamaheswari Ramamurthy Appakudal, W/o Srikanth Suryanarayanan, resident at no: 89, Alliance 10 Downing, Whitefield Hoskote Road, Kannamangala, Bengaluru, have changed my name to Umamaheswari Ramamurthy in all purposes, vide affidavit dated 03.06.2026 before notary R.Jyshree, Bangalore. Umamaheswari Ramamurthy Appakudal and Umamaheswari Ramamurthy are the same and one identical person.

I, Gokul S/O Selvam R/O No M-21, 2nd floor, 8th cross, Lakshminarayanapuram, puttaswamy road, bangalore 560021 changed my name as Gokul Selvam.

LOST & FOUND

WE, SAVITRI SHAHI and INDRA BAHADUR SHAHI, would like to inform the General Public that, we have misplaced our Original SALE DEED, Registered Document bearing No. SHR-1-02084-2018-19, Dated 29/09/2018, stored in CD No. SHRD122, and was registered in the office of Senior Sub-Registrar, Jayanagar (Shanthinagar), Bengaluru - 27, Bengaluru Urban District. In this regard executed Affidavit, Certificate No. IN-KA00893522152128X, Dated 20/11/2025 and Lost Report Lodged, its Report No. 1786038/2025. If anyone finds it, kindly contact us at 6360989437

ORIGINAL Gift Deed dated 02.09.2021 pertaining to Property No. 20 (Old), New No. 8, 2nd Cross, Modi Garden, Bengaluru – 560006, measuring 1310 sq. ft., is lost. E-Lost Report No. 2133271/2026 lodged. Any claim regarding the property or document may be notified to the undersigned within 15 days, failing which no claim will be entertained. Shaistha Raina, Mob: 8431995427 / 9738174606

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ –ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

CAUTION NOTICE

Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

GALLERIA

Nirmala Travels® Presents
Ph No. 0824 2497051/54, 9663518877, 9663528877, 9686687771/2/3/4/6
visit us @ www.nirmalatravels.com
TRICHY RAMESHWARAM KANYAKUMARI 5/7*/10** DAYS BLORE JUNE :06,12**,16,21, 21*,22**
KOLHAPUR SHIRDI/PANCHA JYOTHIRLINGA 7/6* JUNE: 14,15,17*,21,24* JULY:5,6,12,13,19,26
BELUR KAMALASHILE SIGANDOORU 4 DAYS JUNE:18,25 JULY:2,9,16
GURUVAYUR WAYANAD TRIVANDRUM 7 DAYS JUNE:14,21,28
MANTRALAYA SRISHAILAM HYDERABAD 7 DAYS JUNE:28 JULY: 5,12,19,26
SOUTH INDIA 7/11* DAYS JUNE:19*,29,30* JULY: 3*,6,13,13*,20,27
BADRINATH KEDARNATH*/CHARDHAM 10*/15 SEP:1,9*,10,17,18*24,26* OCT: 2*,3,11*,13,15*,18,26*
KASHI GAYA PRAYAG/HARIDWAR* 07/12* AUG: 24 SEP:01*,10,15,16*,19,23*,25
LEH LADAKH 8 DAYS JUNE:18, JULY:12
PURI BHUVANESHWAR*/DARJEELING GANGTOK 5*/12 DAYS AUG:04*,18* SEP: 1,08,15,22,29

EVENTS AND EXHIBITIONS

TIMES interact
Connecting People, Connecting Needs.
ದಕ್ಷಿಣ ಭಾರತದ ಅತಿದೊಡ್ಡ ಹೋಟೆಲ್, ರೆಸ್ಟೋರೆಂಟ್ ಮತ್ತು ಕೇಟರಿಂಗ್ ವ್ಯಾಪಾರ ಪ್ರದರ್ಶನಕ್ಕೆ ಬನ್ನಿ, ಭೇಟಿ ನೀಡಿ
WORLD OF HOSPITALITY
BUSINESS EVENTS FOR HORECA PROFESSIONALS
4 5 6 JUNE 2026
ತ್ರಿಪುರ ವಾಸಿನಿ, ಗೇಟ್ ನಂ. 2 ಮೇಖ್ರಿ ಸರ್ಕಲ್, ಪ್ಯಾಲೇಸ್ ಗ್ರೌಂಡ್ಸ್, ಬೆಂಗಳೂರು
500+ BRANDS
250+ EXHIBITORS
10,000+ VISITORS
10+ SPECIAL EVENTS
CALL US TO KNOW MORE: 9821580849 /9821076065
ASSOCIATION PARTNERS
EVENT MANAGER iads & events

Bennett & Coleman
THE TIMES OF INDIA
ಶುಕ್ರವಾರ,5 ಜೂನ್ 2026 | ಪುಟಗಳು: 17+4 | ಬೆಲೆ: ₹ 5.00
www.vijaykarnataka.com
c
ಸಂಪುಟ: 27 | ಸಂಚಿಕೆ: 155
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
ಇಂದು ವಿಶ್ವಪರಿಸರ ದಿನ
PRIDE OF YOUNG KARNATAKA
ವಿಜಯ ಕರ್ನಾಟಕ

2027ರ ಅಂತ್ಯದೊಳಗೆ ದೇಶಾದ್ಯಂತ 5,000 ಎಥೆನಾಲ್ ಬಂಕ್ ಸ್ಥಾಪನೆ: ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ

ಸಿಎಂ ಜತೆಯೋ, ನನ್ನೊಂದಿಗೋ?

ಅಧಿಕಾರ ಬೇಕಾದವರು ಡಿ.ಕೆ ಜತೆ ಹೋಗಿ, ಪಕ್ಷಸಿದ್ಧಾಂತ ಬೇಕಾದವರು ಬಿ.ಕೆ ಜತೆ ಬನ್ನಿ

ಪಕ್ಷನಿಷ್ಠೆ Vs ಪವರ್ | ಕಾಂಗ್ರೆಸ್ ಪಡೆಯನ್ನು ಪರೀಕ್ಷೆಗೊಡ್ಡಿದ ಬಿ.ಕೆ. ಹರಿಪ್ರಸಾದ್

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ, ಆಡಳಿತಾರೂಢ ಪಕ್ಷದೊಳಗೆ ಸಂಚಲನ ಸೃಷ್ಟಿಸುವ ಹೇಳಿಕೆ ಹೊರಬಿದ್ದಿದೆ.

''ಅಧಿಕಾರ, ಸ್ಥಾನಮಾನ ಬೇಕಾದವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆಗೆ ಹೋಗಿ. ಪಕ್ಷ ನಿಷ್ಠೆಯಿಂದ ಕೆಲಸ ಮಾಡುವವರು ಮಾತ್ರ ನನ್ನ ಜತೆಗೆ ಬನ್ನಿ,'' ಎಂದು ಕೆಪಿಸಿಸಿ ನಿಯೋಜಿತ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಖಡಕ್ ಹೇಳಿಕೆ ನೀಡಿದ್ದಾರೆ.

ನೇರಾನೇರ ಮಾತಿಗೆ ಹೆಸರಾದ ಬಿ.ಕೆ.ಹರಿಪ್ರಸಾದ್ ಅವರ ಈ ಖಡಕ್ ಹೇಳಿಕೆ ರಾಜ್ಯದ ಆಡಳಿತ ಪಕ್ಷದಲ್ಲಿ ಪರ್ಯಾಯ ಅಧಿಕಾರ ಕೇಂದ್ರಗಳ ಸೃಷ್ಟಿಗೆ ಕಾರಣವಾಗಬಲ್ಲದೇ ಎಂಬ ಕುತೂಹಲ ಮೂಡಿಸಿದೆ. ಜತೆಗೆ ಸರಕಾರ ಮತ್ತು ಪಕ್ಷದ ನಾಯಕತ್ವಗಳ ನಡುವೆ ಸಮನ್ವಯ ಕುರಿತಂತೆ ಚರ್ಚೆ ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಹರಿಪ್ರಸಾದ್, ''ಸಚಿವ ಸ್ಥಾನ ಸಿಗದಿರುವವರು, ಅಧಿಕಾರ ಬೇಕು ಎನ್ನುವವರಿಗೆ ನನ್ನದೊಂದು ಮನವಿ ಇದೆ. ಕಾಂಗ್ರೆಸ್ ಪಕ್ಷವನ್ನು ಸದೃಢವಾಗಿ ಬೆಳೆಸಬೇಕು. ರಾಹುಲ್ ಹೋರಾಟಕ್ಕೆ ಶಕ್ತಿ ತುಂಬಲು ಬಯಸಿದವರು ನನ್ನೊಟ್ಟಿಗೆ ಬನ್ನಿ. ಅಧಿಕಾರವೇ ಮುಖ್ಯ ಎನ್ನುವುದಾದರೆ ಡಿ.ಕೆ.ಶಿವಕುಮಾರ್ ಜತೆಗೆ ಹೋಗಿ,'' ಎಂದು ಸಲಹೆ ಮಾಡಿದರು.

ಕೆಪಿಸಿಸಿ ನಿಯೋಜಿತ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಕೆ. ಹರಿಪ್ರಸಾದ್ ಅವರನ್ನು ಅಭಿನಂದಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

''ನನ್ನ ಪೂರ್ವಜರು ಮಾಡಿರುವ ಪುಣ್ಯದಿಂದ ಈ ಮಹತ್ವದ ಹುದ್ದೆ ಸಿಕ್ಕಿದೆ. ಪಕ್ಷದ ಕಾರ್ಯಕರ್ತರ ಜತೆಗೆ ನಾನಿರುತ್ತೇನೆ. ಪಕ್ಷದ ತತ್ವ ಸಿದ್ಧಾಂತವನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿಗೆ ಹೆಗಲು ನೀಡಿದ್ದೇನೆ. ಇದಕ್ಕೆ ಎಲ್ಲರ ಸಹಕಾರ ಬೇಕು,'' ಎಂದು ಹೇಳಿದರು.

ಶೀಘ್ರ ಪದಗ್ರಹಣ: ''ಸದ್ಯದಲ್ಲೆ ದಿಲ್ಲಿಗೆ ತೆರಳಿ ಸೋನಿಯಾ, ರಾಹುಲ್ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಧನ್ಯವಾದ ಹೇಳುತ್ತೇನೆ. ಆ ಬಳಿಕ ಪದಗ್ರಹಣ ಮಾಡುತ್ತೇನೆ. ಪದಾಧಿಕಾರಿಗಳ ನೇಮಕ, ಹೊಸ ಟೀಂ ರಚನೆಯಂತಹ ವಿಚಾರಗಳೆಲ್ಲವೂ ನಂತರದ ಪ್ರಕ್ರಿಯೆ'' ಎಂದು ಹರಿಪ್ರಸಾದ್ ಹೇಳಿದರು.

ಖಾತೆ ಹಂಚಿದ ಸಿಎಂ ಡಿಕೆಶಿ

- **ಡಿಸಿಎಂ ಡಾ.ಜಿ. ಪರಮೇಶ್ವರ:** ಡಿಸಿಎಂ -ಕಂದಾಯ, ಕ್ರೀಡೆ ಮತ್ತು ಯುವಜನ
- **ಕೆ.ಎಚ್.ಮುನಿಯಪ್ಪ:** ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳು
- **ಕೆ.ಜೆ.ಜಾರ್ಜ್:** ಇಂಧನ, ಪ್ರವಾಸೋದ್ಯಮ
- **ಎಂ.ಬಿ.ಪಾಟೀಲ್:** ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ
- **ರಾಮಲಿಂಗಾರೆಡ್ಡಿ:** ಜಲ ಸಂಪನ್ಮೂಲ
- **ಸತೀಶ್ ಜಾರಕಿಹೊಳಿ:** ಲೋಕೋಪಯೋಗಿ
- **ಕೃಷ್ಣಬೈರೇಗೌಡ:** ಬೆಂಗಳೂರು ನಗರಾಭಿವೃದ್ಧಿ (GBA)
- **ಪ್ರಿಯಾಂಕ್ ಖರ್ಗೆ:** ಗೃಹ, ಮಾಹಿತಿ ತಂತ್ರಜ್ಞಾನ
- **ಯು.ಟಿ.ಖಾದರ್:** ಆರೋಗ್ಯ, ಕುಟುಂಬ ಕಲ್ಯಾಣ
- **ಈಶ್ವರ ಖಂಡ್ರೆ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
- **ಡಾ.ಯತೀಂದ್ರ ಸಿದ್ದರಾಮಯ್ಯ:** ನಗರಾಭಿವೃದ್ಧಿ
- **ಬೈರತಿ ಸುರೇಶ್:** ಸಾರಿಗೆ
- **ಡಾ.ಶರಣ ಪ್ರಕಾಶ್ ಪಾಟೀಲ್:** ವೈದ್ಯಕೀಯ ಶಿಕ್ಷಣ.

ವಿವರ»02

ಟ್ರಾಫಿಕ್ ಫೈನ್ 50% ರಿಯಾಯಿತಿ!

ಬೆಂಗಳೂರು': ಸಾರಿಗೆ ಇಲಾಖೆಯ ದಂಡ ಬಾಕಿ ಹಾಗೂ ಪೊಲೀಸ್ ಇಲಾಖೆಯ ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ರಾಜ್ಯ ಸರಕಾರ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಜೂನ್ 21ರಿಂದ ಜುಲೈ 10ರವರೆಗೆ ಅವಕಾಶ

ಜೂ.21ರಿಂದ ಜು.10ರವರೆಗೆ ರಿಯಾಯಿತಿ ಲಭ್ಯವಿದೆ.

2026ರ ಮೇ ತಿಂಗಳಿಗೂ ಮುನ್ನ ಪೊಲೀಸ್ ಇಲಾಖೆಯು ಇ-ಚಲನ್ ಮೂಲಕ ದಾಖಲಿಸಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳು 1991ರಿಂದ 2022ರವರೆಗೆ ದಾಖಲಿಸಿರುವ ಪ್ರಕರಣಗಳ ಬಾಕಿ ದಂಡ ಪಾವತಿಗೆ ರಿಯಾಯಿತಿ ಸಿಗಲಿದೆ.

ಪೊಲೀಸ್ ಇಲಾಖೆಯು ಇ-ಚಲನ್ ಮೂಲಕ ದಾಖಲಿಸಿದ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ಈ ಹಿಂದೆ ಹಲವು ಬಾರಿ ಶೇ. 50ರಷ್ಟು ರಿಯಾಯಿತಿ ನೀಡಲಾಗಿತ್ತು. ಅದೇ ರೀತಿ ಕಳೆದ ವರ್ಷ ನವೆಂಬರ್‌ನಲ್ಲಿ ಮೊದಲ ಬಾರಿಗೆ ಸಾರಿಗೆ ಇಲಾಖೆ ಪ್ರಕರಣಗಳ ಬಾಕಿ ದಂಡ ಪಾವತಿಗೆ ರಿಯಾಯಿತಿ ಘೋಷಿಸಲಾಗಿತ್ತು. ಇದೀಗ ಎರಡನೇ ಬಾರಿಗೆ ಸಾರಿಗೆ ಇಲಾಖೆ ಪ್ರಕರಣಗಳ ಬಾಕಿ ದಂಡ ಪಾವತಿಗೆ ರಿಯಾಯಿತಿ ನೀಡಲಾಗಿದೆ.

ಇಂದು ಖರ್ಗೆ ನಾಮಪತ್ರ

ಬೆಂಗಳೂರು: ರಾಜ್ಯಸಭೆಗೆ ಮರು ಆಯ್ಕೆಯಾಗಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಮಧ್ಯಾಹ್ನ 1.30 ನಾಮಪತ್ರ ಸಲ್ಲಿಸಲಿದ್ದಾರೆ. ಈ ವೇಳೆ ಜತೆಯಾಗಿರಲು ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಆಗಮಿಸಲಿದ್ದಾರೆ. ಸಿಎಂ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ ಕೂಡಾ ಜತೆಗಿರುತ್ತಾರೆ.

ರಾಜ್ಯಸಭೆ ಚುನಾವಣೆ

ರಾಜ್ಯದಲ್ಲಿ ತೆರವಾಗಿರುವ ರಾಜ್ಯಸಭೆಯ 4 ಸ್ಥಾನಗಳ ಪೈಕಿ 3 ಸ್ಥಾನಗಳು ಆಡಳಿತಾರೂಢ ಕಾಂಗ್ರೆಸ್‌ಗೆ ಲಭ್ಯವಾಗಲಿವೆ. ಒಂದು ಸ್ಥಾನದಲ್ಲಿ ಖರ್ಗೆ ಮುಂದುವರಿದರೆ ಇನ್ನೆರಡು ಸ್ಥಾನಗಳಿಗೆ ಎಐಸಿಸಿ ವಕ್ತಾರ ಪವನ್ ಖೇರಾ ಹಾಗೂ ರಾಜ್ಯದ ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಖಾನ್ ಅವಕಾಶ ಪಡೆದುಕೊಂಡಿದ್ದಾರೆ. ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿರುವ ಖರ್ಗೆ ಅವರ ಮೇಲ್ಮನೆ ಸದಸ್ಯತ್ವವು ಜೂನ್ 25ಕ್ಕೆ ಕೊನೆಗೊಳ್ಳಲಿದೆ. ಜೂನ್ 18ರಂದು ಕರ್ನಾಟಕ ಸೇರಿದಂತೆ 10 ರಾಜ್ಯಗಳಲ್ಲಿ ರಾಜ್ಯಸಭೆ ಚುನಾವಣೆ ನಿಗದಿಯಾಗಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ.

ದಿಲ್ಲಿ ಬೆಂಕಿ ದುರಂತ: ಬೆಡ್ ಆ್ಯಂಡ್ ಬ್ರೇಕ್‌ಫಾಸ್ಟ್ ಯೋಜನೆ ಹಿಂಪಡೆದ ಸಿಎಂ ರೇಖಾ

ಹೋಟೆಲ್ ಮಾಲೀಕ ಪೊಲೀಸ್ ವಶಕ್ಕೆ

ಹೊಸದಿಲ್ಲಿ: ಅಮಾಯಕ 21 ಜನರ ಸಾವಿಗೆ ಕಾರಣವಾದ ದಿಲ್ಲಿಯ ಮಾಳವೀಯ ನಗರದ 'ಫ್ಲರಿಷ್ ಸ್ಟೇ ಬಿ ಆ್ಯಂಡ್ ಬಿ' ಹೋಟೆಲ್‌ನ ಅಗ್ನಿದುರಂತ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಲ್ಲಿ ನ್ಯಾಯಾಲಯವು ಪ್ರಮುಖ ಆರೋಪಿ ಹೋಟೆಲ್ ಮಾಲೀಕ ಲೋಕೇಶ್ ಬಜಾಜ್ ಅವರನ್ನು 4 ದಿನ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಜೂನ್ 3ರ ಬುಧವಾರ ಬೆಳಗ್ಗೆ ಅಗ್ನಿ ದುರಂತ ಸಂಭವಿಸಿದ ಬೆನ್ನಲ್ಲೇ ದಿಲ್ಲಿ ಪೊಲೀಸರು ಹೋಟೆಲ್ ಮಾಲೀಕನ ಬಂಧನಕ್ಕೆ ಜಾಲ ಬೀಸಿದ್ದರು. ರಾತ್ರಿ ಹೊತ್ತಿಗೆ ಆರೋಪಿ ಲೋಕೇಶ್ ಅವರನ್ನು ಬಂಧಿಸಿದ ಪೊಲೀಸರು ಗುರುವಾರ ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು. ಆರೋಪಿಯು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕೇವಲ ಇಬ್ಬರು ಸಿಬ್ಬಂದಿಯ ಹೆಸರು ಬಹಿರಂಗಪಡಿಸಿದ್ದು, ಉಳಿದವರ ವಿವರಗಳನ್ನು ಮುಚ್ಚಿಟ್ಟಿದ್ದಾರೆಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಹೋಟೆಲ್‌ನ ಇನ್ನೂ ಹಲವು ಸಿಬ್ಬಂದಿಯ ವಿಚಾರಣೆ ಅಗತ್ಯವಿದೆ. ಈ ದುರಂತದಲ್ಲಿ ಭಾಗಿಯಾಗಿರುವವರನ್ನು ಪತ್ತೆ ಹಚ್ಚಲು ಆರೋಪಿಯನ್ನು ಹೆಚ್ಚಿನ ವಿಚಾರಣೆಗೊಳಪಡಿಸುವ ಅಗತ್ಯವಿದೆ ಎಂದು ಪೊಲೀಸರು ವಾದಿಸಿದರು. ವಾದ-ಪ್ರತಿವಾದ ಆಲಿಸಿದ ಕೋರ್ಟ್, ಆರೋಪಿಯನ್ನು 4 ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಿತು.

ದಿಲ್ಲಿ ಹೋಟೆಲ್‌ನಲ್ಲಿ ಅಗ್ನಿ ಅವಘಡ ಹಿನ್ನೆಲೆಯಲ್ಲಿ ಉತ್ತರಪ್ರದೇಶದ ಲಖನೌ, ಪ್ರಯಾಗ್‌ರಾಜ್ ಸೇರಿದಂತೆ ಪ್ರಮುಖ ನಗರಗಳಲ್ಲಿ ಸುರಕ್ಷತೆ ಕುರಿತು ತಪಾಸಣೆ ನಡೆಸಿದ ಸ್ಥಳೀಯ ಪೊಲೀಸರು.

ಅಗ್ನಿ ಅವಘಡದ ನಂತರ ಕಟ್ಟಡದೊಳಗೆ ಅತಿಯಾದ ಶಾಖವಿದ್ದ ಕಾರಣ ತನಿಖಾಧಿಕಾರಿಗಳಿಗೆ ಆರಂಭದಲ್ಲಿ ಒಳ ಪ್ರವೇಶಿಸಲು ಸಾಧ್ಯವಾಗಲಿಲ್ಲ, ಘಟನಾ ಸ್ಥಳದಲ್ಲಿ ವಿಧಿವಿಜ್ಞಾನ ತಜ್ಞರಿಂದ ಪರಿಶೀಲನೆ ಇನ್ನೂ ಬಾಕಿ ಉಳಿದಿದೆ ಎಂಬ ಮಾಹಿತಿಯನ್ನೂ ಪೊಲೀಸರು ಇದೇ ವೇಳೆ ಕೋರ್ಟ್ ಗಮನಕ್ಕೆ ತಂದರು.

ಬಿ ಆ್ಯಂಡ್ ಬಿ ಯೋಜನೆ ವಾಪಸ್: ದಿಲ್ಲಿ ಹೋಟೆಲ್ ಅಗ್ನಿ ದುರಂತದ ಬೆನ್ನಲ್ಲೇ ಮುಖ್ಯಮಂತ್ರಿ ರೇಖಾ ಗುಪ್ತಾ ನೇತೃತ್ವದ ಬಿಜೆಪಿ ಸರಕಾರವು 'ಬೆಡ್ ಆ್ಯಂಡ್ ಬ್ರೇಕ್ ಫಾಸ್ಟ್' (ಬಿ ಆ್ಯಂಡ್ ಬಿ ಸ್ಕೀಮ್) ಯೋಜನೆಯನ್ನು ಹಿಂಪಡೆಯಲು ನಿರ್ಧರಿಸಿದೆ. ಈ ಮಹತ್ವದ ನಿರ್ಧಾರ ಪ್ರಕಟಿಸಿದ ದಿಲ್ಲಿ ಪ್ರವಾಸೋದ್ಯಮ ಸಚಿವ ಕಪಿಲ್ ಮಿಶ್ರಾ, ''ಪರವಾನಗಿ ಪಡೆದ ಎಲ್ಲಾ 'ಬಿ ಆ್ಯಂಡ್ ಬಿ' ಘಟಕಗಳನ್ನು ಮರುಪರಿಶೀಲನೆಗೆ ಒಳಪಡಿಸಲಾಗುವುದು. ಪರವಾನಗಿ ನಿಯಮಗಳನ್ನು ಉಲ್ಲಂಘಿಸುವ ಆಪರೇಟರ್‌ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು,'' ಎಂದರು.

6 ಕೊಠಡಿ ಬದಲು 25 ಕೊಠಡಿ!

''ಈ ಯೋಜನೆಯಡಿ ನೋಂದಾಯಿಸಿಕೊಂಡಿದ್ದ 'ಫ್ಲರಿಷ್ ಸ್ಟೇ ಬಿ ಆ್ಯಂಡ್ ಬಿ' ಹೋಟೆಲ್‌ಗೆ ಕೇವಲ 6 ಕೊಠಡಿಗಳನ್ನು ಹೊಂದಲು ಅನುಮತಿ ನೀಡಲಾಗಿತ್ತು. ಆದರೆ, ಅದು ಅಕ್ರಮವಾಗಿ 25 ಕೊಠಡಿಗಳನ್ನು ನಿರ್ಮಿಸಿತ್ತು. ಅಗ್ನಿ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿತ್ತು. ಇಂಥ ಅಕ್ರಮ ನಡೆಸುವ ಹೋಟೆಲ್‌ಗಳ ಪರವಾನಗಿ ರದ್ದುಗೊಳಿಸಲಾಗುವುದು ಎಂದು ಸಚಿವ ಕಪಿಲ್ ಮಿಶ್ರಾ ಎಚ್ಚರಿಸಿದರು. 'ಬೆಡ್ ಆ್ಯಂಡ್ ಬ್ರೇಕ್ ಫಾಸ್ಟ್' ಯೋಜನೆಯು ಸರಕಾರಿ ನಿಯಂತ್ರಿತ ಪರವಾನಗಿ ವ್ಯವಸ್ಥೆಯಾಗಿದೆ. ಈ ವರ್ಗದಡಿ ಮನೆ ಮಾಲೀಕರಿಗೆ ಮತ್ತು ಸಣ್ಣ ಉದ್ಯಮಿಗಳಿಗೆ ಪೂರ್ಣ ಪ್ರಮಾಣದ ಹೋಟೆಲ್ ಪರವಾನಗಿ ಪಡೆಯದೆಯೇ ಪ್ರವಾಸಿಗರಿಗೆ ಅಲ್ಪಾವಧಿಯ ವಾಸ್ತವ್ಯದ ಸೌಲಭ್ಯ ಪೂರೈಸಲು ಅನುಮತಿಸಲಾಗುತ್ತದೆ. ಇಲ್ಲಿ ಮಾಲೀಕರು ಪ್ರತಿ 15 ದಿನಗಳಿಗೊಮ್ಮೆ ಸ್ಥಳೀಯ ಪೊಲೀಸ್ ಠಾಣೆಗೆ ಅತಿಥಿಗಳ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. 2010ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಮುಂಚಿತವಾಗಿ ಈ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಈ ದುರಂತವು ಜಾರಿ ವ್ಯವಸ್ಥೆಯಲ್ಲಿನ ದೊಡ್ಡ ವೈಫಲ್ಯವನ್ನು ಎತ್ತಿ ತೋರಿಸಿದೆ ಎಂಬ ಆರೋಪ ಕೇಳಿಬಂದಿದೆ.

ಕುಳಿತಲ್ಲೇ ಸುಟ್ಟು ಬೂದಿಯಾದಳು ರಿಸೆಪ್ಷನಿಸ್ಟ್!

''ಹೋಟೆಲ್ ಇದ್ದ ಕಟ್ಟಡದ ನೆಲಮಹಡಿ ಮತ್ತು ಮೊದಲ ಮಹಡಿಯಲ್ಲಿ ಬೆಂಕಿಯ ತೀವ್ರತೆ ಭಯಂಕರವಾಗಿತ್ತು. ಬೆಂಕಿ ನಂದಿಸಿದ ನಂತರವೂ ಒಳಗಿನ ದೃಶ್ಯ ಎಷ್ಟು ಘೋರವಾಗಿತ್ತೆಂದರೆ, ದುರ್ಬಲ ಹೃದಯದವರು ಅದನ್ನು ನೋಡಲು ಸಾಧ್ಯವಿರಲಿಲ್ಲ, ಒಳಗೆ ಉಸಿರಾಡಲು ಸಾಧ್ಯವಾಗದಷ್ಟು ಹೊಗೆ ತುಂಬಿಕೊಂಡಿತ್ತು. ಮೊದಲ ಮಹಡಿಯ ರಿಸೆಪ್ಷನಿಸ್ಟ್ ಸೀಟ್‌ನಲ್ಲಿ ಕುಳಿತಿದ್ದ ಸುಮಾರು 25 ವರ್ಷದ ಯುವತಿ ಅದೇ ಸ್ಥಿತಿಯಲ್ಲೇ ಸುಟ್ಟು ಕರಕಲಾಗಿದ್ದಳು,'' ಎನ್ನುತ್ತಲೇ ಕಣ್ಣೀರಾದರು ರಕ್ಷಣಾ ಕಾರ್ಯಕರ್ತ ಅಮೀರ್ ಖಾನ್.

ರಕ್ಷಣೆ ನಿರೀಕ್ಷೆಯಲ್ಲಿದ್ದ ದಂಪತಿ ಟಾಯ್ಲೆಟ್‌ನಲ್ಲೇ ಸಾವು

ಅಗ್ನಿ ಅವಘಡದಿಂದ ಜೀವ ಉಳಿಸಿಕೊಳ್ಳಲು ದಂಪತಿ ಟಾಯ್ಲೆಟ್‌ನೊಳಗೆ ಆಶ್ರಯ ಪಡೆದಿದ್ದರು. ಅಗ್ನಿ ಶಾಮಕ ದಳದವರು ಇಲ್ಲವೇ ಯಾರಾದರೂ ತಮ್ಮ ರಕ್ಷಣೆ ಬರುವರೆಂದು ಅವರು ಕಾಯುತ್ತಲೇ ಇದ್ದರು. ಪತ್ನಿ ಕಮೋಡ್ ಮೇಲೆ ಕುಳಿತಿದ್ದರೆ, ಪತಿ ವೀಲ್‌ಚೇರ್‌ನಲ್ಲಿ ಅಲ್ಲೇ ಪಕ್ಕದಲ್ಲಿ ಕುಳಿತಿದ್ದರು. ಕಟರ್ ಬಳಸಿ ನೆಲಮಹಡಿ ಮೂಲಕ ರಕ್ಷಣಾ ತಂಡಗಳು ಟಾಯ್ಲೆಟ್ ತಲುಪುವಷ್ಟರಲಿ ದಂಪತಿ ಪರಸ್ಪರ ಅಪ್ಪಿಕೊಂಡ ಸ್ಥಿತಿಯಲ್ಲೇ ಪ್ರಾಣಬಿಟ್ಟಿದ್ದರು. ಮೃತದೇಹಗಳ ಸ್ಥಿತಿ ಇದನ್ನು ಸಾಕ್ಷೀಕರಿಸಿದೆ.

ಬಿಹಾರದ ಆಸ್ಪತ್ರೆಯಲ್ಲಿ ಅಗ್ನಿ ಅವಘಡ, ಐವರು ಸಾವು

ಪಟನಾ: ಬಿಹಾರದ ಮುಜಫರ್‌ಪುರದಲ್ಲಿನ ಆಸ್ಪತ್ರೆಯೊಂದರ ಐಸಿಯುನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಐವರು ಸಾವನ್ನಪ್ಪಿದ್ದಾರೆ. ಖಾಸಗಿ ಆಸ್ಪತ್ರೆಯ ಐದನೇ ಮಹಡಿಯಲ್ಲಿರುವ ಐಸಿಯು ವಿಭಾಗದಲ್ಲಿ ನಡುರಾತ್ರಿ 3:55ರ ವೇಳೆಗೆ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ 95 ವರ್ಷದ ರಾಧಾ ದೇವಿ ಎಂಬ ವೃದ್ಧೆ ಆಸ್ಪತ್ರೆ ಸಿಬ್ಬಂದಿಗೆ ಕೂಡಲೇ ಮಾಹಿತಿ ನೀಡಿದ್ದು, ಅನೇಕ ಜೀವಗಳು ಉಳಿಯಲು ಕಾರಣರಾಗಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಘಟನೆಯಲ್ಲಿ ಐವರು ಸಾವನ್ನಪ್ಪಿದ್ದು, 25ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ನೀಡಿರುವ ಮಾಹಿತಿ ಪ್ರಕಾರ, ಒಟ್ಟು 13 ರಿಂದ 15 ಜನರು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿರುವ ಶಂಕೆಯಿದ್ದು, ಪೂರ್ಣ ತನಿಖೆಯ ಬಳಿಕ ಕಾರಣ ತಿಳಿದು ಬರಲಿದೆ ಎಂದು ಹೇಳಿದ್ದಾರೆ.

ಬಿಜೆಪಿಯಿಂದ ಅಣ್ಣಾಮಲೈ ನಿರ್ಗಮನ ಖಚಿತ?

ಹೊಸದಿಲ್ಲಿ: ಮಾಜಿ ಪೊಲೀಸ್ ಅಧಿಕಾರಿ ಕೆ.ಅಣ್ಣಾಮಲೈ ಅವರು ಬಿಜೆಪಿ ತೊರೆಯುವುದು ಖಚಿತವಾಗಿದೆ. ಜೂನ್ 5ರಂದು (ಶುಕ್ರವಾರ) ರಾಜಕೀಯೇತರ ಚಳವಳಿ ಅಥವಾ ಹೊಸ ರಾಜಕೀಯ ಪಕ್ಷ ಸ್ಥಾಪನೆಯ ಘೋಷಣೆ ಮಾಡುವ ಸಾಧ್ಯತೆಗಳಿವೆ.



ಕೊಯಮತ್ತೂರಿನಲ್ಲಿ ಅಣ್ಣಾಮಲೈ ಬೆಂಬಲಿಗರು ಅಂಟಿಸಿರುವ ಪೋಸ್ಟರ್.

ಕಳೆದ ಮಂಗಳವಾರ (ಜೂನ್ 2) ದಿಲ್ಲಿಗೆ ಆಗಮಿಸಿದ್ದ ಅಣ್ಣಾಮಲೈ ಅವರು ಬಿಜೆಪಿ ವರಿಷ್ಠರನ್ನು ಭೇಟಿಯಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿಯಾಗಿ ರಾಜೀನಾಮೆ ಪತ್ರ ಸಲ್ಲಿಸಿದ್ದು, ಜತೆಗೆ ಪಕ್ಷ ತೊರೆಯಲು ಕಾರಣವಾದ ಅಂಶಗಳ ಕುರಿತು ವಿವರಿಸಿದ್ದರು. ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ, ರಾಜ್ಯದ ರಾಜಕೀಯ ವಿದ್ಯಮಾನಗಳು, ಪ್ರಸ್ತುತ ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿ, ಭವಿಷ್ಯದ ಯೋಜನೆಗಳ ಕುರಿತು ಚರ್ಚೆ ನಡೆಸಿದ್ದರು. ಸದ್ಯಕ್ಕೆ ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿಯುವಂತೆ ವರಿಷ್ಠರು ಸೂಚಿಸಿದ್ದಾರೆ ಎನ್ನಲಾಗಿದೆ. ಆದರೆ, ಮಾನಸಿಕವಾಗಿ ಪಕ್ಷದಿಂದ ಹೊರ ಬಂದಿರುವ ಅಣ್ಣಾಮಲೈ, ಸೌಹಾರ್ದಯುತವಾಗಿ ಬೀಳ್ಕೊಡುವಂತೆ ಮನವಿ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

ಹೊಸ ರಾಜಕೀಯ ಪಕ್ಷ ಸ್ಥಾಪನೆ: ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಮಾದರಿಯಲ್ಲೇ ರಾಜ್ಯದಲ್ಲಿ ಹೊಸ ರಾಜಕೀಯ ಪಕ್ಷ ಸ್ಥಾಪಿಸುವ ಉದ್ದೇಶ ಹೊಂದಿರುವ ಅಣ್ಣಾಮಲೈ, ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ಬಿಜೆಪಿ ತೊರೆಯುವ ನಿರ್ಧಾರ ಮಾಡಿದ್ದರು ಎನ್ನಲಾಗಿದೆ. ಆರಂಭದಲ್ಲಿ ಜನಾಂದೋಲನ ರೂಪಿಸಲು ಹೊಸ ಸಂಘಟನೆ ಸ್ಥಾಪಿಸುವ ತೀರ್ಮಾನಕ್ಕೆ ಬಂದಿದ್ದಾರೆ. ಬಳಿಕ ಸಂಘಟನೆಯನ್ನು ರಾಜಕೀಯ ಪಕ್ಷವಾಗಿ ಬದಲಾಯಿಸುವ ಉದ್ದೇಶ ಹೊಂದಿದ್ದಾರೆ.

ಐಎನ್‌ಡಿಐಎಯಿಂದ ಡಿಎಂಕೆ ಹೊರಗೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯ ನಂತರ ಉಂಟಾಗಿರುವ ರಾಜಕೀಯ ಬದಲಾವಣೆಗಳ ಬೆನ್ನಲ್ಲೇ ಕಾಂಗ್ರೆಸ್ ಮತ್ತು ಡಿಎಂಕೆ ನಡುವಿನ ಭಿನ್ನಾಭಿಪ್ರಾಯಗಳು ತಾರಕಕ್ಕೇರಿವೆ. ಇದರ ನೇರ ಪರಿಣಾಮವಾಗಿ, ಮುಂಬರುವ ಜೂನ್ 8ರಂದು ಹೊಸದಿಲ್ಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ಆಯೋಜಿಸಲಾಗಿರುವ ಐಎನ್‌ಡಿಐಎ ನಾಯಕರ ಸಭೆಯಿಂದ ಹೊರಗುಳಿಯಲು ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ಪಕ್ಷ ನಿರ್ಧರಿಸಿದೆ. ಆದರೆ, ಈ ನಿರ್ಧಾರದಿಂದ ರಾಷ್ಟ್ರ ಮಟ್ಟದಲ್ಲಿ ಪ್ರತಿಪಕ್ಷಗಳ ಹೋರಾಟಕ್ಕೆ ನೀಡುತ್ತಿರುವ ಬೆಂಬಲವನ್ನು ತಾವು ವಾಪಸ್ ಪಡೆಯುತ್ತಿಲ್ಲ ಎಂದು ಡಿಎಂಕೆ ಸ್ಪಷ್ಟಪಡಿಸಿದೆ.

ಕ್ಷೇತ್ರ ಮರುವಿಂಗಡಣೆ ವಿಧೇಯಕಕ್ಕೆ ಬೆಂಬಲ?

ಐಎನ್‌ಡಿಐಎ ಸಭೆಯಿಂದ ಹೊರಗುಳಿಯುವ ಕುರಿತು ಅಧಿಕೃತ ಹೇಳಿಕೆ ಬಿಡುಗಡೆ ಮಾಡಿರುವ ಡಿಎಂಕೆ, ತಮಿಳುನಾಡು ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್ ಪಕ್ಷವು ತಮಗೆ ಎಸಗಿರುವ ದ್ರೋಹದಿಂದಾಗಿ ಪಕ್ಷದ ಕಾರ್ಯಕರ್ತರು ತೀವ್ರವಾಗಿ ನೊಂದಿದ್ದಾರೆ ಎಂದು ಆಕ್ರೋಶ ಹೊರಹಾಕಿದೆ. ತಮಿಳುನಾಡು ವಿಧಾನಸಭಾ ಚುನಾವಣೆಯ ಬಳಿಕ ಕಾಂಗ್ರೆಸ್ ಪಕ್ಷವು ಡಿಎಂಕೆಗೆ ಮಾಡಿದ ದ್ರೋಹದಿಂದಾಗಿ ನಮ್ಮ ಪಕ್ಷದ ಕಾರ್ಯಕರ್ತರ ಭಾವನೆಗಳಿಗೆ ಭಾರಿ ಧಕ್ಕೆಯಾಗಿದೆ. ಕಾರ್ಯಕರ್ತರ ಈ ಆಕ್ರೋಶ ಮತ್ತು ಭಾವನೆಗಳಿಗೆ ಗೌರವ ನೀಡಿ, ಜೂನ್ 8ರಂದು ಹೊಸದಿಲ್ಲಿಯಲ್ಲಿ ನಡೆಯಲಿರುವ ಐಎನ್‌ಡಿಐಎ ಒಕ್ಕೂಟದ ಸಭೆಯಲ್ಲಿ ಡಿಎಂಕೆ ಭಾಗವಹಿಸದಿರಲು ತೀರ್ಮಾನಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮತ್ತೊಂದೆಡೆ, ಮುಂಬರುವ ಮಳೆಗಾಲದ ಅಧಿವೇಶನದಲ್ಲಿ ಕ್ಷೇತ್ರಗಳ ಮರುವಿಂಗಡಣೆ ವಿಧೇಯಕವನ್ನು ಪುನಃ ಮಂಡಿಸಲು ಸಿದ್ಧತೆ ನಡೆಸಿರುವ ಕೇಂದ್ರ ಸರಕಾರವು ಪ್ರಾದೇಶಿಕ ಪಕ್ಷಗಳ ಜತೆಗೆ ಸಮಾಲೋಚನೆ ಆರಂಭಿಸಿದೆ. ಈ ನಿಟ್ಟಿನಲ್ಲಿ ವಿಧೇಯಕಕ್ಕೆ ಡಿಎಂಕೆಯಿಂದ ಬೆಂಬಲದ ಹಸಿರು ನಿಶಾನೆಯನ್ನು ಬಿಜೆಪಿ ನಾಯಕರಿಗೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಕಾಕ್ರೋಚ್ ದೇಶವ್ಯಾಪಿ ಹೋರಾಟ

ಹೊಸದಿಲ್ಲಿ: ಸಿಬಿಎಸ್‌ಇ ಮೌಲ್ಯಮಾಪನ ಎಡವಟ್ಟು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಷಯವಾಗಿ ಕೇಂದ್ರ ಸರಕಾರದ ವಿರುದ್ಧ ಸಮರ ಸಾರಿರುವ ಕಾಕ್ರೋಚ್ ಜನತಾ ಪಕ್ಷ, ದೇಶವ್ಯಾಪಿ ಹೋರಾಟ ನಡೆಸಲು ಯೋಜನೆ ರೂಪಿಸುತ್ತಿದೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿರುವ ಸಿಜೆಪಿ, ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆಗೆ ಸಿದ್ಧ ಇರುವುದಾಗಿ ಘೋಷಣೆ ಮಾಡಿದೆ. ಸರಕಾರ ಹಾಗೂ ಪ್ರತಿಪಕ್ಷಗಳ ಜತೆ ಮಾತುಕತೆಗೆ ಸಿದ್ಧವಿರುವುದಾಗಿ ಹೇಳಿಕೊಂಡಿದೆ. 'ಸಿಬಿಎಸ್‌ಇ ಮುಖ್ಯಸ್ಥರನ್ನು ವರ್ಗಾವಣೆ ಮಾಡಿದ ಸರಕಾರದ ಕ್ರಮ ಕಣ್ಣೊರೆಸುವ ತಂತ್ರವಾಗಿದೆ. ಹೊಣೆಗಾರಿಕೆ ಹೊತ್ತುಕೊಳ್ಳಬೇಕಿರುವ ಸರಕಾರ, ಯುವ ಜನರ ದಿಕ್ಕು ತಪ್ಪಿಸಲು ಯತ್ನಿಸುತ್ತಿದೆ. ಶಿಕ್ಷಣ ವ್ಯವಸ್ಥೆಯ ಲೋಪಗಳಿಗೆ ಹೊಣೆಗಾರಿಕೆ ನಿಗದಿಪಡಿಸಬೇಕು. ಪಾರದರ್ಶಕ ಆಡಳಿತ ಕ್ರಮಗಳ ಮೂಲಕ ಮೂಲ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು,'' ಎಂದು ಸಿಜೆಪಿ ವಕ್ತಾರ ಸೌರವ್ ದಾಸ್ ಆಗ್ರಹಿಸಿದ್ದಾರೆ.

''ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ಅವರು ಜೂನ್ 6 ರಂದು ಭಾರತಕ್ಕೆ ಆಗಮಿಸಲಿದ್ದಾರೆ. ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಪೊಲೀಸರ ಅನುಮತಿ ಕೋರಲಿದ್ದಾರೆ. ಯುವ ಜನತೆ ಸಿಜೆಪಿಯ ಹೋರಾಟ ಬೆಂಬಲಿಸಬೇಕು,'' ಎಂದು ಸೌರವ್ ದಾಸ್ ಮನವಿ ಮಾಡಿದ್ದಾರೆ. ಲಡಾಕ್ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಸಿಜೆಪಿ ಹೋರಾಟವನ್ನು ಬೆಂಬಲಿಸಿದ್ದಾರೆ.

ನಾಳೆ ಭಾರತಕ್ಕೆ ಅಭಿಜಿತ್ ದೀಪ್ಕೆ?

ಸಿಜೆಪಿಗೆ ವಕ್ತಾರರ ನೇಮಕ: ಈ ನಡುವೆ ಸಿಜೆಪಿ ಪಕ್ಷದ ಆಡಳಿತಾತ್ಮಕ ತೀರ್ಮಾನಗಳ ಕುರಿತು ಮಾಹಿತಿ ಹಂಚಿಕೊಳ್ಳಲು, ವಿವಿಧ ಹಂತದ ಸಂಘಟನೆ, ಚಳವಳಿ ಮುನ್ನಡೆಸಲ ಮೂವರು ವಕ್ತಾರರನ್ನು ನೇಮಕ ಮಾಡಲಾಗಿದೆ.

ತನಿಖಾ ಪತ್ರಕರ್ತ ಸೌರವ್ ದಾಸ್ ಅವರನ್ನು ಸಿಜೆಪಿ ಆಂದೋಲನದ ಮುಖ್ಯ ವಕ್ತಾರರಾಗಿ ನೇಮಿಸಲಾಗಿದೆ. ರಾಜಕೀಯ ಸಂಶೋಧಕ, ಬರಹಗಾರ, ಚಲನಚಿತ್ರ ನಿರ್ಮಾಪಕ ವಿಜೇತಾ ದಹಿಯಾ ಅವರನ್ನು ವಕ್ತಾರರಾಗಿ ನೇಮಿಸಲಾಗಿದೆ. ಐಐಟಿ ಕಾನ್ಪುರ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅಧ್ಯಯನ ಮಾಡಿದ್ದ ಆಶುತೋಷ್ ರಂಕಾ ಅವರನ್ನು ಮೂರನೇ ವಕ್ತಾರರಾಗಿ ನೇಮಕ ಮಾಡಲಾಗಿದೆ.

ಲಡ್ಡು ಕಲಬೆರಕೆ: 15 ಕಡೆ ಇ.ಡಿ ದಾಳಿ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನದ ಲಡ್ಡು ಪ್ರಸಾದಕ್ಕೆ ತುಪ್ಪ ಕಲಬೆರಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಭಾರಿ ಕಾರ್ಯಾಚರಣೆ ನಡೆಸಿದೆ. ದೇಶದ ವಿವಿಧ ರಾಜ್ಯಗಳ ಒಟ್ಟು 15 ಪ್ರಮುಖ ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಅಕ್ರಮ ಆಸ್ತಿಯನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಅಹಲ್ಯಾನಗರ, ಬಿಕಾನೇರ್, ಡೆಹ್ರಾಡೂನ್, ದಿಲ್ಲಿ, ದಿಂಡಿಗಲ್, ಗುಂಟೂರು, ಮುಂಬಯಿ ಮತ್ತು ರೂರ್ಕಿ ನಗರಗಳಲ್ಲಿ ಸುದೀರ್ಘ ಶೋಧ ಕಾರ್ಯಾಚರಣೆ ನಡೆದಿದೆ. ಹಗರಣದ ಪ್ರಮುಖ ಆರೋಪಿಗಳಾದ ಪೋಮಿಲ್ ಜೈನ್, ವಿಪಿನ್ ಜೈನ್, ರಾಜು ರಾಜಶೇಖರನ್, ರಾಜೇಶ್ ಮನ್ಸುಖ್‌ಲಾಲ್ ಚಾವ್ಡಾ, ಅಪೂರ್ವ ವಿನಾಯಕಾಂತ್ ಚಾವ್ಡಾ ಅವರ ಕಚೇರಿ ಹಾಗೂ ವಸತಿ ಗೃಹಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದಾಳಿಯ ಸಂದರ್ಭದಲ್ಲಿ ಅಧಿಕಾರಿಗಳು 60 ಲಕ್ಷ ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಇದರೊಂದಿಗೆ, ಅಪರಾಧ ಕೃತ್ಯದ ಹಣದಿಂದ ಖರೀದಿಸಲಾಗಿದ್ದ ಬರೋಬ್ಬರಿ 45 ಕೋಟಿ ರೂ. ಅಧಿಕ ಮೌಲ್ಯದ ಸ್ಥಿರಾಸ್ತಿ ಮತ್ತು ಹೂಡಿಕೆಯ ವಿವರಗಳನ್ನು ತನಿಖಾಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಆರೋಪಿಗಳು ಮತ್ತು ಅವರ ಕುಟುಂಬದವರ ಹೆಸರಿನಲ್ಲಿರುವ ಹಲವು ಬೇನಾಮಿ ಆಸ್ತಿಗಳ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 155

ಶುಕ್ರವಾರ,5 ಜೂನ್ 2026 | ಪುಟಗಳು: 17+4 | ಬೆಲೆ: ₹ 5.00

VK
ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
ಇಂದು ವಿಶ್ವ ಪರಿಸರ ದಿನ
PRIDE OF YOUNG KARNATAKA

ಅಣ್ಣಾಮಲೈ ಬಿಜೆಪಿಯಲ್ಲಿ ಇರುವರೋ, ಬಿಡುವರೋ: ಇಂದು ಚೆನ್ನೈ ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ

ಬೆಂಗಳೂರು ದರ

₹14,310	₹15,611	₹2,80,000
1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಜನದಟ್ಟಣೆ ನಡುವೆಯೂ ನಗರವಾಸಿಗಳಲ್ಲಿ ಒಂಟಿತನ ಗ್ರಾಮೀಣ ಜೀವನದ ಬಗ್ಗೆ ಸಿಜೆಐ ಮೆಚ್ಚುಗೆ

ವಿಕ ಹೊಂಗಿರಣ

ಪರಿಸರದ ವಿಚಾರದಲ್ಲಿ ನಾವು ಸದಾ 'ಸಲ್ಯೂಷನ್' ಪರವಾಗಿರಬೇಕೇ ಹೊರತು 'ಪೊಲ್ಯೂಷನ್'ಗೆ ಕಾರಣವಾಗಬಾರದು.

ಸಿಎಂ ಡಿಕೆಶಿ ಮೊದಲ ಸಭೆಯಲ್ಲೇ ಪವರ್‌ಫುಲ್ ನಿರ್ಧಾರ | ಸಾರ್ವಜನಿಕ ದೂರಿಗೆ ಸ್ಪಂದನೆ
ರೌಡಿ ನಿಗ್ರಹಕ್ಕೆ ಪ್ರತ್ಯೇಕ ಪಡೆ | ಜಾತಿ-ಧರ್ಮದ ಪ್ರಭಾವಕ್ಕೆ ಆಸ್ಪದವಿಲ್ಲ | ಖಡಕ್ ವಾರ್ನಿಂಗ್

ಅಹವಾಲು ಸಚಿವಾಲಯ

■ **ವಿಕ ಸುದ್ದಿಲೋಕ** ಬೆಂಗಳೂರು

ಸಾರ್ವಜನಿಕರ ಅಹವಾಲುಗಳು ಮತ್ತು ಕುಂದುಕೊರತೆಗಳನ್ನು ಪರಿಹರಿಸಲು ತಮ್ಮ ಸರಕಾರವು ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲಿದೆ ಎಂದು ನೂತನ ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ''ಜನಸಾಮಾನ್ಯರ ಮನವಿಗಳನ್ನು ಸ್ವೀಕರಿಸಿ, ಆಲಿಸಿ ಪರಿಹರಿಸುವ ಕೆಲಸವನ್ನು ಈ ಸಚಿವಾಲಯ ಮಾಡಲಿದ್ದು, ಸಚಿವರೊಬ್ಬರಿಗೆ ಈ ಜವಾಬ್ದಾರಿ ನೀಡಲಾಗುವುದು,'' ಎಂದು ತಿಳಿಸಿದರು.

ತಮ್ಮ ದೂರು-ದುಮ್ಮಾನ, ಬೇಡಿಕೆಗಳನ್ನು ಹೊತ್ತು ರಾಜ್ಯದ ಮೂಲೆ ಮೂಲೆಗಳಿಂದ ಬೆಂಗಳೂರಿಗೆ ಬರುವ ಜನರ ಅಹವಾಲುಗಳನ್ನು ಆಲಿಸುವ ವ್ಯವಸ್ಥೆ ಆಗಬೇಕಿದೆ.

ಧರಣಿ ಅಥವಾ ಪ್ರತಿಭಟನೆ ನಡೆಸುವವರ ಕಷ್ಟಗಳನ್ನು ಕೇಳಿ, ಆ ಎಲ್ಲವನ್ನೂ ಅರ್ಥಮಾಡಿಕೊಳ್ಳಬೇಕಿದೆ. ಜತೆಗೆ, ಅವರ ಬೇಡಿಕೆಗಳು ಕಾನೂನುಬದ್ಧವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವುದು ಮುಖ್ಯವಾಗಿದೆ. ಅಧಿಕಾರಿಗಳು ಅವರನ್ನು ಭೇಟಿಯಾಗಿ, ನೈಜ ಸಂಗತಿಗಳನ್ನು ಆಲಿಸಿ, ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕು. ಆದ್ದರಿಂದಲೇ ಈ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಸಭೆ ಬಳಿಕ ತಿಳಿಸಿದರು.

ಎನ್‌ಆರ್‌ಐಗೂ ಸಚಿವಾಲಯ!

ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ಹೊಂದಿರುವ ಅನಿವಾಸಿ ಭಾರತೀಯರ (ಎನ್‌ಆರ್‌ಐ) ಅಪೇಕ್ಷೆಗೆ ಸ್ಪಂದಿಸಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲಾಗುವುದು ಎಂದು ಸಿಎಂ ತಿಳಿಸಿದರು. ಈ ಎರಡು ಪ್ರತ್ಯೇಕ ಸಚಿವಾಲಯಗಳ ಸ್ಥಾಪನೆಗೆ ಅಗತ್ಯ ಸಿದ್ಧತೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಜಯ ಕರ್ನಾಟಕ ಆಶಯಕ್ಕೆ ಪೂರಕ!

ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸುವ ಸಂದರ್ಭದಲ್ಲಿ 'ವಿಜಯ ಕರ್ನಾಟಕ' ಪತ್ರಿಕೆಯು ತನ್ನ ಎಲ್ಲ ಸ್ಥಾನಿಕ ಸಂಪಾದಕರು ಹಾಗೂ ರಾಜ್ಯದ ಮೂಲೆ ಮೂಲೆಗಳ ಶ್ರೀಸಾಮಾನ್ಯರಿಂದ ಮುಖ್ಯಮಂತ್ರಿಯವರಿಗೆ ಪತ್ರ ಬರೆಸಿ, ನಾಡಿನ ಅಪೇಕ್ಷೆ-ಅಭೀಪ್ಸೆಗಳನ್ನು ಮುಂದಿಟ್ಟಿತ್ತು. ಜನಸಾಮಾನ್ಯರ ನಿರೀಕ್ಷೆಗಳು, ಆಶೋತ್ತರಗಳು ಹಾಗೂ ದಿನನಿತ್ಯದ ಕುಂದುಕೊರತೆಗಳನ್ನು ಈ ಮೂಲಕ ಸರಕಾರದ ಗಮನಕ್ಕೆ ತರಲಾಗಿತ್ತು. ಪತ್ರಿಕೆಯ ಈ ಕಳಕಳಿಗೆ ಪೂರಕವಾಗಿ, ಸಾರ್ವಜನಿಕರ ಅಹವಾಲುಗಳನ್ನು ಆಲಿಸಲೆಂದೇ ಸಿಎಂ ಈಗ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಮುಂದಾಗಿರುವುದು ಅತ್ಯಂತ ಸ್ವಾಗತಾರ್ಹ ಹಾಗೂ ಜನಪರ ಹೆಜ್ಜೆಯಾಗಿದೆ.

ನಮ್ಮ ಸರಕಾರ ಜಾತಿ, ಧರ್ಮ ಸೇರಿದಂತೆ ಯಾವುದೇ ಪ್ರಭಾವಕ್ಕೆ ಒಳಗಾಗುವುದಿಲ್ಲ. ಕಾನೂನುಬದ್ಧವಾಗಿ ಜನ ಒಪ್ಪುವಂತೆ ಕೆಲಸ ಮಾಡಲಿದೆ. ಅಧಿಕಾರಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿ ಸರಕಾರಕ್ಕೆ ಒಳ್ಳೆಯ ಹೆಸರು ತಂದುಕೊಡಬೇಕು.

- ಡಿ.ಕೆ.ಶಿವಕುಮಾರ್ ಸಿಎಂ

ಹಾಲಿ 'ಗ್ಯಾರಂಟಿ'ಗಳ ಪರಿಷ್ಕರಣೆ ಇಲ್ಲ »02

ಅಂತೂ ಕೇರಳಕ್ಕೆ ಮುಂಗಾರು

ಹೊಸದಿಲ್ಲಿ: ದೇಶಾದ್ಯಂತ ಕೃಷಿ ಚಟುವಟಿಕೆಗಳಿಗೆ ವೇಗ ನೀಡುವ ನೈಋತ್ಯ ಮುಂಗಾರು ಮಾರುತ ಕೊನೆಗೂ ನಾಲ್ಕು ದಿನ ತಡವಾಗಿ ಗುರುವಾರ (ಜೂ.6) ಕೇರಳ ಕರಾವಳಿಗೆ ತಲುಪಿದೆ.

ಭಾರತೀಯ ಹವಾಮಾನ ಇಲಾಖೆ ಈ ವಿಷಯ ಖಚಿತಪಡಿಸಿದ್ದು, ಮುಂದಿನ 2-3 ದಿನಗಳಲ್ಲಿ ಕರ್ನಾಟಕ, ತಮಿಳುನಾಡು, ಸೇರಿದಂತೆ ದಕ್ಷಿಣ ಭಾರತದ ಹಲವು ಭಾಗಗಳಿಗೆ ಮುಂಗಾರು ವ್ಯಾಪಿಸಲಿದೆ ಎಂದು ಹೇಳಿದೆ.

ಮುಂಗಾರು ಪರಿಣಾಮ ಕರ್ನಾಟಕದಲ್ಲಿ ಜೂನ್ 5ರಿಂದ 9ರವರೆಗೆ ಮಳೆಯ ತೀವ್ರತೆ ಹೆಚ್ಚಲಿದ್ದು, ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಈ ಅವಧಿಯಲ್ಲಿ ಕರಾವಳಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಮಲೆನಾಡು, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲೂ ಜೂನ್ 9ರವರೆಗೆ ಚದುರಿದಂತೆ ಅಲ್ಲಲ್ಲಿ ಭಾರಿ ಮಳೆ ಸುರಿಯಲಿದೆ. ಉಳಿದಂತೆ ಈ ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ ಸಾಧಾರಣದಿಂದ ಹಗುರ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಟ್ರಂಪ್ ರಣೋತ್ಸಾಹಕ್ಕೆ ತಡೆ?

ವಾಷಿಂಗ್ಟನ್: ಇರಾನ್ ವಿರುದ್ಧದ ಯುದ್ಧ ಮುಂದುವರಿಸುವ ಸಂಬಂಧ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಅಧಿಕಾರ ಮೊಟಕುಗೊಳಿಸಲು ಅಮೆರಿಕ ಸಂಸತ್ತಿನ ಕೆಳಮನೆಯಲ್ಲಿ (ಪ್ರಜಾಪ್ರತಿನಿಧಿ ಸಭೆ) 'ಯುದ್ಧ ಅಧಿಕಾರ ನಿರ್ಣಯ' ಅಂಗೀಕರಿಸಲಾಗಿದೆ. ಈ ನಿರ್ಣಯಕ್ಕೆ ಪ್ರತಿಪಕ್ಷ ಡೆಮಾಕ್ರಟಿಕ್ ಸದಸ್ಯರಿಗೆ ಸ್ವಪಕ್ಷ ರಿಪಬ್ಲಿಕನ್ ಸಂಸದರೂ ಬೆಂಬಲಿಸಿರುವುದು ಅಮೆರಿಕ ಅಧ್ಯಕ್ಷರಿಗೆ ಭಾರಿ ಮುಖಭಂಗ ಉಂಟು ಮಾಡಿದೆ.



ಮೂರು ತಿಂಗಳಿನಿಂದ ನಡೆಯುತ್ತಿರುವ ಸಂಘರ್ಷ, ಹೆಚ್ಚುತ್ತಿರುವ ಆರ್ಥಿಕ ನಷ್ಟದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಆಡಳಿತಾರೂಢ ಪಕ್ಷದ ನಾಲ್ವರು ಸಂಸದರು, ಡೆಮಾಕ್ರಟಿಕ್ ಪಕ್ಷದ ಜತೆ ಕೈಜೋಡಿಸುವ ಮೂಲಕ 215-208 ಮತಗಳಿಂದ ಯುದ್ಧ ಅಧಿಕಾರ ನಿರ್ಣಯ ಅಂಗೀಕರಿಸಲು ನೆರವಾದರು. ಕೆಳಮನೆಯಲ್ಲಿ ಅಂಗೀಕರಿಸಲಾದ ಯುದ್ಧ ಅಧಿಕಾರ ನಿರ್ಣಯ ಮೇಲ್ಮನೆ ಸೆನೆಟ್ ಒಪ್ಪಿಗೆ ಪಡೆಯಬೇಕಿದೆ. ಜತೆಗೆ ಅಧ್ಯಕ್ಷರ ವೀಟೊ ಅಧಿಕಾರ ಪ್ರಯೋಗದ ಪರೀಕ್ಷೆ ಎದುರಿಸಬೇಕಿದೆ. ವಿವರ»10

Sri Shridevi Charitable Trust (R.)
SHRIDEVI INSTITUTE OF ENGINEERING AND TECHNOLOGY
(Approved by AICTE, New Delhi, Recognised by Govt. of Karnataka and Affiliated to VTU, Belagavi)
Sira Road, Tumakuru - 572106, Karnataka. | Website: www.shrideviengineering.org
APPOINTMENTS
PROFESSORS
CSE, ISE, ECE, AI & DS, AI & ML, Cyber Security
- Minimum 15+ years of Teaching experience in Engineering Colleges
- Strong academic background with excellence in Teaching, Research and Academic Administration.
- Proven research publications, funded projects and industry collaboration preferred.
RESEARCH HEAD
- Minimum 20+ years of experience in Research & Development.
- Expertise in Research Collaboration, Grants, Fund Raising, Consultancy and Innovation Projects.
- Strong exposure in funded research programs (National / International) is preferred.
HEAD OF THE MANAGEMENT STUDIES
- Minimum 20+ years of experience in Business Management Institutions.
- Strong expertise in Academic works, Team Leadership, Institutional Growth, Research and Industry Connected.
- Experience in Accreditation, Admissions Strategy and Faculty Development preferred.
Attractive Salary for Deserved Candidates | Supportive Environment | Opportunities for Growth & Excellence | Innovative Collaborative
Candidates from IITs, IIMs, IISc and other Reputed Central Institutions will be given preference.
Interested Professionals may send their updated Profile on or before 15-06-2026 to: principal@shrideviengineering.org
For More Details, Call: 0816-2212629, 9686687361

ಅಧಿಕಾರಿಗಳಿಗೆ ವರ್ಕಿಂಗ್ ಪ್ಲ್ಯಾನ್ ಗಡುವು!

ಅಧಿಕಾರ ಸ್ವೀಕರಿಸಿದ ಮರುದಿನವೇ ಸಿಎಂ ಆ್ಯಕ್ಷನ್ | ಅಧಿಕಾರಿಗಳ ಬಳಿಗೆ ಹೋಗಿ ಅಭಯ ನೀಡಿದ ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮರು ದಿನವೇ ಡಿ.ಕೆ.ಶಿವಕುಮಾರ್ ಅವರು ಗುರುವಾರ ಎಲ್ಲ ಇಲಾಖೆ ಮುಖ್ಯಸ್ಥರು, ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿದರು. ತಮ್ಮ ಆಡಳಿತ ವೈಖರಿ ಹಾಗೂ ಗುರಿ, ಗುರಿಗಳನ್ನು ಅಧಿಕಾರಿಗಳಿಗೆ ಮನದಟ್ಟು ಮಾಡಿಕೊಟ್ಟ ಮುಖ್ಯಮಂತ್ರಿಯವರು, ರಾಜ್ಯದ ಅಭಿವೃದ್ಧಿಯ ಹಾದಿಗೆ ಮೆಟ್ಟಿಲಾಗಿ ಜನ ಒಪ್ಪುವಂತೆ ದಕ್ಷತೆ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಯಾವುದೇ ಒತ್ತಡಕ್ಕೆ ಮಣಿಯದೆ ಪ್ರತಿಯೊಬ್ಬ ಅಧಿಕಾರಿಯೂ ತಮ್ಮ ಆತ್ಮಸಾಕ್ಷಿಗೆ ಒಪ್ಪುವಂತೆ ಜನಪರವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಎಲ್ಲ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು. ಯಾವುದೇ ಕಾರಣಕ್ಕೂ ಆಡಳಿತ ಹಾದಿ ತಪ್ಪಬಾರದು ಮತ್ತು ಅದಕ್ಕೆ ಅವಕಾಶವನ್ನೂ ನೀಡಬಾರದು, ಭ್ರಷ್ಟಾಚಾರ ಮುಕ್ತ ಆಡಳಿತ ನಮ್ಮ ಸರಕಾರದ ಆದ್ಯತೆ ಮತ್ತು ಗುರಿಯಾಗಿದ್ದು ಸರಕಾರದ ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸಬೇಕು ಎಂದು ಸ್ಪಷ್ಟ ನಿರ್ದೇಶನಗಳನ್ನು ನೀಡಿದರು. ಮುಂದಿನ 15 ದಿನಗಳಲ್ಲಿ ಎಲ್ಲ ಇಲಾಖೆಗಳ ಕಾರ್ಯ ಯೋಜನೆ (ವರ್ಕಿಂಗ್ ಪ್ಲಾನ್) ಸಿದ್ಧಪಡಿಸಬೇಕು ಎಂದು ಸೂಚನೆ ನೀಡಿದ್ದಾರೆ.

ನೌಕರಶಾಹಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವಾಗಿ ಮುಖ್ಯಮಂತ್ರಿಯವರು ಅಧಿಕಾರಿಗಳ ಸಾಲಿನತ್ತ ತಾವೇ ತೆರಳಿ ಮಾತನಾಡಿಸಿದರು. ಉತ್ತಮ ಕೆಲಸಕ್ಕೆ ತಮ್ಮ ಬೆಂಬಲ ಮತ್ತು ಸಹಕಾರ ಇದ್ದೇ ಇರುತ್ತದೆ ಎಂದು ಅಭಯ ನೀಡಿದರು. ''ಬುದ್ಧಿವಂತಿಕೆಗಿಂತ ಪ್ರಾಮಾಣಿಕತೆ ಇರಬೇಕು. ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದ್ದೇ ಇರುತ್ತದೆ. ಸರಕಾರಕ್ಕೆ ಮಹೋನ್ನತ ಇರಬೇಕು ಅಷ್ಟೇ. ಯಾವುದೇ ಪ್ರಭಾವ ಅಥವಾ ಒತ್ತಡಕ್ಕೆ ಮಣಿಯದೆ ಕಾನೂನು ಬದ್ಧವಾಗಿ ಕೆಲಸ ಮಾಡಬೇಕು. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸರಕಾರಕ್ಕೆ ಒಳ್ಳೆಯ ಹೆಸರು ತರಬೇಕು,'' ಎಂದು ನಿರ್ದೇಶನ ನೀಡಿದರು.

ರೌಡಿಸಂ ಕಂಟ್ರೋಲ್‌ಗೆ ಸೆಲ್

ಪೊಲೀಸರು ರಾಜ್ಯದಲ್ಲಿ ರೌಡಿ ಚಟುವಟಿಕೆಗಳಿಗೆ ಸಂಪೂರ್ಣ ಕಡಿವಾಣ ಹಾಕಬೇಕು. ಕಾನೂನು-ಸುವ್ಯವಸ್ಥೆಯನ್ನು ಆದ್ಯತೆಯಾಗಿ ಪರಿಗಣಿಸಬೇಕು. ಅದಕ್ಕಾಗಿ ಪ್ರತಿ ತಾಲೂಕಿನಲ್ಲೂ ರೌಡಿಗಳ ನಿಗ್ರಹಕ್ಕೆ ಪ್ರತ್ಯೇಕ ಸೆಲ್ ರಚನೆ ಮಾಡಬೇಕು. ಕ್ರಿಮಿನಲ್ ಚಟುವಟಿಕೆ ಹತೋಟಿಯಲ್ಲಿಡುವ ಜತೆಗೆ, ಹಳೇ ರೌಡಿಗಳ ಮೇಲೆ ನಿಗಾ ಇಡಬೇಕು. ಡ್ರಗ್ಸ್ ದಂಧೆ, ಮಟ್ಕಾ, ಜೂಜಾಟ ಹಾಗೂ ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

ಹಿರಿಯ ಅಧಿಕಾರಿಗಳ ಸಭೆ ನಿರ್ಧಾರಗಳು ಏನು?: ಸಂಪುಟ ತೀರ್ಮಾನ ಅನುಷ್ಠಾನಕ್ಕೆ ವೇಗ: ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೇರಿದಂತೆ ಬುಧವಾರ ಚೊಚ್ಚಲ ಸಂಪುಟ ಸಭೆಯಲ್ಲಿ ಕೈಗೊಂಡಿರುವ ಐದು ಪ್ರಮುಖ ತೀರ್ಮಾನಗಳ ಜಾರಿಗೆ ತಕ್ಷಣದಿಂದ ಕ್ರಮ ವಹಿಸಬೇಕು.

ವರ್ಕಿಂಗ್ ಪ್ಲ್ಯಾನ್‌ಗೆ 15 ದಿನ ಗಡುವು: ಎಲ್ಲ ಇಲಾಖೆಗಳಲ್ಲಿ ಮುಂದಿನ ಎರಡು ವಾರಗಳಲ್ಲಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಬೇಕು. ಇಲಾಖಾವಾರು ಬಾಕಿ ಇರುವ ಕೆಲಸಗಳು ಹಾಗೂ ಮುಂದಿನ ಗುರಿಗಳನ್ನು ಪಟ್ಟಿ ಮಾಡಬೇಕು.

ಸಿಎಸ್‌ಆರ್ ನಿಧಿಯ ಲೆಕ್ಕಕೊಡಿ: ರಾಜ್ಯದಲ್ಲಿ ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ದುರ್ಬಳಕೆಯಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಶಾಶ್ವತ ಬ್ರೇಕ್ ಹಾಕಬೇಕು. ಭ್ರಷ್ಟಾಚಾರ ಮುಕ್ತ ಆಡಳಿತ ನಮ್ಮ ಸರಕಾರದ ಗುರಿ. ಸಿಎಸ್‌ಆರ್ ನಿಧಿ ಕುರಿತು ತಮಗೆ ಪೂರ್ಣ ಮಾಹಿತಿ ಒದಗಿಸಬೇಕು.

ಎಸ್‌ಐಆರ್ ಬಗ್ಗೆ ನಿಗಾ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಡೆಯುತ್ತಿದ್ದು, ಯಾವುದೇ ವ್ಯಕ್ತಿ ತಪ್ಪು ಮಾಹಿತಿ ನೀಡಿ ಅಥವಾ ಕಾನೂನು ಬಾಹಿರವಾಗಿ ಹೆಸರು ಸೇರ್ಪಡೆ ಆಗಬಾರದು. ಈ ಬಗ್ಗೆ ನಿಗಾ ವಹಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಅಗತ್ಯ ಇರುವ ಕಡೆಗಳಲ್ಲಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಬೇಕು,'' ಎಂದು ಹೇಳಿದರು.

ಗ್ಯಾರಂಟಿ ಪರಿಷ್ಕರಣೆ ಇಲ್ಲ

ಮೃತರು, ಅನ್ಯರಾಜ್ಯದವರ ಪತ್ತೆಯಷ್ಟೇ ಎಂದ ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು

ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಇಲ್ಲ, ಫಲಾನುಭವಿಗಳ ಮಾಹಿತಿ ಸಂಗ್ರಹ ಹಾಗೂ ದೃಢೀಕರಣ ಪ್ರಕ್ರಿಯೆ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ಅಧಿಕಾರಿಗಳ ಮೊದಲ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಗ್ಯಾರಂಟಿ ಯೋಜನೆ ಫಲಾನುಭವಿಗಳ ಮೊಬೈಲ್ ಸಂಖ್ಯೆ ಹಾಗೂ ವಿವರಗಳಲ್ಲಿ ವ್ಯತ್ಯಾಸವಿದೆ. ಜತೆಗೆ ನೈಜತೆಯನ್ನೂ ದೃಢೀಕರಿಸಿಕೊಳ್ಳಬೇಕಿದೆ. ಆ ಪ್ರಕ್ರಿಯೆ ನಡೆಯುತ್ತಿದೆ,'' ಎಂದು ಹೇಳಿದರು.

''ಗೃಹಜ್ಯೋತಿ ಯೋಜನೆಯಡಿ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಪಡೆದು ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಯೋಜನೆಯಲ್ಲಿ 1.64 ಕೋಟಿ ಫಲಾನುಭವಿಗಳಿದ್ದು, ಯಾರು ಅರ್ಹರಿದ್ದಾರೋ ಅವರು ಸೌಲಭ್ಯ ಪಡೆಯಲು ಅಭ್ಯಂತರವಿಲ್ಲ. ಆದರೆ, ಒಬ್ಬರ ಹೆಸರಲ್ಲೇ ಐದಾರು ಮೀಟರ್‌ಗಳಿದ್ದು, ಇವರಲ್ಲಿ ನಮ್ಮ ರಾಜ್ಯದವರು ಇದ್ದಾರೋ ಅಥವಾ ಬೇರೆ ರಾಜ್ಯದವರು ಇದ್ದಾರೋ ಎಂಬ ಮಾಹಿತಿ ಸರಕಾರಕ್ಕೆ ಇರಬೇಕಾಗುತ್ತದೆ. ಮೃತರ ಹೆಸರಿನಲ್ಲಿ ಗೃಹಲಕ್ಷ್ಮೀ ಹಣ ಪಡೆಯಲಾಗಿದ್ದು, ಇದರಿಂದ 120 ಕೋಟಿ ರೂ. ವ್ಯತ್ಯಾಸವಾಗಿದೆ. ಆದಕ್ಕಾಗಿ ನಿಖರ ಮಾಹಿತಿ ಪಡೆಯಲಾಗುತ್ತಿದೆ,'' ಎಂದು ಸಮಜಾಯಿಷಿ ನೀಡಿದರು.

ಮುಂದಿನ ಚುನಾವಣೆ ಗಮನದಲ್ಲಿಟ್ಟುಕೊಂಡು ಯುವಕರಿಗಾಗಿ ಯೋಜನೆಗಳನ್ನು ಘೋಷಣೆ ಮಾಡಲಾಗಿದೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ''ಯಾವುದೇ ಚುನಾವಣೆ ದೃಷ್ಟಿಯಿಂದ ನಾವು ಯಾವುದೇ ಕೆಲಸ ಮಾಡುತ್ತಿಲ್ಲ, ಯುವಕರ ಜೀವನದ ಗುಣಮಟ್ಟ ಸುಧಾರಣೆ ನಮ್ಮ ಉದ್ದೇಶ. ಬೆಲೆ ಏರಿಕೆ ಸಂದರ್ಭದಲ್ಲಿ ಜನರ ನೆರವಾಗಲು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಆದಕ್ಕಾಗಿ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಸೌಲಭ್ಯ ಕಲ್ಪಿಸುವ ತೀರ್ಮಾನ ಮಾಡಲಾಗಿದೆ,'' ಎಂದು ಹೇಳಿದರು.

ಮೇಕೆದಾಟು ಯೋಜನೆ ಜಾರಿಗೆ ಬದ್ಧ: ತಮಿಳುನಾಡಿನಲ್ಲಿ ಕಾಂಗ್ರೆಸ್ ಮೈತ್ರಿ ಸರಕಾರ ಅಧಿಕಾರದಲ್ಲಿರುವ ಹಿನ್ನೆಲೆಯಲ್ಲಿ ಮೇಕೆದಾಟು ಯೋಜನೆ ವಿಚಾರದಲ್ಲಿ ಸರಕಾರದ ನಿಲುವು ಏನು? ಎಂಬ ಪ್ರಶ್ನೆಗೆ ಉತ್ತರಿಸಿದ ಡಿ.ಕೆ.ಶಿವಕುಮಾರ್, ''ತಮಿಳುನಾಡಿನವರು ಹಲವು ವರ್ಷಗಳಿಂದ ಯೋಜನೆಯನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಈ ವಿಷಯದಲ್ಲಿ ಕೋರ್ಟ್ ಈಗಾಗಲೇ ತನ್ನ ತೀರ್ಮಾನ ಹೇಳಿದೆ. ಯೋಜನೆ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದು, ನಾವು ನಮ್ಮ ಕೆಲಸವನ್ನು ಮಾಡುತ್ತೇವೆ,'' ಎಂದು ಸ್ಪಷ್ಟಪಡಿಸಿದರು.

ತುಮಕೂರಿನ ಸಿದ್ದಗಂಗಾ ಮಠದ ಸಿದ್ದಗಂಗಾ ಸ್ವಾಮೀಜಿ ಅವರು ಬೆಂಗಳೂರಿನಲ್ಲಿ ಗುರುವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಆಶೀರ್ವದಿಸಿದರು. ಈ ವೇಳೆ ಮಾಜಿ ಉಪಮೇಯರ್ ಬಿ.ಎಸ್.ಪುಟ್ಟರಾಜು ಇದ್ದರು.

ಪರಿಷತ್‌ಗೆ 5ನೇ ಅಭ್ಯರ್ಥಿ: ಇಂದು ಘೋಷಣೆ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಜೂ.18 ರಂದು ನಡೆಯಲಿರುವ ಚುನಾವಣೆಗೆ ಐವರು ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಆಡಳಿತಾರೂಢ ಕಾಂಗ್ರೆಸ್ ನಿರ್ಧರಿಸಿದೆ. ಈಗಾಗಲೇ ನಾಲ್ವರು ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಶುಕ್ರವಾರ ಐದನೇ ಅಭ್ಯರ್ಥಿಯನ್ನು ಪ್ರಕಟಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸಂಪುಟ ನಿರ್ಣಯಕ್ಕೆ ಸತೀಶ್ ಅಸಮಾಧಾನ | ಮುಖ್ಯಮಂತ್ರಿ ಸಮರ್ಥನೆ

ಆರ್ಥಿಕ ಹೊರೆ ಎಲ್ಲಿಲ್ಲ ಹೇಳಿ?

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಸರಕಾರ ರಚನೆ ಬೆನ್ನಲ್ಲೇ ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ನೂತನ ಸಚಿವ ಸತೀಶ್ ಜಾರಕಿಹೊಳಿ ನಡುವೆ 'ಆರ್ಥಿಕ ಹೊರೆ' ಮಾತಿನ ಅಸಮಾಧಾನ ಸೃಷ್ಟಿಯಾಗಿದೆ.

''ಚೊಚ್ಚಲ ಸಚಿವ ಸಂಪುಟ ಸಭೆಯ ನಿರ್ಣಯಗಳು ಆರ್ಥಿಕ ಹೊರೆ ತರಲಿದೆ,'' ಎಂದು ನೂತನ ಸಚಿವ ಸತೀಶ್ ಜಾರಕಿಹೊಳಿಯವರೇ ಪರೋಕ್ಷ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇದರ ಬೆನ್ನಲ್ಲೆ ಪ್ರತಿಕ್ರಿಯಿಸಿದ ನೂತನ ಸಿಎಂ ಡಿ.ಕೆ.ಶಿವಕುಮಾರ್, ''ಎಲ್ಲ ಕೆಲಸದಲ್ಲೂ ಆರ್ಥಿಕ ಹೊರೆ ಇದ್ದೇ ಇರುತ್ತದೆ,''ಎಂದು ಹೇಳಿದ್ದಾರೆ.

> ಯಾವುದೇ ಕೆಲಸ ಮಾಡಿದರೂ ಆರ್ಥಿಕ ಹೊರೆ ಇದ್ದೇ ಇರುತ್ತದೆ. ಮಾಧ್ಯಮಗೋಷ್ಠಿ ನಡೆಸಿದರೂ ಅದಕ್ಕೆ ಬೇಕಾದ ಸೌಲಭ್ಯ ಕಲ್ಪಿಸಲು ಹಣಕಾಸು ಬೇಕೆ ಬೇಕಲ್ಲವೇ?
> **-ಡಿ.ಕೆ.ಶಿವಕುಮಾರ್** ಸಿಎಂ

ಬೆಂಗಳೂರಿನಲ್ಲಿ ಗುರುವಾರ ಮಾತನಾಡಿ, ''ಮೊದಲ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳಿಂದ ಸಾಕಷ್ಟು ಆರ್ಥಿಕ ಹೊರೆ ಬೀಳಲಿದೆ. ಶಾಲಾ-ಕಾಲೇಜು ವಿದ್ಯಾರ್ಥಿ ಗಳಿಗೆ ಉಚಿತ ಬಸ್ ಪಾಸ್ ವ್ಯವಸ್ಥೆಯಿಂದ ಹೆಚ್ಚಿನ ಹೊರೆಯಾಗುವುದಿಲ್ಲ, ಆದರೆ ಭಾರತ್ ಜೋಡೋ ಯುವಕ ಸಂಘಗಳನ್ನು ರಚಿಸಿ ಅವುಗಳಿಗೆ (10,000 ಸಂಘಗಳಿಗೆ ತಲಾ 10 ಲಕ್ಷ ರೂ.) ಅನುದಾನ ನೀಡುವುದು ಆರ್ಥಿಕ ಹೊರೆಗೆ ಕಾರಣವಾಗಲಿದೆ,'' ಎಂದಿದ್ದಾರೆ.



ಬಳಿಕ ಈ ನಿರ್ಣಯವನ್ನು ಸಮರ್ಥಿಸಿಕೊಂಡ ಅವರು, ''ಭಾರತ್ ಜೋಡೋ ಯುವಕರ ಸಂಘಗಳ ರಚನೆಯಿಂದ ಯುವಜನತೆಗೆ ಅನುಕೂಲವೂ ಆಗಲಿದೆ. ಇದರಲ್ಲಿ ಕ್ರೀಡಾ ಚಟುವಟಿಕೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಉತ್ತೇಜಿಸುವ ಉದ್ದೇಶವಿದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲೂ ಯುವ ಸಂಘಗಳನ್ನು ರಚಿಸಿ ನಾನಾ ಚಟುವಟಿಕೆಗಳಿಗೆ ಉತ್ತೇಜಿಸಲಾಗುವುದು,'' ಎಂದು ಹೇಳಿದರು. ''ನನಗೆ ಹೊಸ ಖಾತೆ ಬೇಡ. ಹಿಂದೆ ನಿಭಾಯಿಸಿದ್ದ ಖಾತೆಯನ್ನೇ ಮುಂದುವರಿಸಿದರೆ ಒಳ್ಳೆಯದು. ಏಕೆಂದರೆ ಕಳೆದ ಮೂರು ವರ್ಷ ಖಾತೆ ನಿರ್ವಹಣೆ ಮಾಡಿದ್ದೇನೆ. ಉತ್ತಮ ಕಾರ್ಯ ನಿರ್ವಹಣೆ ದೃಷ್ಟಿಯಿಂದ ಸಾಕಷ್ಟು ಪ್ರಯೋಗ, ಸಂಶೋಧನೆಯನ್ನೂ ನಡೆಸಿದ್ದೇನೆ. ಹಾಗಾಗಿ ಹಿಂದಿನ ಖಾತೆಯನ್ನೇ ನೀಡಿದರೆ ಉತ್ತಮ,'' ಎಂದರು.

ಜಾರಕಿಹೊಳಿ-ಹರಿಪ್ರಸಾದ್ ಭೇಟಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಗುರುವಾರ ಭೇಟಿಯಾದ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ರಾಜ್ಯಾದ್ಯಂತ ಪಕ್ಷ ಸಂಘಟನೆ ಕಾರ್ಯದಲ್ಲಿ ಸಹಕಾರ ಕೋರಿದರು.

ಸತೀಶ್ ಜಾರಕಿಹೊಳಿ ಅವರ ಸರಕಾರಿ ನಿವಾಸಕ್ಕೆ ತೆರಳಿದ ಹರಿಪ್ರಸಾದ್ ಅವರು ಸುಮಾರು ಅರ್ಧ ಗಂಟೆ ಕಾಲ ಸಂಘಟನೆ ವಿಚಾರವಾಗಿ ಗಂಭೀರ ಸಮಾಲೋಚನೆ ನಡೆಸಿದರು.

ಭೇಟಿ ಬಳಿಕ ಪ್ರತಿಕ್ರಿಯಿಸಿದ ಹರಿಪ್ರಸಾದ್, ''ಸತೀಶ್ ಜಾರಕಿಹೊಳಿ ಅವರನ್ನು ಭೇಟಿಯಾಗಿ ಸಹಕಾರ, ಬೆಂಬಲ ನೀಡುವಂತೆ ಕೋರಿದ್ದೇನೆ. ಅವರು ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ,'' ಎಂದು ಹೇಳಿದರು.

ಇದಕ್ಕೂ ಮೊದಲು ಪ್ರತಿಕ್ರಿಯಿಸಿದ್ದ ಸತೀಶ್ ಜಾರಕಿಹೊಳಿ, ''ಡಿ.ಕೆ.ಶಿವಕುಮಾರ್ ಅವರು ಹಿಂದೆ ಎರಡು ಹುದ್ದೆಯಲ್ಲಿದ್ದರು. ಆ ಸಂದರ್ಭದಲ್ಲಿ ಒಂದು ಸ್ಥಾನದಿಂದ ಅವರನ್ನು ಕೆಳಗಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಎಲ್ಲರೂ ಸುಮ್ಮನಾಗಿದ್ದರು. ಹಿಂದೆ ಮಂತ್ರಿ ಸ್ಥಾನ ಅಗತ್ಯವಿದ್ದುದರಿಂದ ಕೆಪಿಸಿಸಿ ಅಧ್ಯಕ್ಷ ಸ್ಥಾನದ ವಿಚಾರವಾಗಿ ಸುಮ್ಮನಾಗಿದ್ದೆವು. ಕೊನೆಯ ಕ್ಷಣದವರೆಗೂ ಸಚಿವ ಸ್ಥಾನದ ಬದಲಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಎಂದೇ ಇತ್ತು. ಒಬ್ಬ ವ್ಯಕ್ತಿ ಒಂದು ಹುದ್ದೆ ಎಂಬ ಕಾರಣಕ್ಕೆ ಇಷ್ಟೆಲ್ಲಾ ಬೆಳವಣಿಗೆಯಾಗಿದೆ. ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೈತಪ್ಪಿಲ್ಲ, ಹಾಗೆಯೇ ಅವಕಾಶ ವಂಚಿತ ಎಂಬಂತೆಯೂ ಇಲ್ಲ,'' ಎಂದು ಹೇಳಿದರು.

ಬೆಂಗಳೂರಿನಲ್ಲಿ ಶುಕ್ರವಾರ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ವಿಧಾನ ಪರಿಷತ್‌ನ ಸರಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ಭೇಟಿ ಮಾಡಿ ಶುಭ ಕೋರಿದರು. ಈ ವೇಳೆ ಬಿಎಂಟಿಸಿ ಅಧ್ಯಕ್ಷ ವಿ. ಎಸ್. ಆರಾಧ್ಯ ಇದ್ದರು.

ಡಿಕೆಶಿ ಸರಕಾರಕ್ಕೆ ಸಿದ್ದರಾಮಯ್ಯ ಕಂಟ್ರೋಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಚನೆಯಾದ ಹೊಸ ಸರಕಾರ ಕಾಂಗ್ರೆಸ್‌ನ ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಅವರ ರಿಮೋಟ್ ಕಂಟ್ರೋಲ್‌ನಿಂದ ಜನರಿಗೆ ಹೊಸದಾಗಿ ಏನೂ ಸಿಕ್ಕಂತಾಗಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ವಿಧಾನಸೌಧದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ''ಮುಖ್ಯಮಂತ್ರಿ ಬದಲಾಗಿರುವುದು ಹಳೆ ಸಿನಿಮಾದ ಪೋಸ್ಟರ್ ಬದಲಾದಂತಿದೆ. ಸಿದ್ದರಾಮಯ್ಯ ಮಗ ಯತೀಂದ್ರ ಸಚಿವರಾಗಿ ಬಂದಿದ್ದಾರೆಯೇ ಹೊರತು ಹೊಸದೇನೂ ಇಲ್ಲ, ಜನರು ಉತ್ತಮ ಆಡಳಿತ ಕೇಳಿದರೆ ಕಾಂಗ್ರೆಸ್ ಕುರ್ಚಿ ಬದಲಿಸಿದೆಯಷ್ಟೇ,'' ಎಂದು ವ್ಯಂಗ್ಯವಾಡಿದರು.

ಮಹಿಳಾ ವಿರೋಧಿ ಕಾಂಗ್ರೆಸ್: ''ಸಂಸತ್ತಿನಲ್ಲಿ ಮಹಿಳಾ ಮೀಸಲು ವಿಧೇಯಕವನ್ನು ಕಾಂಗ್ರೆಸ್ ವಿರೋಧಿಸಿತು. ಈಗ ಸಂಪುಟದಲ್ಲೂ ಒಬ್ಬ ಮಹಿಳೆಗೆ ಅವಕಾಶ ನೀಡದೆ ಕಡೆಗಣಿಸುವ ಮೂಲಕ ಕಾಂಗ್ರೆಸ್ ಮಹಿಳೆಯರಿಗೆ ಮೋಸ ಮಾಡಿದೆ,'' ಎಂದು ಆಕ್ಷೇಪಿಸಿದರು.

ಡಿಕೆಶಿಗೆ ಸ್ವಾತಂತ್ರ್ಯವಿಲ್ಲ: ''ಪ್ರಮಾಣ ವಚನದ ವೇಳೆ ಡಿ.ಕೆ.ಶಿವಕುಮಾರ್ ಸಂವಿಧಾನದ ಪುಸ್ತಕ ಹಿಡಿದುಕೊಂಡಿದ್ದರು. ಡಾ. ಬಿ.ಆರ್.ಅಂಬೇಡ್ಕರ್ ಸಿಎಂಗೆ ಎಲ್ಲ ಅಧಿಕಾರ ನೀಡಿದ್ದಾರೆ. ಆದರೆ ಸಂಪುಟದಲ್ಲಿ ಡಿಕೆಶಿ ಬಣದ ಯಾವುದೇ ಶಾಸಕರು ಇಲ್ಲ, ಎಲ್ಲವನ್ನೂ ಸಿದ್ದರಾಮಯ್ಯ, ಹೈಕಮಾಂಡ್ ತೀರ್ಮಾನಿಸಿದ್ದು, ಸಿಎಂಗೆ ಸ್ವಾತಂತ್ರ್ಯ ಸಿಕ್ಕಿಲ್ಲ'' ಎಂದು ದೂರಿದರು.

''ಬೆಂಗಳೂರಿನಲ್ಲಿ ಈಗಾಗಲೇ 'ಇ-ಖಾತಾ' ಹೆಸರಲ್ಲಿ ದಂಧೆ ನಡೆಯುತ್ತಿದೆ. ಇದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿದರೆ ಇನ್ನಷ್ಟು ದೊಡ್ಡ ದಂಧೆ ನಡೆಯುತ್ತದೆ. ಸರ್ವರ್ ಡೌನ್ ಎಂದು ಹೇಳಿ ಜನರನ್ನು ವಂಚಿಸಲಾಗುತ್ತಿದೆ. ಲಂಚ ಕೊಟ್ಟರಷ್ಟೇ ಸರ್ವರ್ ಕೆಲಸ ಮಾಡುತ್ತದೆ,'' ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ನಿರಾಶ್ರಿತರಿಗೆ ಸಂಘ

''ಭಾರತ್ ಜೋಡೋಗೂ ಸರಕಾರಕ್ಕೂ ಏನು ಸಂಬಂಧ? ಭಾರತ್ ಜೋಡೋ ಯುವಕ ಸಂಘದಿಂದ ಕಾಂಗ್ರೆಸ್‌ನ ನಿರಾಶ್ರಿತರಿಗೆ ಪ್ರಯೋಜನವಾಗಲಿದೆಯೇ ಹೊರತು ಯುವ ಜನರಿಗೆ ಉಪಯೋಗವಿಲ್ಲ. ಈಗಾಗಲೇ ಗುತ್ತಿಗೆದಾರರಿಗೆ ಬಾಕಿ ಕೊಡಬೇಕಿದ್ದು, ಅದನ್ನು ಪಾವತಿಸಬೇಕು. ಉತ್ತರ ಕರ್ನಾಟಕದಲ್ಲಿ ಮಕ್ಕಳು ಶಾಲೆಯ ಒಳಗೆ ಹೋಗದಂತಹ ಸ್ಥಿತಿ ಇದ್ದು, ಅವುಗಳನ್ನು ಅಭಿವೃದ್ಧಿ ಪಡಿಸಿದ್ದರೆ ಸಾಕಾಗಿತ್ತು. ಸುಖಾಸುಮ್ಮನೆ ಘೋಷಣೆ ಮಾಡಿದರೆ ಪ್ರಯೋಜನವಿಲ್ಲ,'' ಎಂದು ಆರ್.ಅಶೋಕ್ ಹೇಳಿದರು.

ಕೇರಳದಂತೆ ಆರ್ಥಿಕ ಸ್ಥಿತಿಗತಿ ಬಗ್ಗೆ ಶ್ವೇತಪತ್ರ ಹೊರಡಿಸಿ

ಕೇರಳಂನ ಮುಖ್ಯಮಂತ್ರಿ ವಿ.ಡಿ.ಸತೀಶನ್ ತಮ್ಮ ರಾಜ್ಯದ ಆರ್ಥಿಕ ಸ್ಥಿತಿಗತಿಯ ನೈಜ ಚಿತ್ರಣ ಮುಂದಿಡಲು ಶ್ವೇತಪತ್ರ ಹೊರಡಿಸಿರುವುದು ಸ್ವಾಗತಾರ್ಹ. ಅದೇ ರೀತಿ ನೂತನ ಸಿಎಂ ಡಿ.ಕೆ.ಶಿವಕುಮಾರ್ ಕೂಡ ಶ್ವೇತಪತ್ರ ಮಂಡಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದ್ದಾರೆ. ಈ ಕುರಿತು 'ಎಕ್ಸ್'ತಾಣದಲ್ಲಿ ಒತ್ತಾಯಿಸಿರುವ ಅವರು,'' ಮಾಜಿ ಸಿಎಂ ಸಿದ್ದರಾಮಯ್ಯ ಬಿಟ್ಟು ಹೋಗಿರುವ ಆರ್ಥಿಕ ಬಳುವಳಿ ಏನು? ಮುಂದಿನ ಪೀಳಿಗೆಯ ಹೆಗಲ ಮೇಲೆ ಎಷ್ಟು ಸಾಲದ ಹೊರೆ ಹಾಕಲಾಗಿದ? ಎಲ್ಲಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಸರಕಾರ ರಾಜ್ಯಕ್ಕೆ ಬಿಟ್ಟು ಹೋಗಿರುವ ನಿಜವಾದ ಸಾಕ್ಷಿಗುಡ್ಡೆ ಏನು ಎಂಬುದು ಜನರಿಗೆ ತಿಳಿಯಬೇಕು,'' ಎಂದು ಅವರು ಒತ್ತಾಯಿಸಿದ್ದಾರೆ.

ಡಿಸಿಎಂಗೆ ಕಂದಾಯ, ಪ್ರಿಯಾಂಕ್‌ಗೆ ಗೃಹ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಸಂಪುಟದ 13 ಸದಸ್ಯರಿಗೆ ಗುರುವಾರ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಹಣಕಾಸು, ಡಿಪಿಎಆರ್ ಜತೆಗೆ ಹಂಚಿಕೆಯಾಗದ ಎಲ್ಲ ಖಾತೆಗಳನ್ನು ಮುಖ್ಯಮಂತ್ರಿಯವರು ಉಳಿಸಿಕೊಂಡಿದ್ದಾರೆ.

ಡಿಸಿಎಂ ಡಾ.ಜಿ.ಪರಮೇಶ್ವರ ಅವರು ಬಯಸಿದಂತೆ ಗೃಹ ಖಾತೆಯಿಂದ ಬಿಡುಗಡೆ ಸಿಕ್ಕಿದ್ದು, ಕಂದಾಯ ಇಲಾಖೆ ಕೈಹಿಡಿದಿದೆ. ಡಿಸಿಎಂಗೆ ಹೆಚ್ಚುವರಿಯಾಗಿ ಕ್ರೀಡೆ ಮತ್ತು ಯುವಜನ ಸಬಲೀಕರಣ ಖಾತೆಯನ್ನು ನೀಡಲಾಗಿದೆ. ಪ್ರಿಯಾಂಕ್ ಖರ್ಗೆ ಅವರಿಗೆ ಮಹತ್ವದ ಗೃಹ ಖಾತೆಯನ್ನು ನೀಡಲಾಗಿದೆ. ಈ ಖಾತೆ ಜತೆಗೆ ಹೆಚ್ಚುವರಿಯಾಗಿ ಐಟಿ, ಬಿಟಿ ಇಲಾಖೆಗಳನ್ನೂ ನೀಡಲಾಗಿದೆ.

ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ ಹಾಗೂ ಡಾ.ಶರಣ ಪ್ರಕಾಶ್ ಪಾಟೀಲ್ ಈ ಮುಂಚಿನ ಖಾತೆಗಳಲ್ಲೇ ಮುಂದುವರಿದಿದ್ದಾರೆ. ಕೆ.ಜೆ.ಜಾರ್ಜ್ ಅವರಿಗೆ ಇಂಧನದ ಜತೆಗೆ ಪ್ರವಾಸೋದ್ಯಮ ಖಾತೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಅರಣ್ಯ ಸಚಿವರಾಗಿದ್ದ ಈಶ್ವರ ಖಂಡ್ರೆ ಅವರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಿಕ್ಕಿದ್ದು, ಯು.ಟಿ.ಖಾದರ್ ಅವರಿಗೆ 2013ರಲ್ಲಿ ನಿರ್ವಹಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೇ ಸಿಕ್ಕಿದೆ. ಸಂಪುಟಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ನಗರಾಭಿವೃದ್ಧಿ ಖಾತೆ ದಕ್ಕಿದೆ. ಬೈರತಿ ಸುರೇಶ್ ಅವರಿಗೆ ಸಾರಿಗೆ ಖಾತೆ ನೀಡಲಾಗಿದೆ.

ರಾಮಲಿಂಗಾರೆಡ್ಡಿ ಮುನಿಸು



ಕಂದಾಯ ಖಾತೆಯಲ್ಲೇ ಮುಂದುವರಿಯಲು ಬಯಸಿದ್ದ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ನಗರಾಭಿವೃದ್ಧಿ (ಜಿಬಿಎ) ಖಾತೆಯನ್ನು ನೀಡಲಾಗಿದೆ. ಈ ಖಾತೆಯನ್ನು ನಿರೀಕ್ಷಿಸಿದ್ದ ರಾಮಲಿಂಗಾರೆಡ್ಡಿ ಅವರು ಅಸಮಾಧಾನಗೊಂಡಿದ್ದರು. ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ದರಾಮಯ್ಯ ಮನವೊಲಿಸಿದ್ದು, ಮಹತ್ವದ ಜಲಸಂಪನ್ಮೂಲ ಖಾತೆ ನೀಡಲಾಗಿದೆ.

ಸಿದ್ದು ಪದತ್ಯಾಗ ಮುನ್ನವೇ ಸವಾಲಿನ ಗೂಗ್ಲಿ ಎಸೆತ: ವಿಜಯೇಂದ್ರ

ಜಾತಿ ಗಣತಿ ವರದಿಯನ್ನು ಏನು ಮಾಡ್ತಾರೆ?

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎಲ್ಲರನ್ನೂ ಸಂಭಾಳಿಸಿಕೊಂಡು ಸರಿದೂಗಿಸಿಕೊಂಡು ಹೋಗುವ ಸವಾಲಿನಲ್ಲೇ ಬಾಕಿ ಎರಡು ವರ್ಷ ಕಳೆದು ಹೋಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.



ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ತಮ್ಮ ಜೀವನದ ಆಸೆಯನ್ನು ಪೂರೈಸಿಕೊಂಡಿದ್ದಾರೆ. ಅವರ ಸಂಪುಟದ ಸದಸ್ಯರ ಪಟ್ಟಿನೋಡಿದಾಗ ಅದು ಡಿಕೆಶಿ ಕ್ಯಾಬಿನೆಟ್ ಅಲ್ಲ, ಸಿದ್ದರಾಮಯ್ಯನವರ ಕ್ಯಾಬಿನೆಟ್,''ಎಂದು ಲೇವಡಿ ಮಾಡಿದರು.

''ಸಿದ್ದರಾಮಯ್ಯನವರು ಸಿಎಂ ಕುರ್ಚಿಯಿಂದ ಇಳಿಯುವ ಮೊದಲೇ ಒಂದು ಗೂಗ್ಲಿ ಹಾಕಿ ಹೋಗಿದ್ದಾರೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸ್ವೀಕರಿಸಿ ಹೊಸ ಮುಖ್ಯಮಂತ್ರಿಗಳು ಏನು ಮಾಡುತ್ತಾರೆಂಬ ಸವಾಲನ್ನು ಡಿ.ಕೆ.ಶಿವಕುಮಾರ್ ಅವರ ಮುಂದಿಟ್ಟಿದ್ದಾರೆ,'' ಎಂದು ತಿಳಿಸಿದರು.

ಸರಕಾರ ಎಷ್ಟು ದಿನ ಇರಲಿದೆ?: ''ನೂತನ ಸಿಎಂಗೆ ಹನಿಮೂನ್ ಅವಧಿ ಇಲ್ಲ, ಯಾರು ಎಷ್ಟೇ ಬಲಶಾಲಿಯಾದರೂ ನಾವು ಪ್ರತಿಪಕ್ಷವಾಗಿ ಸರಕಾರದ ವೈಫಲ್ಯಗಳನ್ನು ಜನರ ತಿಳಿಸುವ ಕೆಲಸವನ್ನು ಇನ್ನಷ್ಟು ಸಮರ್ಥವಾಗಿ ಮಾಡುತ್ತೇವೆ. ಸವಾಲನ್ನು ಮೆಟ್ಟಿ ನಿಲುವ ಶಕ್ತಿ ಬಿಜೆಪಿ ಕಾರ್ಯಕರ್ತರಿಗಿದೆ. ಈ ಸರಕಾರ ಎಷ್ಟು ದಿನ ಇರಲಿದೆ ಎಂಬ ಪ್ರಶ್ನೆ ಎಲ್ಲರಲ್ಲಿದೆ. ಯಾವುದೇ ಸಂದರ್ಭದಲ್ಲಿ ವಿಧಾನಸಭೆ ಚುನಾವಣೆ ನಡೆದರೂ ಪಕ್ಷವನ್ನು ಅಧಿಕಾರಕ್ಕೆ ತರಲು ನಾವು ಕಾರ್ಯೋನ್ಮುಖರಾಗುತ್ತೇವೆ,'' ಎಂದರು.

''ಕಮಿಷನ್ ದಂಧೆ ಕುರಿತಂತೆ ಕಾಲವೇ ಉತ್ತರ ಕೊಡಲಿದೆ. ಡಿ.ಕೆ.ಶಿವಕುಮಾರ್ ಅವರು ಏನು ಎಂಬುದನ್ನು ಬೆಂಗಳೂರಿನಲ್ಲಿ ಜನರೇ ಮಾತನಾಡುತ್ತಾರೆ. ಆ ಕುರಿತು ಪ್ರಸ್ತಾಪಿಸಲು ಹೋಗುವುದಿಲ್ಲ, ಅವರಿಗೆ ಅವಕಾಶ ಸಿಕ್ಕಿದೆ. ಒಳ್ಳೆಯ ಆಡಳಿತ ನೀಡಲಿ,'' ಎಂದು ಹಾರೈಸಿದರು.

ಎಂಜಿನಿಯರಿಂಗ್, ವಾಸ್ತುಶಿಲ್ಪ ಸೀಟು

■ **ವಿಕ ಸುದ್ದಿಲೋಕ** ಬೆಂಗಳೂರು

ನೂತನ ಶೈಕ್ಷಣಿಕ ವರ್ಷದ 10 ಹೊಸ ಎಂಜಿನಿಯರಿಂಗ್ ಕಾಲೇಜುಗಳೂ ಸೇರಿದಂತೆ 227 ಕಾಲೇಜುಗಳಲ್ಲಿ 2026-27ನೇ ಸಾಲಿಗೆ ಎಂಜಿನಿಯರಿಂಗ್ ಹಾಗೂ ವಾಸ್ತುಶಿಲ್ಪ ಶಾಸ್ತ್ರ ಕೋರ್ಸ್‌ಗಳಿಗೆ 1,59,151 ಸೀಟುಗಳು ಲಭ್ಯವಿವೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ತಿಳಿಸಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಸರಕಾರಿ ಕೋಟಾದಡಿ 75,041, 'ಕಾಮೆಡ್-ಕೆ' ಕೋಟಾದಡಿ 32,769, ಆಡಳಿತ ಮಂಡಳಿ ಕೋಟಾದಡಿ 51,294 ಸೀಟುಗಳಿವೆ. ಕಳೆದ ವರ್ಷಕ್ಕಿಂತ ಈ ಬಾರಿ 5,235 ಸೀಟುಗಳು ಏರಿಕೆ ಕಂಡಿವೆ.

2025-26ನೇ ಸಾಲಿನಲ್ಲಿ ರಾಜ್ಯದ 217 ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರಕಾರಿ ಕೋಟಾದ 72,506 ಸೀಟುಗಳು ಸೇರಿ ಒಟ್ಟು 1,53,916 ಸೀಟುಗಳು ಲಭ್ಯ ಇದ್ದವು. ಈಗ ಸರಕಾರಿ ಕಾಲೇಜುಗಳಲ್ಲಿ 500, ಖಾಸಗಿ ವಿವಿಗಳಲ್ಲಿ 2,580 ಖಾಸಗಿ ಕಾಲೇಜುಗಳಲ್ಲಿ 1,695 ಸೀಟುಗಳು, ಡೀಮ್ಡ್ ವಿವಿಗಳಲ್ಲಿ 60 ಸೀಟುಗಳು ಹೆಚ್ಚಳವಾಗಿವೆ.

ಸಡಗೋಪನ್ ಸಮಿತಿಯ ಶಿಫಾರಸುಗಳನ್ವಯ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಮಾರ್ಗಸೂಚಿಗಳನ್ವಯ ಕೆಲ ಕಾಲೇಜುಗಳು, ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಕೆಲ ಕೋರ್ಸ್‌ಗಳ ಸೀಟುಗಳನ್ನು ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಕೆಇಎ ತಿಳಿಸಿದೆ.

ಯಾವುದೇ ಕೋರ್ಸ್‌ನಲ್ಲಿ 180ಕ್ಕಿಂತ ಹೆಚ್ಚಿನ ಪ್ರವೇಶ ಸಾಮರ್ಥ್ಯವಿದ್ದು, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಸೀಟು ಹೆಚ್ಚಳಕ್ಕೆ ಅನುಮತಿ ನೀಡಿದ್ದರೂ, ರಾಷ್ಟ್ರೀಯ ಮಾನ್ಯತಾ ಮಂಡಳಿ ಪ್ರಮಾಣ ಪತ್ರ ನೀಡುವವರೆಗೆ ಪರಿಗಣಿಸುವುದಿಲ್ಲ ಎಂದು ಕೆಇಎ ತಿಳಿಸಿದೆ.

ಸಡಗೋಪನ್ ವರದಿಯ ಶಿಫಾರಸಿನಂತೆ ಕಂಪ್ಯೂಟರ್ ಸೈನ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ಕೋರ್ಸ್‌ಗಳಿಗೆ ಗರಿಷ್ಠ 900 ಸೀಟುಗಳ ಮಿತಿಯನ್ನು ಕೆಇಎ ಪರಿಗಣಿಸಿದೆ. ಈ ವರ್ಷ 900 ಸೀಟುಗಳ ಮಿತಿ ಮೀರಿ ಹೆಚ್ಚುವರಿ ಅನುಮೋದನೆ ಪಡೆದಿರುವ ಕಾಲೇಜುಗಳ ಸೀಟುಗಳ ಪಟ್ಟಿಯನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ಪ್ರಶ್ನೆ: ನಾನು ಉದ್ಯೋಗದಲ್ಲಿ ಏಳಿಗೆ ಕಾಣುವೆನೆ ಗುರೂಜಿ?
ಜನ್ಮದಿನ: 06.08.1992 **ನಕ್ಷತ್ರ:** ಪೂರ್ವಭಾದ್ರ
ಪರಿಹಾರ: ಶನಿ ಸಂಚಾರ ಮುಗಿಯುವ ಕಾಲ. ನೀವು ಕೇಳಿದ ವರವನ್ನು ಕೊಟ್ಟು, ಎತ್ತರಕ್ಕೆ ಬೆಳಸಿ, ಆರೋಗ್ಯ, ಐಶ್ವರ್ಯ, ಸುಖ-ಸಂತೋಷ ಕೊಡುತ್ತಾನೆ. ದೈವ ನಂಬಿ ಕೆಟ್ಟವರಿಲ್ಲ, ಕೊಟ್ಟಿರುವುದನ್ನು ಉಳಿಸಿಕೊಳ್ಳಲು ದೈವ ಪ್ರಾರ್ಥನೆ ಬೇಕೇಬೇಕು. ನಿತ್ಯ ಗುರುಚರಿತ್ರ ಪಾರಾಯಣ ಮಾಡಿ, ದುರ್ಗಾಷ್ಟೋತ್ತರ ಪಠಿಸಿ. ನಿಮ್ಮ ಸಂತತಿಯೂ ಈ ಪುಣ್ಯವನ್ನು ಅನುಭವಿಸಲಿ.
ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್‌ಆ್ಯಪ್ ಸಂಖ್ಯೆ: 6366422240

ಅತ್ಯಾಚಾರ ಆರೋಪ: ದೇವರಾಜೇಗೌಡ ವಿರುದ್ಧ ವರದಿಗೆ ಸಲ್ಲಿಕೆಗೆ ಅಸ್ತು

ಬೆಂಗಳೂರು: ಅತ್ಯಾಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನದ ವಕೀಲ ದೇವರಾಜೇಗೌಡ ವಿರುದ್ಧದ ಆರೋಪ ಪಟ್ಟಿಯನ್ನು (ಅಂತಿಮ ತನಿಖಾ ವರದಿ) ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲು ಹೈಕೋರ್ಟ್ ಗುರುವಾರ ಅನುಮತಿ ನೀಡಿದೆ.

ಎಫ್‌ಐಆರ್ ರದ್ದು ಕೋರಿ ದೇವರಾಜೇಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ನ್ಯಾ. ಎಂ. ನಾಗಪ್ರಸನ್ನ ಅವರಿದ್ದ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು.

ಸರಕಾರಿ ವಕೀಲರು, ''ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಅನುಮತಿ ಪಡೆಯದೆ ತನಿಖೆಯ ಅಂತಿಮ ವರದಿ ಸಲ್ಲಿಸುವಂತಿಲ್ಲವೆಂದು ಕೋರ್ಟ್ ಮಧ್ಯಂತರ ಆದೇಶವಿದೆ. ಆ ಆದೇಶ ತೆರವು ಕೋರಿ ಸರಕಾರ ಮಧ್ಯಂತರ ಅರ್ಜಿ ಸಲ್ಲಿಸಿದೆ. ಅದನ್ನು ಸಲ್ಲಿಸಲು ಅನುಮತಿ ನೀಡಬೇಕು,'' ಎಂದು ಕೋರಿದರು.

ಶಿಥಿಲ ಕೊಠಡಿ ದುರಸ್ತಿ ಮಾಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕಲ್ಯಾಣ ಕರ್ನಾಟಕದಲ್ಲಿ 10,494 ಸರಕಾರಿ ಶಾಲಾ ಕೊಠಡಿಗಳು ಶಿಥಿಲಗೊಂಡಿದ್ದರೂ ಆದರಲ್ಲೇ ಕ್ಲಾಸ್ ನಡೆಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕೊಠಡಿಗಳ ದುರಸ್ತಿಗೆ ತುರ್ತಾಗಿ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ 'ವಿಜಯ ಕರ್ನಾಟಕ'ದಲ್ಲಿ ಪ್ರಕಟವಾದ 'ಶಿಥಿಲ ಕೊಠಡಿಯಲ್ಲೇ ನಡೆಯುತ್ತಿದೆ ಪಾಠ' ವರದಿಯನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ಅವರು,''ಅಧಿಕಾರದ ಗದ್ದುಗೆ ಹಿಡಿದ ನಂತರ ಸುಳ್ಳು ಭರವಸೆಗಳು, ಆಕರ್ಷಕ ಗ್ಯಾರಂಟಿಗಳು ಮತ್ತು ಕೋಟಿ ಕೋಟಿ ವೆಚ್ಚದ ಪ್ರಚಾರದ ಜಾಹೀರಾತುಗಳ ಬೆನ್ನಟ್ಟಿರುವ ಕಾಂಗ್ರೆಸ್ ಸರಕಾರಕ್ಕೆ ಕಲ್ಯಾಣ ಕರ್ನಾಟಕ ಭಾಗದ ಹಣೆಬರಹ ಬದಲಾಯಿಸುವ ಇಚ್ಛಾಶಕ್ತಿ ಇಲ್ಲ. ಹಲವು ದಶಕಗಳಿಂದ ಆ ಭಾಗದಲ್ಲಿ ರಾಜಕೀಯ ಆಧಿಪತ್ಯ ಸ್ಥಾಪಿಸಿದ ಕಾಂಗ್ರೆಸ್ ಪಕ್ಷವು ಇಂದಿಗೂ ಇಲ್ಲಿನ ಮಕ್ಕಳ ಭವಿಷ್ಯವನ್ನು ಅಕ್ಷರಶಃ ಕತ್ತಲೆಗೆ ದೂಡಿದೆ,'' ಎಂದು ದೂರಿದ್ದಾರೆ.

''ಶಾಲಾ ಕೊಠಡಿಗಳ ದುರಸ್ತಿಗೆ ಒತ್ತು ನೀಡದ ಕಲ್ಯಾಣ ಕರ್ನಾಟಕ ಭಾಗಕ್ಕೆ ಕಾಂಗ್ರೆಸ್ ದ್ರೋಹ ಎಸಗುತ್ತಿರುವುದು ಅಕ್ಷಮ್ಯ. ಇದು ಜನ ಕಲ್ಯಾಣದ ಸರಕಾರವಲ್ಲ, ಬದಲಿಗೆ ಕೇವಲ ವಂಚನೆಯ ಸರಕಾರ. ಇನ್ನಾದರೂ ಸರಕಾರ ಗ್ಯಾರಂಟಿ ಪ್ರಚಾರಗಳ ಅಮಲಿನಿಂದ ಹೊರಬಂದು, ಕಲ್ಯಾಣ ಕರ್ನಾಟಕದ ಶಾಲಾ ಕೊಠಡಿಗಳ ದುರಸ್ತಿಗೆ ತುರ್ತಾಗಿ ಕ್ರಮ ಕೈಗೊಳ್ಳದಿದ್ದರೆ ಬಡ ಮಕ್ಕಳ ಶಾಪ ಮತ್ತು ಪೋಷಕರ ಆಕ್ರೋಶ ಎದುರಿಸಬೇಕಾಗುತ್ತದೆ,'' ಎಂದು ಎಚ್ಚರಿಸಿದ್ದಾರೆ.

ವಂಚನೆ: ದೀಪಕ್ ಕೇಬಲ್ಸ್ ಎಂಡಿ ಬಂಧನ

■ **ವಿಕ ಸುದ್ದಿಲೋಕ** ಬೆಂಗಳೂರು

ಬ್ಯಾಂಕ್‌ಗಳಿಂದ 899.35 ಕೋಟಿ ರೂ. ಸಾಲ ಪಡೆದು ವಂಚಿಸಿ ಅಕ್ರಮ ಹಣಕಾಸು ವಹಿವಾಟು ನಡೆಸಿರುವ ಆರೋಪ ಪ್ರಕರಣದಲ್ಲಿ ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಕಸ್ತೂರಿ ವೆಂಕಟೇಶ್ವರ ರಾವ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ.

ಇತ್ತೀಚೆಗೆ ವೆಂಕಟೇಶ್ವರ ರಾವ್ ಹಾಗೂ ಕಂಪನಿಯ ನಿರ್ದೇಶಕರ ಮನೆಗಳ ಮೇಲೆ ದಾಳಿ ಮಾಡಿ ಚಿನ್ನಾಭರಣ, 1.27 ಕೋಟಿ ರೂ. ನಗದು ಹಾಗೂ 18 ಕೋಟಿ ರೂ. ಠೇವಣಿಯ ಬ್ಯಾಂಕ್ ಖಾತೆಗಳನ್ನು ಜಪ್ತಿ ಮಾಡಲಾಗಿತ್ತು. ಬ್ಯಾಂಕ್‌ಗಳಿಂದ ಪಡೆದ ಸಾಲವನ್ನು ಬೇರೆ ಉದ್ದೇಶಕ್ಕೆ ಇತರ ಖಾತೆಗಳಿಗೆ ವರ್ಗಾಯಿಸಿರುವುದಕ್ಕೆ ದಾಖಲೆಗಳು ಸಿಕ್ಕಿದ್ದವು. ವೆಂಕಟೇಶ್ವರ ರಾವ್ ಅವರನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ತನಿಖೆ ಸಲುವಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಒಡೆಯರ್ ಅಂಚೆ ಚೀಟಿ ಬಿಡುಗಡೆ

ಬೆಂಗಳೂರು: ಅಂಚೆ ಇಲಾಖೆಯ ಕರ್ನಾಟಕ ವೃತ್ತವು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ಅಂಚೆ ಪತ್ರಗಳನ್ನು ಬಿಡುಗಡೆ ಮಾಡಿದೆ.

ಅಂಚೆ ಸೇವೆಗಳ ನಿರ್ದೇಶಕ ಸಂದೇಶ್ ಮಹದೇವಪ್ಪ, ಬೆಂಗಳೂರು ಪ್ರಧಾನ ಕಚೇರಿ (ಪ್ರದೇಶ) ನಿರ್ದೇಶಕಿ ವಿ. ತಾರಾ, ಕರ್ನಾಟಕ ವೃತ್ತದ ಸಹಾಯಕ ನಿರ್ದೇಶಕಿ ಶಾಂತಲಾ ಎಂ. ಭಟ್, ಬೆಂಗಳೂರು ಪ್ರಧಾನ ಕಚೇರಿ (ಪ್ರದೇಶ) ಸಹಾಯಕ ನಿರ್ದೇಶಕ ಅಮಿತ್ ಕುಮಾರ್ ಝಾ, ಕರ್ನಾಟಕ ಅಂಚೆ ಚೀಟಿಗಳ ಸಂಗ್ರಹಗಾರ ಸಂಘದ ಅಧ್ಯಕ್ಷೆ ಜಯಪ್ರಕಾಶ ಇದ್ದರು. ಈ ಅಂಚೆ ಚೀಟಿಗಳು ಕಲಾವಿದ ಪೃಥ್ವಿ ಪ್ರಭು ರಚಿಸಿರುವ ಮೈಸೂರು ಒಡೆಯರ ಕಲರ್ ಪೆನ್ಸಿಲ್ ಕೃತಿಗಳಾಗಿವೆ. ಇದರಲ್ಲಿ ಮುಮ್ಮಡಿ ಕೃಷ್ಣರಾಜ, 10ನೇ ಚಾಮರಾಜ, ನಾಲ್ವಡಿ ಕೃಷ್ಣರಾಜ, ಜಯಚಾಮರಾಜ ಒಡೆಯರ್, ಮಹಾರಾಣಿ ವಾಣಿವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿ ಅವರ ಐದು ಅಂಚೆ ಪತ್ರಗಳಿವೆ.

ಪಂಚಾಂಗ 05-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಕೃಷ್ಣ. **ಮಳೆ ನಕ್ಷತ್ರ:** ರೋಹಿಣಿ. **ನಿತ್ಯನಕ್ಷತ್ರ:** ಶ್ರವಣ.
ತಿಥಿ: ಪಂಚಮಿ. **ಯೋಗ:** ಬ್ರಹ್ಮ.
ಕರಣ: ಕೌಲವ.
ವಾರ: ಶುಕ್ರವಾರ.
ರಾಹು ಕಾಲ: ಬೆ. 10.30 - 12.00
ಗುಳಿಕ ಕಾಲ: ಬೆ. 7.30-9.00
ಯಮಗಂಡ ಕಾಲ: ಮ. 3.00-4.30
ಸೂರ್ಯ ಉದಯ: ಬೆ. 5.53
ಸೂರ್ಯ ಅಸ್ತ: ಸಂ. 6.42

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.155



ಪಶ್ಚಿಮಘಟ್ಟಕ್ಕೆ ಸಿಇಸಿ ಭೇಟಿ

ಶಿರಸಿಗೆ ಆಗಮಿಸಿದ್ದ ಸುಪ್ರೀಂಕೋರ್ಟ್ ಕೇಂದ್ರೀಯ ಉನ್ನತಾಧಿಕಾರ ಸಮಿತಿ ಪ್ರಮುಖ ಸುನೀಲ್ ಲಿಮಯೆ ಅವರಿಗೆ ಬೇಡ್ತಿ ಅಘನಾಶಿನಿ ನಿಯೋಗ ಅಹವಾಲು ಸಲ್ಲಿಸಿತು.

ಶಿರಸಿ (ಉ.ಕನ್ನಡ): ಸುಪ್ರೀಂಕೋರ್ಟ್‌ನಿಂದ ನಿಯುಕ್ತಗೊಂಡ ಅರಣ್ಯ, ಪರಿಸರ ಕುರಿತ ಉನ್ನತಾಧಿಕಾರ ಸಮಿತಿ (ಸಿಇಸಿ) ಉತ್ತರ ಕನ್ನಡ ಸೇರಿ ಪಶ್ಚಿಮಘಟ್ಟದ ಸಾಲುಗಳಿರುವ ಜಿಲ್ಲೆಗಳಿಗೆ ಭೇಟಿ ನೀಡಿದೆ. ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸಿಇಸಿ ತಂಡ ನಾಲ್ಕು ದಿನಗಳಿಂದ ಓಡಾಟ ನಡೆಸಿದೆ. ಅರಣ್ಯ, ಕಂದಾಯ ಅಧಿಕಾರಿಗಳು, ಪರಿಸರ ತಜ್ಞರ ಜತೆ ಸಂವಾದ ನಡೆಸಿದೆ.

ಸಿಇಸಿ ತಂಡದ ನೇತೃತ್ವ ವಹಿಸಿರುವ ಸುನೀಲ್ ಲಿಮಯೆ ಅವರೊಂದಿಗೆ ನಗರದಲ್ಲಿ ಬುಧವಾರ ಬೇಡ್ತಿ -ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ, ವೃಕ್ಷಲಕ್ಷ ಆಂದೋಲನದ ಪ್ರಮುಖರು ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್, ಡಿಸಿಎಫ್ ಸೂರ್ಯವಂಶಿ, ಪರಿಸರ ಹೋರಾಟಗಾರ ಅನಂತ ಹೆಗಡೆ ಆಶಿಸರ ಇದ್ದರು.

ಬೇಡ್ತಿ-ಅಘನಾಶಿನಿ ತಜ್ಞರೊಂದಿಗೆ ಸಮಿತಿ ಸಮಾಲೋಚನೆ

ವಿಜ್ಞಾನಿ ಡಾ.ಕೇಶವ ಕೊರ್ಸೆ, ಬೇಡ್ತಿ ಅಘನಾಶಿನಿ ಶರಾವತಿ ಕಣಿವೆಗಳ ರೈತರ ಪರಿಸ್ಥಿತಿ, ಜಲ-ಜಂಗಲ್ ಸ್ಥಿತಿಗಳ ಬಗ್ಗೆ ಸಿಇಸಿಗೆ ಮಾಹಿತಿ ನೀಡಿದರು. ಭೂಕುಸಿತ ಅಧ್ಯಯನ ವರದಿ, ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯ, ಕಾನು ಅರಣ್ಯ ಪರಿಸ್ಥಿತಿ ವರದಿಗಳ ಶಿಫಾರಸಿನ ಪ್ರತಿಯನ್ನು ಸಿಇಸಿಗೆ ನೀಡಲಾಯಿತು.

> ಬೇಡ್ತಿ-ಅಘನಾಶಿನಿ ಜನಾಂದೋಲನ ಬಗ್ಗೆ ಬಹಳ ವರ್ಷಗಳಿಂದ ಕೇಳುತ್ತಿದ್ದೆವು. ಇಲ್ಲಿಗೇ ಬಂದು ಜನ ಚಳವಳಿ ಪರಿಚಯವಾಯಿತು.
>
> **ಸುನೀಲ್ ಲಿಮಯೆ** ಸಿಇಸಿ ಮುಖ್ಯಸ್ಥ

ಯೋಗ ರತ್ನ ಪ್ರಶಸ್ತಿಗೆ ಚಿನ್ಮಯಿ ಆಯ್ಕೆ

ಧರ್ಮಸ್ಥಳ (ದ.ಕ.): ಶ್ರೀಕ್ಷೇತ್ರ ಧರ್ಮಸ್ಥಳದ ಶಾಂತಿವನ ಟ್ರಸ್ಟ್‌ನಿಂದ ನೀಡಲಾಗುವ ಯೋಗರತ್ನ ಪ್ರಶಸ್ತಿಗೆ ಬೆಂಗಳೂರಿನ ಕೆಂಗೇರಿಯ ವಿಎಸ್ಎಸ್ ಇಂಟರ್ ನ್ಯಾಷನಲ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ, ಅಂತಾರಾಷ್ಟ್ರೀಯ ಯೋಗಾಸನ ಪ್ರಶಸ್ತಿ ವಿಜೇತೆ ಚಿನ್ಮಯಿ ಎಚ್. ಆಯ್ಕೆಯಾಗಿದ್ದಾಳೆ.

ಜೂನ್ 21ರಂದು 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಶಾಂತಿವನ ಟ್ರಸ್ಟ್ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಉಪಸ್ಥಿತಿಯಲ್ಲಿ ಈ ಪ್ರಶಸ್ತಿ ಪ್ರದಾನ ಆಗಲಿದೆ ಎಂದು ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ ನಿರ್ದೇಶಕ ಡಾ.ಐ.ಶಶಿಕಾಂತ್ ಜೈನ್ ತಿಳಿಸಿದ್ದಾರೆ.

ಹಣಕ್ಕೆ ಬೇಡಿಕೆ ಹೆಡ್ ಕಾನ್‌ಸ್ಟೇಬಲ್ ಅಮಾನತು

ಹನೂರು (ಚಾಮರಾಜನಗರ): ಹಣಕ್ಕೆ ಬೇಡಿಕೆ ಇಟ್ಟ ಆರೋಪದ ಮೇಲೆ ಮಲೆ ಮಹದೇಶ್ವರ ಬೆಟ್ಟ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಸಿದ್ದರಾಜು ಅವರನ್ನು ಅಮಾನತು ಮಾಡಲಾಗಿದೆ. ಜೋಳ ತುಂಬಿಕೊಂಡು ತಮಿಳುನಾಡಿಗೆ ತೆರಳುತ್ತಿದ್ದ ಲಾರಿ ಚಾಲಕನಿಗೆ ಹನೂರು ತಾಲೂಕಿನ ಪಾಲಾರ್ ಚೆಕ್ ಪೋಸ್ಟ್‌ನಲ್ಲಿ ಹೆಡ್ ಕಾನ್‌ಸ್ಟೇಬಲ್ ಸಿದ್ದರಾಜು 200 ರೂ. ಲಂಚ ಕೇಳಿದ್ದರು ಎನ್ನಲಾಗಿದೆ.

ಈ ವೇಳೆ ನಡೆದ ವಾಗ್ವಾದವನ್ನು ಲಾರಿ ಚಾಲಕ ಸುಲ್ತಾನ್ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ವಿಡಿಯೊ ಆಧರಿಸಿ ಸಿದ್ದರಾಜು ಅವರನ್ನು ಕೊಳ್ಳೇಗಾಲ ಡಿವೈಎಸ್ಪಿ ಮೋಹನ್ ಅಮಾನತು ಮಾಡಿದ್ದಾರೆ.

ವಿಶ್ವ ಯೋಗಾಸನ ಚಾಂಪಿಯನ್‌ಶಿಪ್ ಉದ್ಘಾಟನೆ

ಅಹಮದಾಬಾದ್: ಮೊದಲ 'ವಿಶ್ವ ಯೋಗಾಸನ ಚಾಂಪಿಯನ್‌ಶಿಪ್'ಅನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಚಾಲನೆ ನೀಡಿದರು. ''ಭವಿಷ್ಯದಲ್ಲಿ ಯೋಗಾಸನವು ಒಲಿಂಪಿಕ್ಸ್ ಸೇರಿದಂತೆ ಪ್ರಮುಖ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸ್ಪರ್ಧಾತ್ಮಕ ಕ್ರೀಡೆಯಾಗಿ ಸ್ಥಾನ ಪಡೆಯಲಿದೆ,'' ಎಂದು ಅವರು ಇದೇ ವೇಳೆ ವಿಶ್ವಾಸ ವ್ಯಕ್ತಪಡಿಸಿದರು.

''ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೂ ಮುನ್ನವೇ ಈ ಚಾಂಪಿಯನ್‌ಶಿಪ್ ಆಯೋಜನೆಗೊಂಡಿರುವುದು ಆರೋಗ್ಯ ಮತ್ತು ಯೋಗಕ್ಷೇಮದ ಡಬಲ್ ಡೋಸ್ ನೀಡಿದಂತಾಗಿದೆ,'' ಎಂದು ಮೋದಿ ಸಂತಸಪಟ್ಟರು. ಈ ವರ್ಷದ ಯೋಗ ದಿನದ ಥೀಮ್ 'ಆರೋಗ್ಯಕರ ವಯಸ್ಸಿಗೆ ಯೋಗ' ಎಂಬುದಾಗಿದೆ. ಯೋಗಾಸನ ಕ್ರೀಡೆಯು ಬೆಳೆದಂತೆ ಕ್ರೀಡಾಪಟುಗಳು, ತರಬೇತುದಾರರು ಮತ್ತು ಸಂಶೋಧಕರಿಗೆ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ಪ್ರಧಾನಿ ಹೇಳಿದರು.

ಭಾರತ-ಪಾಕ್ ಸೆಮಿ ಫೈಟ್

ಅಂಡರ್ 18 ಏಷ್ಯಾ ಕಪ್ ಹಾಕಿ

ಕಾಕಮಿಗಹರಾ (ಜಪಾನ್): ಹದಿನೆಂಟು ವರ್ಷದೊಳಗಿನವರ ಏಷ್ಯಾ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ಶುಕ್ರವಾರ ಭಾರತೀಯ ಪುರುಷರ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ. ಮತ್ತೊಂದೆಡೆ, ಮಹಿಳೆಯರ ಸೆಮೀಸ್ ಕದನದಲ್ಲಿ ಭರ್ಜರಿ ಫಾರ್ಮ್‌ನಲ್ಲಿರುವ ಭಾರತ ಮಹಿಳಾ ತಂಡವು ಚೀನಾ ವಿರುದ್ಧ ತನ್ನ ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದೆ.

ಎ ಗುಂಪಿನಲ್ಲಿ ಸ್ಥಾನ ಪಡೆದಿರುವ ಭಾರತ ತಂಡ ಮೂರು ಗೆಲುವು ಮತ್ತು ಒಂದು ಸೋಲಿನೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿದೆ. ಟೂರ್ನಿಯ ಪಂದ್ಯಗಳಲ್ಲಿ ಭಾರತ ತಂಡ ಇದುವರೆಗೆ ಒಟ್ಟು 32 ಗೋಲುಗಳನ್ನು ಗಳಿಸಿದ್ದು, ಕೇವಲ 6 ಗೋಲುಗಳನ್ನು ಮಾತ್ರ ಬಿಟ್ಟುಕೊಟ್ಟಿದೆ. ಭಾರತ ತಂಡ ಕಜಕಸ್ತಾನ ವಿರುದ್ಧ 13-0 ಅಂತರದ ಭರ್ಜರಿ ಗೆಲುವಿನೊಂದಿಗೆ ಅಭಿಯಾನ ಆರಂಭಿಸಿತು. ಬಳಿಕ, ಆತಿಥೇಯ ಜಪಾನ್ ವಿರುದ್ಧ 2-4 ಗೋಲುಗಳಿಂದ ಸೋಲುಂಡಿತು. ಈ ಸೋಲಿನ ನಂತರ ಪುಟಿದೆದ್ದ ಭಾರತ, ಕೊರಿಯಾ ವಿರುದ್ಧ 4-1 ಮತ್ತು ಚೈನೀಸ್ ತೈಪೆ ವಿರುದ್ಧ 13-1 ಗೋಲುಗಳಿಂದ ಭರ್ಜರಿ ಜಯ ಸಾಧಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ನಾಯಕ ಕೇತನ್ ಕುಶ್ವಾಹ 7 ಗೋಲುಗಳೊಂದಿಗೆ ಭಾರತದ ಪರ ಮುಂಚೂಣಿಯಲ್ಲಿದ್ದರೆ, ಆಶಿಶ್ ತಾನಿ ಪೂರ್ತಿ 6 ಗೋಲು ಗಳಿಸಿದ್ದಾರೆ. ಗಾಜಿ ಖಾನ್ ಮತ್ತು ಶಾರುಖ್ ಅಲಿ ತಲಾ 3 ಗೋಲುಗಳ ಕೊಡುಗೆ ನೀಡಿದ್ದಾರೆ. 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿರುವ ಪಾಕಿಸ್ತಾನ ತಂಡವು ತನ್ನ ಮೂರು ಪಂದ್ಯಗಳಲ್ಲಿ ಎರಡು ಗೆಲುವು ಮತ್ತು ಒಂದು ಸೋಲಿನೊಂದಿಗೆ ತನ್ನ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೆಮೀಸ್‌ಗೆ ಲಗ್ಗೆಯಿಟ್ಟಿದೆ. ಪಾಕ್ ವಿರುದ್ಧದ ಸೆಮಿಫೈನಲ್ ಪಂದ್ಯವನ್ನು ಗೆಲ್ಲುವ ವಿಶ್ವಾಸವನ್ನು ಭಾರತೀಯ ತಂಡದ ತರಬೇತುದಾರ ಸರ್ದಾರ್ ಸಿಂಗ್ ವ್ಯಕ್ತಪಡಿಸಿದ್ದಾರೆ. 'ಟೂರ್ನಿಯಲ್ಲಿ 4 ಪಂದ್ಯಗಳನ್ನು ಆಡಿದ ನಂತರ, ನಾವು ಯಾವ ಕ್ಷೇತ್ರಗಳಲ್ಲಿ ಸುಧಾರಿಸಬೇಕಾಗಿದೆ ಎಂಬುದನ್ನು ಗುರುತಿಸಿದ್ದೇವೆ. ಮುಖ್ಯವಾಗಿ ಪೆನಾಲ್ಟಿ ಕಾರ್ನರ್, ಆಕ್ರಮಣ ಮತ್ತು ರಕ್ಷಣಾತ್ಮಕ ವಿಭಾಗದಲ್ಲಿ ಗಮನ ಹರಿಸಬೇಕಿದೆ. ಪಂದ್ಯಕ್ಕೆ ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ,'' ಎಂದು ಅವರು ಹೇಳಿದ್ದಾರೆ.

ಪಂದ್ಯ: ಕವಾಸಾಕಿ ಹಾಕಿ ಕ್ರೀಡಾಂಗಣ, ಕಾಕಮಿಗಾಹರಾ; **ಸಮಯ:** ಮಧ್ಯಾಹ್ನ 3.30; **ನೇರಪ್ರಸಾರ:** ಏಷ್ಯನ್ ಹಾಕಿ ಫೆಡರೇಷನ್ ಯೂಟ್ಯೂಬ್ ಚಾನೆಲ್.

ಮಹಿಳಾ ತಂಡಕ್ಕೆ ಚೀನಾ ಎದುರಾಳಿ

ಅತ್ಯದ್ಭುತ ಪ್ರದರ್ಶನದ ಮೂಲಕ ಅಜೇಯ ಓಟ ಮುಂದುವರಿಸಿರುವ ಭಾರತ ಮಹಿಳಾ ತಂಡ ಶುಕ್ರವಾರ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಚೀನಾ ತಂಡವನ್ನು ಎದುರಿಸಲಿದೆ. ಭಾರತೀಯ ಮಹಿಳಾ ಪಡೆ ಆಡಿದ ಮೂರೂ ಪಂದ್ಯಗಳನ್ನು ಗೆದ್ದು, 30 ಗೋಲುಗಳನ್ನು ಗಳಿಸಿ, ಕೇವಲ 2 ಗೋಲುಗಳನ್ನು ಮಾತ್ರ ಬಿಟ್ಟುಕೊಟ್ಟು 'ಎ' ಗುಂಪಿನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ.
ಹಿಂದಿನ ಗುಂಪು ಹಂತದ ಪಂದ್ಯದಲ್ಲಿ ತಂಡವು ಸಿಂಗಾಪುರ ತಂಡವನ್ನು 25-0 ಭರ್ಜರಿ ಅಂತರದಿಂದ ಮಣಿಸುವ ಮೂಲಕ ತನ್ನ ಪಾರಮ್ಯವನ್ನು ಸಾರಿದೆ. ಟೂರ್ನಿಯಲ್ಲಿ ಇದುವರೆಗೆ 10 ಗೋಲುಗಳನ್ನು ಗಳಿಸಿರುವ ನೌಶೀನ್ ನಾಜ್ ಉಪಸ್ಥಿತಿ ತಂಡಕ್ಕೆ ಆತ್ಮವಿಶ್ವಾಸ ತುಂಬಿದೆ. ಎದುರಾಳಿ ಚೀನಾ ತಂಡವು ಎರಡು ಗೆಲುವು ಮತ್ತು ಒಂದು ಡ್ರಾಗಳೊಂದಿಗೆ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿದೆ. ಪಂದ್ಯ ಮಧ್ಯಾಹ್ನ 1 ಗಂಟೆಗೆ ಆರಂಭವಾಗಲಿದೆ.

ಜೈಸ್ಮಿನ್, ಮೀನಾಕ್ಷಿ ನಂ.1

ವಿಶ್ವ ಬಾಕ್ಸಿಂಗ್ ನೂತನ ರ‍್ಯಾಂಕಿಂಗ್

ಹೊಸದಿಲ್ಲಿ: ವಿಶ್ವ ಬಾಕ್ಸಿಂಗ್ ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತದ ಬಾಕ್ಸರ್, ವಿಶ್ವ ಚಾಂಪಿಯನ್ ಜೈಸ್ಮಿನ್ ಲಂಬೋರಿಯಾ ಮಹಿಳೆಯರ 57 ಕೆಜಿ ವಿಭಾಗದಲ್ಲಿ ವಿಶ್ವದ ನಂ.1 ಸ್ಥಾನಕ್ಕೇರಿದ್ದಾರೆ. ಮಹಿಳೆಯರ 48 ಕೆಜಿ ವಿಭಾಗದಲ್ಲಿ ಮೀನಾಕ್ಷಿ ಹೂಡಾ ನಂ.1 ಸ್ಥಾನ ಕಾಯ್ದುಕೊಂಡರೆ, ಪ್ರೀತಿ ಪವಾರ್ 3ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಪ್ರಿಯಾ ಘಂಘಾಸ್ (60 ಕೆಜಿ) ಮತ್ತು ವಿಶ್ವನಾಥ್ ಸುರೇಶ್ (50 ಕೆಜಿ) ತಮ್ಮ ವಿಭಾಗಗಳಲ್ಲಿ ಟಾಪ್3 ಸ್ಥಾನದೊಳಗೆ ಸ್ಥಾನ ಪಡೆಯುವಲ್ಲಿ ಸಫಲರಾಗಿದ್ದಾರೆ.

ಅರುಂಧತಿ ಚೌಧರಿ, ಪೂಜಾ ರಾಣಿ ಮತ್ತು ನೂಪುರ್ ದ್ವಿತೀಯ ಸ್ಥಾನದಲ್ಲಿದ್ದಾರೆ. ಸ್ಟಾರ್ ಬಾಕ್ಸರ್ ನಿಖತ್ ಜರೀನ್ 4ನೇ ಸ್ಥಾನಕ್ಕೆ ಕುಸಿದಿದ್ದು, ಲವ್ಲಿನಾ ಬೊರ್ಗೋಹೈನ್ 7ನೇ ಸ್ಥಾನದಲ್ಲಿದ್ದಾರೆ. ಪುರುಷರ ವಿಭಾಗದಲ್ಲಿ ಸಚಿನ್ ಸಿವಾಚ್ ಮತ್ತು ನರೇಂದರ್‌ಬರ್ವಾಲ್ ಟಾಪ್ 5ರಲ್ಲಿ ಸ್ಥಾನ ಪಡೆದಿದ್ದಾರೆ. ಹಿತೇಶ್ ಗುಲಿಯಾ 6ನೇ ಹಾಗೂ ಅವಿನಾಶ್ ಜಮ್ವಾಲ್, ಆಕಾಶ್ ಮತ್ತು ಲೋಕೇಶ್ 8ನೇ ಸ್ಥಾನಗಳಲ್ಲಿದ್ದಾರೆ. ಒಟ್ಟಾರೆಯಾಗಿ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಟಾಪ್ 10 ಕ್ರೀಡಾಪಟುಗಳನ್ನು ಹೊಂದಿದ 3ನೇ ದೇಶ ಎನ್ನುವ ಖ್ಯಾತಿಗೆ ಪಾತ್ರವಾಗಿದೆ. ಮಹಿಳಾ ಬಾಕ್ಸಿಂಗ್ ವಿಭಾಗದಲ್ಲಿ 2ನೇ ಮತ್ತು ಪುರುಷರ ವಿಭಾಗದಲ್ಲಿ 4ನೇ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿದೆ.

ಅಫಘಾನಿಸ್ತಾನ ಏಕದಿನ ಸರಣಿಗೆ ಕೊಹ್ಲಿ ಅಲಭ್ಯ

ಹೊಸದಿಲ್ಲಿ: ಭಾರತದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಗಾಯದ ಕಾರಣದಿಂದ ಅಫಘಾನಿಸ್ತಾನ ವಿರುದ್ಧ ಮುಂಬರುವ ಏಕದಿನ ಸರಣಿಯಿಂದ ಹೊರಬಿದ್ದಿದ್ದಾರೆ. ಇತ್ತೀಚೆಗಷ್ಟೇ ಮುಕ್ತಾಯಗೊಂಡ ಐಪಿಎಲ್ ಫೈನಲ್ ಪಂದ್ಯದ ವೇಳೆ ಕೊಹ್ಲಿ ಅವರು ಕಾಲಿನ ಗಾಯಕ್ಕೆ ತುತ್ತಾಗಿದ್ದರು. ಅಫಘಾನಿಸ್ತಾನ ವಿರುದ್ಧದ ಏಕದಿನ ಸರಣಿ ಜೂನ್ 13 ರಿಂದ ಧರ್ಮಶಾಲಾದಲ್ಲಿ ಆರಂಭವಾಗಲಿದೆ.

ಐಪಿಎಲ್‌ನಲ್ಲಿ ಆರ್‌ಸಿಬಿ ತಂಡವನ್ನು ಸತತ ಎರಡನೇ ಬಾರಿ ಚಾಂಪಿಯನ್ ಪಟ್ಟಕ್ಕೇರಿಸುವಲ್ಲಿ ಅಮೂಲ್ಯ ಪಾತ್ರ ವಹಿಸಿದ್ದ ಕೊಹ್ಲಿ ಅದ್ಭುತ ಫಾರ್ಮ್‌ನಲ್ಲಿದ್ದರು. ಈಗ ಅವರ ಸ್ಥಾನಕ್ಕೆ ಯುವ ಆಟಗಾರ ಋತುರಾಜ್ ಗಾಯಕ್ವಾಡ್‌ರನ್ನು ತಂಡಕ್ಕೆ ಸೇರಿಸಿಕೊಳ್ಳುವ ಸಾಧ್ಯತೆಯಿದೆ. ಮತ್ತೊಂದೆಡೆ, ನಾಯಕ ರೋಹಿತ್ ಶರ್ಮಾ ಅವರ ಫಿಟ್‌ನೆಸ್ ಬಗ್ಗೆಯೂ ಅನುಮಾನಗಳಿದ್ದು, ವೈದ್ಯಕೀಯ ಪರೀಕ್ಷೆಯ ನಂತರ ಅವರ ಲಭ್ಯತೆಯ ಬಗ್ಗೆ ಅಂತಿಮ ನಿರ್ಧಾರ ಪ್ರಕಟಿಸುವುದಾಗಿ ಬಿಸಿಸಿಐ ತಿಳಿಸಿದೆ.

ಭಾರತ ಮತ್ತು ಅಫಘಾನಿಸ್ತಾನ ನಡುವಿನ ಏಕದಿನ ಸರಣಿಗೆ ರೋಹಿತ್ ಶರ್ಮಾ ಅವರ ಲಭ್ಯತೆ ಕುರಿತು ಸದ್ಯ ಗೊಂದಲ ನಿರ್ಮಾಣವಾಗಿದೆ. ಗಾಯದ ಕಾರಣದಿಂದ ಅವರು ಅಫಘಾನಿಸ್ತಾನ ವಿರುದ್ಧದ ಸರಣಿಯಿಂದ ಹೊರಗುಳಿಯುವ ಸಾಧ್ಯತೆಯಿದೆ. ವರದಿಗಳ ಪ್ರಕಾರ ಶರ್ಮಾರ ಲಭ್ಯತೆಯು ಅವರ ಫಿಟ್‌ನೆಸ್ ಪರೀಕ್ಷೆಯನ್ನು ಅವಲಂಬಿಸಿದೆ.

ಟೀಮ್ ಇಂಡಿಯಾ ಟಿ20 ನಾಯಕ ರೇಸಿನಲ್ಲಿ ಪಾಟೀದಾರ್

ಹೊಸದಿಲ್ಲಿ: ಭಾರತ ಟಿ20 ತಂಡದ ನಾಯಕಸ್ಥಾನದ ರೇಸಿನಲ್ಲಿ ಆರ್‌ಸಿಬಿ ನಾಯಕ ರಜತ್ ಪಾಟೀದಾರ್ ಹೆಸರು ಪ್ರಮುಖವಾಗಿ ಕೇಳಿಬಂದಿದೆ. ಇತ್ತೀಚೆಗಷ್ಟೆ ಕಳಪೆ ಫಾರ್ಮ್‌ನಿಂದ ವ್ಯಾಪಕ ಟೀಕೆಗೆ ಗುರಿಯಾಗಿರುವ ನಾಯಕ ಸ್'ೂ ಯ್ರ್ ಕ್ ುವ್ಾ ರ್ ಯಾದವ್‌ರನ್ನು ನಾಯಕ ಸ್ಥಾನದಿಂದ ಕೆಳಗಿಳಿಸುವ ಕುರಿತ ಸುದ್ದಿಗಳು ಕೇಳಿ ಬಂದಿದ್ದವು. ಈ ಬಗ್ಗೆ ಮಾಹಿತಿ ನೀಡಿರುವ ಬಿಸಿಸಿಐ ಆಯ್ಕೆ ಸಮಿತಿ ಸದಸ್ಯ ಸಬಾ ಕರೀಮ್ ನಾಯಕ, ಸೂರ್ಯಕುಮಾರ್ ಯಾದವ್ ಮುಂಬರುವ 2028ರ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯುವ ಕುರಿತೇ ಅನುಮಾನ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ಅವರು ನಾಯಕ ಸ್ಥಾನ ರೇಸಿನಲ್ಲಿ ಮುಂಚೂಣಿಯಲ್ಲಿರುವ ಆಟಗಾರರ ಕುರಿತು ಪ್ರಸ್ತಾಪಿಸಿದ್ದಾರೆ.

ನಾಯಕರಾಗಿ ಆರ್‌ಸಿಬಿಸಿಗೆ ಸತತ ಎರಡು ಬಾರಿ ಐಪಿಎಲ್ ಟ್ರೋಫಿ ಗೆದ್ದುಕೊಟ್ಟಿರುವ ರಜತ್ ಪಾಟೀದಾರ್ ಕುರಿತು ಕರೀಮ್ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು. ಇನ್ನೂ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡದ 33 ವರ್ಷದ ಪಾಟೀದಾರ್ ಅವರ ನಾಯಕತ್ವದ ಗುಣಗಳನ್ನು ಕರೀಮ್ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ''ಜಗತ್ತಿನ ದಿಗ್ಗಜ ಹಾಗೂ ವಿದೇಶಿ ಸ್ಟಾರ್ ಕ್ರಿಕೆಟಿಗರನ್ನೊಳಗೊಂಡ ತಂಡ ವನ್ನು ರಜತ್ ಅತ್ಯಂತ ಶಾಂತ ಮತ್ತು ಆತ್ಮವಿಶ್ವಾಸದ ರೀತಿಯಲ್ಲಿ ಮುನ್ನಡೆಸಿದ್ದಾರೆ. ಅನುಭವಿ ಮತ್ತು ಯುವ ಆಟಗಾರರನ್ನು ಒಳಗೊಂಡ ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿದ ಪಾಟೀದಾರ್ ಭಾರತ ತಂಡದ ನಾಯಕತ್ವಕ್ಕೆ ಸೂಕ್ತ ಅಭ್ಯರ್ಥಿ,'' ಎಂದು ಕರೀಮ್ ಅಭಿಪ್ರಾಯ ಪಟ್ಟಿದ್ದಾರೆ. ಶ್ರೇಯಸ್ ಅಯ್ಯರ್, ತಿಲಕ್ ವರ್ಮ, ಸಂಜು ಸ್ಯಾಮ್ಸನ್ ಮತ್ತು ಇಶಾನ್ ಕಿಶನ್ ಅವರ ಹೆಸರುಗಳೂ ನಾಯಕತ್ವದ ರೇಸ್‌ನಲ್ಲಿ ಮುಖ್ಯವಾಗಿ ಕೇಳಿ ಬಂದಿವೆ.

ಫೈನಲ್‌ಗೆ ಮಿರಾ ಆಂಡ್ರೀವಾ

ಸೆಮಿಫೈನಲ್‌ನಲ್ಲಿ ಮಾರ್ಟಾ ವಿರುದ್ಧ ಗೆಲುವು

ಪ್ಯಾರಿಸ್: ರಷ್ಯಾದ ಸ್ಟಾರ್ ಟೆನಿಸ್ ಆಟಗಾರ್ತಿ ಮಿರಾ ಆಂಡ್ರೀವಾ ಫ್ರೆಂಚ್ ಓಪನ್ ಸೆಮಿಫೈನಲ್ ಪಂದ್ಯದಲ್ಲಿ ಮಾರ್ಟಾ ಕೊಸ್ಟ್ಯುಕ್ ರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದಾರೆ. 19 ವರ್ಷದ ಯುವ ಆಟಗಾರ್ತಿ ಗುರುವಾರ ತಮ್ಮ ಪ್ರತಿಸ್ಪರ್ಧಿ ಉಕ್ರೇನ್‌ನ ಮಾರ್ಟಾ ಎದುರು 6-1, 6-3 ನೇರ ಸೆಟ್‌ಗಳ ಜಯ ಸಾಧಿಸಿದರು. ಆಂಡ್ರೀವಾರಿಗೆ ಇದು ಚೊಚ್ಚಲ ಗ್ರ‍್ಯಾಂಡ್ ಸ್ಲಾಮ್ ಫೈನಲ್ ಆಗಿದೆ. ಈ ಗೆಲುವಿನೊಂದಿಗೆ, ಆಂಡ್ರೀವಾ, ಅಮೆರಿಕದ ಕೋಕೊ ಗಾಫ್ ಬಳಿಕ ಗ್ರ‍್ಯಾಂಡ್ ಸ್ಲಾಮ್ ಮಹಿಳಾ ಸಿಂಗಲ್ಸ್ ಫೈನಲ್ ತಲುಪಿದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ನೋ ಹ್ಯಾಂಡ್‌ಶೇಕ್ ವಾರ್: ರಷ್ಯಾ ಮತ್ತು ಉಕ್ರೇನ್ ಯುದ್ಧದಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಆಂಡ್ರೀವಾ ಮತ್ತು ಮಾರ್ಟಾ ಇಬ್ಬರೂ ಪಂದ್ಯವೇಳೆ ಹಸ್ತಲಾಘವ ವಿನಿಮಯ ಮಾಡಿಕೊಳ್ಳಲಿಲ್ಲ, ಪಂದ್ಯ ಕೊನೆಗೊಂಡ ಬಳಿಕ ಪದ್ಧತಿಯಂತೆ ಜೊತೆಯಾಗಿ ಫೋಟೋ ತೆಗೆಸಿಕೊಳ್ಳುವ ಕಾರ್ಯಕ್ರಮವೂ ನಡೆಯಲಿಲ್ಲ, ಇಬ್ಬರೂ ಪ್ರತ್ಯೇಕವಾಗಿ ಫೋಟೋಗೆ ಪೋಸ್ ನೀಡಿದರು.

ಮಿರಾ ಆಂಡ್ರೀವಾ

ಫೈನಲ್‌ನಲ್ಲಿ ಚ್ವಾಲಿನ್‌ಸ್ಕಾ ಎದುರಾಳಿ: ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಆಂಡ್ರೀವಾ ಪೋಲೆಂಡ್‌ನ ಮಾಜ ಚ್ವಾಲಿನ್ಸ್ಕಾರನ್ನು ಎದುರಿಸಲಿದ್ದಾರೆ. ಗುರುವಾರ ಚ್ವಾಲಿನ್‌ಸ್ಕಾ, ರಷ್ಯಾದ ಡಯಾನಾ ಶ್ನೈಡರ್ ರನ್ನು 7-6, 6-4 ನೇರ ಸೆಟ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದರು.

ಕ್ವಾರ್ಟರ್‌ಫೈನಲ್‌ಗೆ ಹರಿಹರನ್- ಅರ್ಜುನ್

ಇಂಡೋನೇಷ್ಯಾ ಓಪನ್

ಸಿಂಧೂ, ಆಯುಷ್ ನಿರ್ಗಮನ

ಜಕಾರ್ತ: ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಹರಿಹರನ್ ಅಮ್ಸಕರುಣನ್ ಮತ್ತು ಎಂ.ಆರ್. ಅರ್ಜುನ್ ಜೋಡಿ ಭರ್ಜರಿ ಜಯ ಸಾಧಿಸಿ ಕ್ವಾರ್ಟರ್‌ಫೈನಲ್ಸ್‌ಗೆ ಲಗ್ಗೆಯಿಟ್ಟಿದೆ. ಮಲೇಷ್ಯಾದ ಆರನ್ ತೈ ಮತ್ತು ಕಾಂಗ್ ಖಾಯ್ ಕ್ಸಿಂಗ್ ಜೋಡಿಯನ್ನು 16-21, 21-15, 21-19 ರಿಂದ ಮಣಿಸಿದ ಭಾರತದ ಜೋಡಿ, ಮೊದಲ ಬಾರಿಗೆ ಸೂಪರ್1000 ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ.

ಮಹಿಳಾ ಸಿಂಗಲ್ಸ್ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಪಿ.ವಿ. ಸಿಂಧೂ, ವಿಶ್ವದ ನಂ.1 ಆಟಗಾರ್ತಿ ಅನ್ ಸೆ ಯಂಗ್ ವಿರುದ್ಧ 17-21, 14-21 ನೇರ ಗೇಮ್‌ಗಳಿಂದ ಸೋತು ಹೊರಬಿದ್ದಿದ್ದಾರೆ. ದಕ್ಷಿಣ ಕೊರಿಯಾದ ಆಟಗಾರ್ತಿ ವಿರುದ್ಧ ಸಿಂಧೂಗೆ ಇದು ಸತತ 10ನೇ ಸೋಲಾಗಿದೆ. ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಆಯುಷ್ ಶೆಟ್ಟಿ, ಹಾಂಕಾಂಗ್‌ನ ಲೀ ಚೆಕ್ ಯಿಯು ವಿರುದ್ಧ ಸೋಲು ಕಂಡು ಟೂರ್ನಿಯಿಂದ ಹೊರಬಿದ್ದಿದ್ದಾರೆ.

23 ವರ್ಷದೊಳಗಿನವರ ಏಷ್ಯನ್ ಕ್ರೀಡಾಕೂಟ: ಭಾರತ ತಂಡ ಪ್ರಕಟ

ಹೊಸದಿಲ್ಲಿ: ಚೀನಾದ ಓರ್ಡೋಸ್‌ನಲ್ಲಿ ಜುಲೈ 9ರಿಂದ 12 ರವರೆಗೆ ನಡೆಯಲಿರುವ ಚೊಚ್ಚಲ ಏಷ್ಯನ್ ಯು-23 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಾಗಿ 54 ಸದಸ್ಯರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಈ ತಂಡವನ್ನು ಪ್ರತಿಭಾವಂತ ಪೋಲ್ ವಾಲ್ಟರ್‌ಗಳಾದ ದೇವ್ ಕುಮಾರ್‌ಮೀನಾ, ಕುಲದೀಪ್ ಕುಮಾರ್, ಲಾಂಗ್ ಜಂಪರ್ ಶೈಲಿ ಸಿಂಗ್ ಮತ್ತು ಜಾವೆಲಿನ್ ಎಸೆತಗಾರ ಶಿವಂ ಲೋಹಕರೆ ಮುನ್ನಡೆಸಲಿದ್ದಾರೆ.

ಕಳೆದ ತಿಂಗಳು ರಾಂಚಿಯಲ್ಲಿ ನಡೆದ ಫೆಡರೇಷನ್ ಕಪ್ ನಲ್ಲಿ ದೇವ್ ಮತ್ತು ಕುಲದೀಪ್ ಪೋಲ್ ವಾಲ್ಟ್‌ನಲ್ಲಿ ಹೊಸ ರಾಷ್ಟ್ರೀಯ ದಾಖಲೆ ಬರೆದಿದ್ದರೆ, ಶಿವಂ ಜಾವೆಲಿನ್‌ನಲ್ಲಿ ಚಿನ್ನ ಗೆದ್ದಿದ್ದರು. ಇಪ್ಪತ್ತು ವರ್ಷದೊಳಗಿನವರ ವಿಶ್ವ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದಿರುವ ಶೈಲಿ ಸಿಂಗ್ ಮಹಿಳಾ ಲಾಂಗ್ ಜಂಪ್ ನಲ್ಲಿ ಸ್ಪರ್ಧಿಸಲಿದ್ದಾರೆ. ಇವರೊಂದಿಗೆ ಸ್ಟೀಪಲ್‌ಚೇಸರ್ ಶಾರುಖ್ ಖಾನ್ ಮತ್ತು ರೇಸ್ ವಾಕರ್ ಆರತಿ ಕೂಡ ತಂಡದಲ್ಲಿದ್ದಾರೆ. ಭಾರತೀಯ ಕ್ರೀಡಾಪಟುಗಳು ಚೀನಾದಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸವನ್ನು ಭಾರತೀಯ ಅಥ್ಲೆಟಿಕ್ಸ್ ಫೆಡರೇಶನ್ ವ್ಯಕ್ತಪಡಿಸಿದೆ.

ಇಂದು ಮಹಾರಾಜ ಟ್ರೋಫಿ ಆಟಗಾರರ ಹರಾಜು ಪ್ರಕ್ರಿಯೆ

■ ಕರುಣ್ ನಾಯರ್, ಮಯಂಕ್ ಅಗರ್ವಾಲ್ ಮತ್ತು ಮನೀಶ್ ಪಾಂಡೆ ಪ್ರಮುಖ ಆಕರ್ಷಣೆ

ಬೆಂಗಳೂರು: ಕೆಎಸ್‌ಸಿಎ ಮಹಾರಾಜ ಟ್ರೋಫಿ ಟಿ20 ಟೂರ್ನಿಯ 5ನೇ ಆವೃತ್ತಿಯ ಆಟಗಾರರ ಹರಾಜು ಶುಕ್ರವಾರ ನಡೆಯಲಿದೆ. ಕರುಣ್ ನಾಯರ್, ಮಯಂಕ್ ಅಗರ್ವಾಲ್ ಮತ್ತು ಮನೀಶ್ ಪಾಂಡೆ ಪ್ರಮುಖ ಆಕರ್ಷಣೆಯಾಗಿದ್ದಾರೆ. ಆರು ಫ್ರಾಂಚೈಸಿಗಳು ತಲಾ 60 ಲಕ್ಷ ರೂ. ಬಜೆಟ್‌ನೊಂದಿಗೆ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದರೆ, 150ಕ್ಕೂ ಹೆಚ್ಚು ಆಟಗಾರರು ಕಣದಲ್ಲಿದ್ದಾರೆ.

ಆಟಗಾರರನ್ನು ಒಟ್ಟು 5 ಗುಂಪುಗಳಾಗಿ ವಿಂಗಡಿಸಲಾಗಿದೆ. 2 ಲಕ್ಷ ರೂ. ಮೂಲ ಬೆಲೆಯ 'ಎ' ಗುಂಪಿನಲ್ಲಿ ನಾಯರ್, ಅಗರ್ವಾಲ್, ಪಾಂಡೆ ಅವರೊಂದಿಗೆ ವೈಶಾಕ್ ವಿಜಯ್ ಕುಮಾರ್ ಮತ್ತು ಯಶ್ ರಾಜ್ ಪೂಂಜಾ ಸೇರಿದ್ದಾರೆ. 5 ಗುಂಪುಗಳಲ್ಲಿ ವಿಂಗಡಿಸಲಾಗಿರುವ ಆಟಗಾರರ ಮೂಲ ಬೆಲೆ ಕ್ರಮವಾಗಿ 2 ಲಕ್ಷರೂ, 1 ಲಕ್ಷರೂ., 50,000 ರೂ., 75,000 ರೂ. ಮತ್ತು 30,000 ರೂ. ನಿಗದಿ ಪಡಿಸಲಾಗಿದೆ. ಟೂರ್ನಿಯು ಜೂನ್ 12ರಿಂದ ಜುಲೈ 12ರವರೆಗೆ ಮೈಸೂರು, ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ನಡೆಯಲಿದೆ.

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS)
ಸುವರ್ಣ ಭವನ, 3ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ದೂರವಾಣಿ:080-22230281/0282, ಇ-ಮೇಲ್:dir-edcs@karnataka.gov.in
ಸಂಖ್ಯೆ:EDCS/14/ADM/2020-K1-EDCS (322126) ದಿನಾಂಕ:04.06.2026
ಟೆಂಡರ್ ಆಹ್ವಾನ
ಅರ್ಹ ಬಿಡ್‌ದಾರರಿಂದ, ಕೆಳಕಂಡ ಟೆಂಡರ್‌ಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
ವೆಬ್‌ಸೈಟ್: https://kppp.karnataka.gov.in
1) ಟೆಂಡರ್ ಸಂಖ್ಯೆ – **DPAREGOV/2025-26/SE0036/CALL-2 (Request for proposal (RFP) for selection of Banking partner for Bangalore one & Karnataka one Project of Directorate of Electronic Delivery of Citizen Services)** ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ ದಿ:20.06.2026, 4:30 PM.
ಸಹಿ/– ನಿರ್ದೇಶಕರು ಇಡಿಸಿಎಸ್ ನಿರ್ದೇಶನಾಲಯ
ಡಿಐಪಿಆರ್/ಸಿಪಿ/987/ಸಿಸಿಎಲ್/2026-27

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
2ನೇ ಮಹಡಿ, ವನವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003. ದೂ.ಸಂ.: 22228263, 22228264
ಸಂಖ್ಯೆ: STRRPA/TP/LAO/07/2023-24 ದಿನಾಂಕ: 04.06.2026
ಸಾರ್ವಜನಿಕ ಪ್ರಕಟಣೆ
ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಶೆಟ್ಟೇರಹಳ್ಳಿ ಗ್ರಾಮದ ಸ.ನಂ.78ರಲ್ಲಿ 3ಎಕರೆ–37ಗುಂಟೆ, 79ರಲ್ಲಿ 4–00ಎಕರೆ, 60ರಲ್ಲಿ 5ಎಕರೆ–37ಗುಂಟೆ, 57/1ರಲ್ಲಿ 1ಎಕರೆ–24ಗುಂಟೆ, 65ರಲ್ಲಿ 4ಎಕರೆ–11ಗುಂಟೆ, 68/1ರಲ್ಲಿ 1ಎಕರೆ–22ಗುಂಟೆ, 76/1ರಲ್ಲಿ 1ಎಕರೆ–19ಗುಂಟೆ, 104/1ರಲ್ಲಿ 2ಎಕರೆ–11ಗುಂಟೆ, 45/1ರಲ್ಲಿ 1ಎಕರೆ–23ಗುಂಟೆ, 64ರಲ್ಲಿ 4ಎಕರೆ–17ಗುಂಟೆ, 84ರಲ್ಲಿ 6ಎಕರೆ–35ಗುಂಟೆ, 107/2ರಲ್ಲಿ 4ಎಕರೆ–14ಗುಂಟೆ, 106/2ರಲ್ಲಿ 2ಎಕರೆ–22ಗುಂಟೆ, 77ರಲ್ಲಿ 5–00ಎಕರೆ, 85ರಲ್ಲಿ 4ಎಕರೆ–39ಗುಂಟೆ, 105ರಲ್ಲಿ 4ಎಕರೆ–37ಗುಂಟೆ, 66ರಲ್ಲಿ 5–00ಎಕರೆ, 67ರಲ್ಲಿ 5–00ಎಕರೆ, 86ರಲ್ಲಿ 4ಎಕರೆ–37ಗುಂಟೆ, 87/1ರಲ್ಲಿ 1ಎಕರೆ–20ಗುಂಟೆ, 88/1ರಲ್ಲಿ 1ಎಕರೆ–18ಗುಂಟೆ, 103/2ರಲ್ಲಿ 2ಎಕರೆ–33ಗುಂಟೆ, 59ರಲ್ಲಿ 5–00ಎಕರೆ, 56/1ರಲ್ಲಿ 1ಎಕರೆ–23ಗುಂಟೆ, 58ರಲ್ಲಿ 5–00ಎಕರೆ, 44/4ರಲ್ಲಿ 0–34ಗುಂಟೆ, 42/4ರಲ್ಲಿ 2ಎಕರೆ–10ಗುಂಟೆ, 43/2ರಲ್ಲಿ 2ಎಕರೆ–10ಗುಂಟೆ 36/1ರಲ್ಲಿ 1ಎಕರೆ–10ಗುಂಟೆ, 37ರಲ್ಲಿ 5ಎಕರೆ–19ಗುಂಟೆ, 38ರಲ್ಲಿ 6ಎಕರೆ–29ಗುಂಟೆ, 44/1ರಲ್ಲಿ 0–24ಗುಂಟೆ, 42/1ರಲ್ಲಿ 2ಎಕರೆ–25ಗುಂಟೆ, 43/1ರಲ್ಲಿ 2ಎಕರೆ–33ಗುಂಟೆ ಒಟ್ಟು 116ಎಕರೆ–33ಗುಂಟೆ ಪೈಕಿ ಅನುಭವದಲ್ಲಿರುವ 115ಎಕರೆ–16ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ಈ ಕಛೇರಿಯಿಂದ ದಿನಾಂಕ: 19.12.2023ರಂದು ಮೆ॥ ಟ್ಯಾಂಗಲ್ಡ್ ಆಫ್ ಇನ್ ಗ್ರೀನ್ ಪ್ರಾಪರ್ಟೀಸ್ ಪ್ರೈ.ಲಿ ರವರಿಗೆ ನೀಡಲಾಗಿದೆ. ಸದರಿ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವಾಗ ಅದೇ ಗ್ರಾಮದ ಇನ್ನಿತರೆ ಸ.ನಂ. 103/1, 106/1, 107/1ಗಳನ್ನು ಸೇರಿಸಿಕೊಂಡು ಅನುಮೋದಿತ ವಿನ್ಯಾಸಕ್ಕೆ ವ್ಯತಿರಿಕ್ತವಾಗಿ ಹೆಚ್ಚುವರಿ ಪ್ರದೇಶದಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುತ್ತಿದ್ದುದರಿಂದ ಹಾಗೂ ಕಂದಾಯ ಇಲಾಖೆಯಿಂದ ಪಥ ಬದಲಾವಣೆಗೆ ಪೂರ್ವಾನುಮತಿ ಪಡೆಯದೇ ಬಡಾವಣೆ ನಿರ್ಮಿಸುತ್ತಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ (15) & (17)ರನ್ನು ಅಭಿವೃದ್ಧಿದಾರರು ಉಲ್ಲಂಘನೆ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 19.12.2023ರಂದು ನೀಡಲಾದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ದಿನಾಂಕ: 19.05.2026ರಂದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 76(ಓ)ರನ್ವಯ ಅಮಾನತು ಮಾಡಲಾಗಿದೆ. ಆದ್ದರಿಂದ ಸದರಿ ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿ ಮಾಡಬಾರದು ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.
ಸಹಿ/–ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/972/ಕೆಎಸ್‌ಎಂಸಿಎ/2026-27

ಕೈಗಾರಿಕಾ ಸಂಸ್ಥೆಗಳ ರಾಜ್ಯಮಟ್ಟದ ಸಮ್ಮೇಳನ

ತುಮಕೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಹಾಗೂ ತುಮಕೂರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸಹಯೋಗದಲ್ಲಿ ಜೂನ್ 6 ಮತ್ತು 7ರಂದು ರಾಜ್ಯಮಟ್ಟದ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಸಮ್ಮೇಳನ ಹಾಗೂ ತುಮಕೂರು ಸಂಸ್ಥೆಯ ಬೆಳ್ಳಿಹಬ್ಬ ಆಚರಣೆಯನ್ನು ನಗರದ ಹೊರವಲಯದ ಹೆಗ್ಗೆರೆಯ ಎಚ್.ಎಂ.ಗಂಗಾಧರಯ್ಯ ಮೆಮೋರಿಯಲ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಅಧ್ಯಕ್ಷ ಉಮಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಜೂ.6ರಂದು ಬೆಳಗ್ಗೆ 10.30ಕ್ಕೆ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಸಮ್ಮೇಳನ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹಾಗೂ ನಾನಾ ಸಚಿವರು, ಜಿಲ್ಲೆಯ ಶಾಸಕರು ಭಾಗವಹಿಸುವರು ಎಂದು ಹೇಳಿದರು.

ಮಾಗಡಿ ಯೋಜನಾ ಪ್ರಾಧಿಕಾರ
ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್ ಬೆಂಗಳೂರು ದಕ್ಷಿಣ ಜಿಲ್ಲೆ – 562120. ದೂರವಾಣಿ ಸಂಖ್ಯೆ: 2774 5057
ಸಂ: ಮಾಯೋಪ್ರಾ/ಭೂ.ಉ.ಬ/01/2026–27 ದಿನಾಂಕ: 03.06.2026.
ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14 (ಎ) ರಡಿಯಲ್ಲಿ)
ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ವರ್ತೂರು ಗ್ರಾಮದ ಸ.ನಂ. 4/23 ರಲ್ಲಿ ಒಟ್ಟು 01 ಎಕರೆ 00 ಗುಂಟೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶ್ರೀ ಎಸ್. ತೇಜಸ್ ರಾವ್ ಬಿನ್ ಬಿ. ಶಂಕರ್ ರಾವ್, ಜಾನಕಿ ನಿಲಯ, 2ನೇ ಕ್ರಾಸ್, ಕೆ.ಕೆ ಲೇಔಟ್, ಪಾಪರೆಡ್ಡಿ ಪಾಳ್ಯ, ನಾಗರಬಾವಿ 2ನೇ ಹಂತ, ಬೆಂಗಳೂರು–560072 ಇವರು ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.
ಸದರಿ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಈ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತವೆ ಇದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.
ದಿನಾಂಕ: 01.06.2015 ರಂದು ಸರ್ಕಾರದಿಂದ ಅನುಮೋದನೆಯಾಗಿರುವ ಮಾಗಡಿ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ–2031 ರಲ್ಲಿ ಪ್ರಶ್ನಿತ ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುತ್ತದೆ ಹಾಗೂ ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ: ಅಪಜೀ 177 ಇಎನ್‌ಜಿ 2024, **ದಿನಾಂಕ: 02.01.2026** ರಂತೆ ಸದರಿ ಜಮೀನು ಟಿ.ಜಿ.ಆರ್ ವಲಯ–04ರಲ್ಲಿ ಬರುತ್ತದೆ.
ಕರ್ನಾಟಕ ನಗರ ಮತ್ತು ಗ್ರಾಮಾಂತರ ನಗರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರಡಿಯಲ್ಲಿ ಅರ್ಜಿದಾರರ ಮನವಿ ಬಗ್ಗೆ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಈ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ ಇವರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಸದಸ್ಯ ಕಾರ್ಯದರ್ಶಿ ಹಾಗೂ ಜಂಟಿ ನಿರ್ದೇಶಕರು ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ
DIPR/BSD/82/SA/2026-27

ಬಿಐಇಸಿ: ಕಾರು ಪಾರ್ಕಿಂಗ್ ಭೂ ಸ್ವಾಧೀನ ರದ್ದು

ಬಡ ರೈತರ ಜಮೀನು ಕಿತ್ತುಕೊಳ್ಳುವುದು ಕೆಐಎಡಿಬಿ ಕಾಯಿದೆ ಉದ್ದೇಶವಲ್ಲ: ಹೈಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ಖಾಸಗಿ ಸಂಸ್ಥೆಗಳ ವ್ಯವಹಾರ ವಿಸ್ತರಣೆ ಮಾಡಲು ಬಡ ರೈತರ ಜಮೀನು ಕಿತ್ತುಕೊಳ್ಳುವುದು ಕೆಐಎಡಿಬಿ ಕಾಯಿದೆ ಉದ್ದೇಶವಲ್ಲ ಎಂದು ಹೈಕೋರ್ಟ್ ಖಡಕ್ ಆದೇಶ ನೀಡಿದೆ.

ಅಲ್ಲದೆ, ಬೆಂಗಳೂರು ಉತ್ತರ ತಾಲೂಕಿನ ಮಾದನಾಯಕನಹಳ್ಳಿ ಗ್ರಾಮದ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ) ಬಳಿ ಬಹುಹಂತದ ಕಾರು ಪಾರ್ಕಿಂಗ್ ಮತ್ತು ಇತರೆ ಸೌಲಭ್ಯಗಳಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗೊಂಡಿದ್ದ ಭೂಸ್ವಾಧೀನ ಪ್ರಕ್ರಿಯೆ ರದ್ದುಗೊಳಿಸಿದೆ.

ಭೂಸ್ವಾಧೀನಕ್ಕೆ ಕೆಐಎಡಿಬಿ ಹೊರಡಿಸಿದ್ದ ಅಂತಿಮ ಅಧಿಸೂಚನೆ ಎತ್ತಿಹಿಡಿದಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ರೈತ ಮುಖೇಶ್ ಕುಮಾರ್ ಮತ್ತಿತರರು ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಟಿ.ಎಂ. ನದಾಫ್ ಅವರಿದ್ದ ವಿಭಾಗೀಯ ಪೀಠ, ಈ ಆದೇಶ ನೀಡಿದೆ. ಅಲ್ಲದೆ, ಈ ಸಂಬಂಧ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ರದ್ದುಪಡಿಸಿ ಆದೇಶಿಸಿದೆ. ಇದರಿಂದಾಗಿ ಕಳೆದ 14 ವರ್ಷಗಳ ಕಾಲ ಭೂಮಿಗಾಗಿ ಕಾನೂನು ಹೋರಾಟ ನಡೆಸುತ್ತಿದ್ದ ರೈತರಿಗೆ ಜಯ ಸಿಕ್ಕಂತಾಗಿದೆ.

ಕೆಐಎಡಿಬಿ ಕಾಯಿದೆಯ ಪ್ರಕಾರ, ಭೂಮಿ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಗಳನ್ನು ವಿವರಿಸಿರುವ ನ್ಯಾಯಪೀಠ, ''ಸೆಕ್ಷನ್ 29ರ ಪ್ರಕಾರ ಪರಿಹಾರ ಪಾವತಿ ಮಾಡಬೇಕಾಗುತ್ತದೆ. ಈ ಎಲ್ಲ ಕ್ರಮಗಳನ್ನು ಕೈಗೊಂಡಲ್ಲಿ ಮಾತ್ರ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಆದರೆ, ಅಂತಿಮ ಅಧಿಸೂಚನೆ ಹೊರಡಿಸಿ ಸುದೀರ್ಘ 14 ವರ್ಷಗಳು ಕಳೆದಿದ್ದರೂ, ಜಮೀನು ಮಾಲೀಕರಿಗೆ ಯಾವುದೇ ಪರಿಹಾರ ಘೋಷಣೆ ಮಾಡಿಲ್ಲ ಹಾಗೂ ಯಾವುದೇ ಪರಿಹಾರ ಧನ ಠೇವಣಿ ಮಾಡಿ, ಪಾವತಿಸಿಯೂ ಇಲ್ಲ. ಯಾವುದೇ ತಡೆಯಾಜ್ಞೆ ಇಲ್ಲದಿದ್ದರೂ ಪರಿಹಾರ ಘೋಷಣೆ ಮಾಡದಿರುವುದು ಭೂಸ್ವಾಧೀನ ಪ್ರಕ್ರಿಯೆ ರದ್ದಾಗಲು ಕಾರಣವಾಗಿದೆ,'' ಎಂದು ಅಭಿಪ್ರಾಯಪಟ್ಟಿದೆ.

ಅಲ್ಲದೆ, ''ಕೆಐಎಡಿಬಿ ಕಾಯಿದೆಯ ಮೂಲ ಉದ್ದೇಶ ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವುದಾಗಿದೆ. ಆದರೆ, ಯಾವುದೇ ನಿರ್ದಿಷ್ಟ ಖಾಸಗಿ ಸಂಸ್ಥೆಗಳು ಲಾಭದಾಯಕ ಕಂಪನಿಯ ವ್ಯವಹಾರ ವಿಸ್ತರಣೆಗಾಗಿ ಬಡ ರೈತರ ಜಮೀನನ್ನು ಕಿತ್ತುಕೊಳ್ಳಲು ಅವಕಾಶ ಕಲ್ಪಿಸಲಾಗಿಲ್ಲ. ಒಂದು ವೇಳೆ ಖಾಸಗಿ ಕಂಪನಿಗಳು ಜಮೀನು ಸ್ವಾಧೀನಪಡಿಸಿಕೊಂಡರೂ ಅದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಎಂದು ಪರಿಗಣಿಸಲಾಗುವುದಿಲ್ಲ'' ಎಂದು ಪೀಠ ಹೇಳಿದೆ.

''ಕೈಗಾರಿಕಾ ಪ್ರದೇಶ ರಚನೆ ಮಾಡುವುದು ಸಾರ್ವಜನಿಕ ಉದ್ದೇಶವಾಗಿದೆ. ಆದರೆ, ಲಾಭ ಗಳಿಸುವ ಘಟಕಕ್ಕಾಗಿ ಭೂಮಿ ಸ್ವಾಧೀನಪಡಿಸಿಕೊಳ್ಳುವುದು ಕೆಐಎಡಿಬಿ ಉದ್ದೇಶಗಳಿಗೆ ಒಳಪಡುವುದಿಲ್ಲ. ಕೆಐಎಡಿಬಿಯ ಈ ಕ್ರಮದಿಂದ ಭೂಮಾಲೀಕರಿಗೆ ವಂಚನೆಯಾಗಲಿದೆ. ಇಂತಹ ಅಧಿಕಾರ ಚಲಾಯಿಸುವುದು ರಾಜ್ಯ ಅಧಿಕಾರಿಗಳು ಮಾಡುವ ಶಾಸನಬದ್ಧ ಮತ್ತು ಸಾಂವಿಧಾನಿಕ ಮೋಸವಾಗಿದೆ,'' ಎಂದು ಪ್ರತಿಕ್ರಿಯಿಸಿರುವ ನ್ಯಾಯಪೀಠ, ಭೂಸ್ವಾಧೀನ ಪ್ರಕ್ರಿಯೆಯ ಎಲ್ಲಾ ಅಧಿಸೂಚನೆಗಳನ್ನು ರದ್ದುಗೊಳಿಸಿದೆ.

ಇಂಡಿಯನ್ ಮೆಷಿನ್ ಟೂಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ ಸಂಸ್ಥೆಯು ಮಾದನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 18/316, 18/317, 68, 69, 70 ಮತ್ತು 71ರಲ್ಲಿದ್ದ ಒಟ್ಟು 23 ಎಕರೆ 38 ಗುಂಟೆ ಜಮೀನನ್ನು ಬಹುಹಂತದ ಕಾರು ಪಾರ್ಕಿಂಗ್ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಡುವಂತೆ ಸರಕಾರವನ್ನು ಕೋರಿತ್ತು. ಆ ಮನವಿ ಪರಿಗಣಿಸಿದ್ದ ಕೆಐಎಡಿಬಿ, 2010ರಲ್ಲಿ ಅಧಿಸೂಚನೆ ಮತ್ತು 2012ರ ಮೇ 2 ರಂದು 17.38 ಎಕರೆಗೆ ಸೀಮಿತಗೊಳಿಸಿ ಅಂತಿಮ ಭೂಸ್ವಾಧೀನ ಅಧಿಸೂಚನೆ ಹೊರಡಿಸಿತ್ತು. ಅದನ್ನು ಪ್ರಶ್ನಿಸಿ ಟಿ. ಕೃಷ್ಣಪ್ಪ ಸೇರಿ ಹಲವು ಜಮೀನು ಮಾಲೀಕರು ಹೈಕೋರ್ಟ್‌ನ ಮೆಟ್ಟಿಲೇರಿದ್ದರು.

ಗಡೀಪಾರು ಪ್ರಶ್ನಿಸಿ ತಿಮರೋಡಿ ಸಲ್ಲಿಸಿದ್ದ ಮೇಲ್ಮನವಿ ವಜಾ

■ **ವಿಕ ಸುದ್ದಿಲೋಕ** ಬೆಂಗಳೂರು

ಕಾನೂನು ಮತ್ತು ಸುವ್ಯವಸ್ಥೆ ಹಿನ್ನೆಲೆಯಲ್ಲಿ ತಮ್ಮನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿಗೆ 3ನೇ ಬಾರಿಗೆ ಗಡೀಪಾರು ಮಾಡಿ ಹೊರಡಿದ್ದ ಆದೇಶ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ಗುರುವಾರ ವಜಾಗೊಳಿಸಿದೆ.

ತಿಮರೋಡಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾ. ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ಪೀಠ, ಏಕ ಸದಸ್ಯಪೀಠದ ಆದೇಶದಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದು ಮೇಲ್ಮನವಿ ವಜಾಗೊಳಿಸಿತು.

ಸರಕಾರದ ಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸುವವರೆಗೆ ಗಡೀಪಾರು ಆದೇಶ ಜಾರಿಗೊಳಿಸದಂತೆ ಏಕಸದಸ್ಯ ಪೀಠ ನೀಡಿದ್ದ ಮಧ್ಯಂತರ ಆದೇಶವನ್ನು ವಿಸ್ತರಿಸುವಂತೆ ಅರ್ಜಿದಾರರ ಪರ ವಕೀಲರು ಮಾಡಿದ ಮನವಿಯನ್ನು ವಿಭಾಗೀಯಪೀಠ ತಳ್ಳಿ ಹಾಕಿತು.

ಅರ್ಜಿದಾರರು 1997ರಿಂದಲೂ ಹಲವು ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ತಾನು ವಿದ್ಯಾರ್ಥಿನಿ ಸೌಜನ್ಯಾ ಸಾವಿನ ಪ್ರಕರಣಕ್ಕೆ ನ್ಯಾಯ ಕೊಡಿಸುತ್ತೇನೆಂದು ಹೇಳಿಕೊಳ್ಳುತ್ತಾ ಸ್ಥಳೀಯವಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುತ್ತಿದ್ದಾರೆ. ಇದರಿಂದ 26 ಪ್ರಕರಣಗಳು ವಿಚಾರಣಾ ಹಂತದಲ್ಲಿ ಬಾಕಿ ಇವೆ. ಇದಲ್ಲದೆ, ಐದು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಗಡೀಪಾರು ಆದೇಶವನ್ನು ಸರಕಾರ ಬಲವಾಗಿ ಸಮರ್ಥಿಸಿಕೊಂಡಿತ್ತು. ತಿಮರೋಡಿಯನ್ನು ಗಡೀಪಾರು ಮಾಡಿ 2026ರ ಮಾ.13ರಂದು ಪುತ್ತೂರು ವಿಭಾಗಾಧಿಕಾರಿ 3ನೇ ಬಾರಿಗೆ ಆದೇಶ ಹೊರಡಿಸಿದ್ದರು. ಅದನ್ನು ಪ್ರಶ್ನಿಸಿ ತಿಮರೋಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಭೂ ಶಾಂತಿ/ಹಾಲು ತುಪ್ಪ ಮತ್ತು ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ಡಿ. ಗೌರಮ್ಮ
(ಲೇಟ್ ಶ್ರೀ ಪಿ. ನರಸಿಂಹಯ್ಯನವರ (ಅಬಕಾರಿ ಗುತ್ತಿಗೆದಾರರು) ಧರ್ಮಪತ್ನಿ
ತಾ॥ 01-06-2026 ಸೋಮವಾರದಂದು ನಮ್ಮ ತಾಯಿಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದಿನಾಂಕ : 05-06-2026ನೇ ಶುಕ್ರವಾರದಂದು ಬೆಳಗ್ಗೆ 11.00ಕ್ಕೆ ಹಾಲು ತುಪ್ಪ ಕಾರ್ಯವನ್ನು ಅಪ್ಪಾಜಿ ಗೌರಮ್ಮ ಫಾರ್ಮ್, ಹಾರೋಹಳ್ಳಿ, ಕನಕಪುರ, ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 209 ಇಲ್ಲಿ ನಡೆಸಲಾಗುವುದು ಹಾಗೂ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 11-06-2026ನೇ ಗುರುವಾರ ಸಂಜೆ 7.00ಕ್ಕೆ ನಮ್ಮ ಸ್ವಗೃಹ ಜಯನಗರ, ಬೆಂಗಳೂರು ಇಲ್ಲಿ ನಡೆಸಲು ನಿಶ್ಚಯಿಸಲಾಗಿದೆ. ಆದ್ದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ
ಇಂತಿ,
ಮಕ್ಕಳು ಹಾಗೂ ಮೊಮ್ಮಕ್ಕಳು
ಸ್ಥಳ :
ನಂ.510, 46ನೇ ಅಡ್ಡರಸ್ತೆ, 8ನೇ ಬಡಾವಣೆ, 9ನೇ ಮುಖ್ಯರಸ್ತೆ, ಜಯನಗರ, ಬೆಂಗಳೂರು - 560 041.
(ಲ್ಯಾಂಡ್ ಮಾರ್ಕ್: ಮುಗ್ಧ ಸಿಲ್ಕ್ ಸ್ಯಾರಿ ಶೋರೂಂ ಪಕ್ಕ)

ಕಾಂಕ್ರೀಟ್ ಕಾಡಿಗೆ ಮಿಯಾವಾಕಿ ಮದ್ದು | ರಾಜ್ಯಾದ್ಯಂತ ಹಸಿರು ಕ್ರಾಂತಿಗೆ ಮುನ್ನುಡಿ!

ರಾಜ್ಯದ 100 ನಗರಗಳಲ್ಲಿ ಗ್ರೀನ್ ಪಾರ್ಕ್ ಸಂಕಲ್ಪ

ಮನೆಯ ಹಿತ್ತಲಿನ ಸಣ್ಣ ಜಾಗದಿಂದ ಹಿಡಿದು ನಗರದ ಹೃದಯಭಾಗದವರೆಗೂ ಹಸಿರನ್ನು ಮರುಸೃಷ್ಟಿಸಲು ‘ಮಿಯಾವಾಕಿ’ ಅತ್ಯುತ್ತಮ ಅಸ್ತ್ರವಾಗಿದೆ. ಸರಕಾರದ 100 ಗ್ರೀನ್ ಪಾರ್ಕ್ ಯೋಜನೆ ಹಾಗೂ ನವ್ಯಶ್ರೀ ಅವರಂತಹ ಪರಿಸರ ಪ್ರೇಮಿಗಳ ಖಾಸಗಿ ಪ್ರಯತ್ನಗಳು ಜೊತೆಯಾದರೆ, ಮುಂದಿನ ದಿನಗಳಲ್ಲಿ ರಾಜ್ಯದ ನಗರಗಳು ಕಾಂಕ್ರೀಟ್ ಶಾಖದಿಂದ ಮುಕ್ತಿ ಪಡೆದು ಮತ್ತೆ ಹಸಿರು ಉಸಿರನ್ನು ಪಡೆದುಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಕುರಿತು ಬೆಳಕು ಚೆಲ್ಲುವ ಎರಡು ವಿಶೇಷ ವರದಿಗಳು.

■ **ರವಿಭಾರತಿ ಗೋಸಾವಿ** ಬೆಳಗಾವಿ
ravi.gosavi@timesofindia.com

ನಗರೀಕರಣದ ಭರಾಟೆಯಿಂದಾಗಿ ನಗರ ಪ್ರದೇಶಗಳಲ್ಲಿ ಹಸಿರು ವಲಯಗಳು ವರ್ಷದಿಂದ ವರ್ಷಕ್ಕೆ ಕುಗ್ಗುತ್ತಿವೆ. ಹೆಚ್ಚುತ್ತಿರುವ ಉಷ್ಣಾಂಶ, ವಾಯುಮಾಲಿನ್ಯ ಮತ್ತು ಪರಿಸರ ಅಸಮತೋಲನದಂತಹ ಸವಾಲುಗಳು ಸಾರ್ವಜನಿಕರ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ. ಒಂದು ಕಾಲದಲ್ಲಿ ಗಿಡಮರಗಳಿಂದ ಕಂಗೊಳಿಸುತ್ತಿದ್ದ ಜಾಗಗಳು ಇಂದು ಬೃಹತ್ ಕಟ್ಟಡಗಳ ‘ಕಾಂಕ್ರೀಟ್ ಕಾಡು’ಗಳಾಗಿ ಬದಲಾಗುತ್ತಿವೆ. ಈ ಪರಿಸರ ತುರ್ತು ಪರಿಸ್ಥಿತಿಗೆ ಪರಿಹಾರೋಪಾಯವಾಗಿ, ಕಡಿಮೆ ಜಾಗದಲ್ಲಿ ಅತ್ಯಂತ ವೇಗವಾಗಿ ದಟ್ಟ ಅರಣ್ಯ ನಿರ್ಮಿಸುವ ಜಪಾನ್ ತಂತ್ರಜ್ಞಾನದ ‘ಮಿಯಾವಾಕಿ’ ಪದ್ಧತಿ ಈಗ ರಾಜ್ಯಾದ್ಯಂತ ದೊಡ್ಡ ಆಶಾಕಿರಣವಾಗಿ ಮೂಡಿಬಂದಿದೆ. ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸರಕಾರದ ಹಂತದಲ್ಲಿ ಮತ್ತು ವೈಯಕ್ತಿಕ ಮಟ್ಟದಲ್ಲಿ ಮಿಯಾವಾಕಿ ಅರಣ್ಯೀಕರಣಕ್ಕೆ ಚಾಲನೆ ಸಿಗುತ್ತಿದೆ.

100 ನಗರಗಳಲ್ಲಿ ಗ್ರೀನ್ ಪಾರ್ಕ್: ನಗರ ಪ್ರದೇಶಗಳಿಗೆ ಹಸಿರು ಸ್ಪರ್ಶ ನೀಡುವ ಹಾಗೂ ಅವುಗಳನ್ನು ‘ನಗರದ ಹಸಿರು ಶ್ವಾಸಕೋಶ’ಗಳನ್ನಾಗಿ ಪರಿವರ್ತಿಸುವ ಬೃಹತ್ ಯೋಜನೆಗೆ ಪೌರಾಡಳಿತ ನಿರ್ದೇಶನಾಲಯ ಮುಂದಾಗಿದೆ. ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸೇರಿದಂತೆ ರಾಜ್ಯಾದ್ಯಂತ ಆಯ್ದ 100 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಿಯಾವಾಕಿ ಪಾರ್ಕ್ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತಿದೆ.

ತ್ಯಾಜ್ಯ ಮುಕ್ತ ಜಾಗಗಳು: ನಗರಗಳಲ್ಲಿ ನಿರ್ಲಕ್ಷ್ಯಕ್ಕೊಳಗಾಗಿ ಕಸದ ದೊಡ್ಡಿಗಳಾಗಿರುವ ಸರಕಾರಿ ಖಾಲಿ ಜಾಗಗಳು, ಕೆರೆಗಳ ಬಫರ್‌ವಲಯಗಳು ಮತ್ತು ರಸ್ತೆ ಬದಿಗಳನ್ನು ಈ ಅರಣ್ಯಕ್ಕಾಗಿ ಬಳಸಿಕೊಳ್ಳಲಾಗುತ್ತಿದ್ದು, ಕನಿಷ್ಠ 100 ಚದರ ಮೀಟರ್‌ಜಾಗಕ್ಕೆ ಆದ್ಯತೆ ನೀಡಲಾಗಿದೆ.

ಬೆಳಗಾವಿಯಲ್ಲಿ ಮೊದಲ ಹೆಜ್ಜೆ: “ಬೆಳಗಾವಿ ನಗರದ ನಾಲ್ಕು ಸ್ಥಳಗಳಲ್ಲಿ ಈ ಪಾರ್ಕ್ ನಿರ್ಮಿಸುವ ಗುರಿ ಹೊಂದಲಾಗಿದ್ದು, ಶ್ರೀನಗರದ ನಂದಿನಿ ಮಾರ್ಗದಲ್ಲಿ ಮೊದಲ ಮಿಯಾವಾಕಿ ಪಾರ್ಕ್‌ಗೆ ಚಾಲನೆ ನೀಡಲಾಗುತ್ತಿದೆ,” ಎಂದು ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತ ಎಂ. ಕಾರ್ತಿಕ ತಿಳಿಸಿದ್ದಾರೆ.

ಮಿಯಾವಾಕಿ ಪಾರ್ಕ್ ಮಾದರಿ.

ಈ ಬಾರಿ ಬರೀ ಗಿಡ ನೆಡುವುದಷ್ಟೇ ಅಲ್ಲದೆ, 85 ರಿಂದ 90 ರಷ್ಟು ಸಸಿಗಳನ್ನು ಉಳಿಸಿಕೊಳ್ಳಲು ಮೊದಲ 3 ವರ್ಷಗಳ ಕಾಲ ಕಡ್ಡಾಯ ನೀರಾವರಿ, ಕಳೆ ನಿಯಂತ್ರಣ ಮತ್ತು ಬೇಲಿ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದಕ್ಕಾಗಿ ಶಾಲಾ-ಕಾಲೇಜುಗಳು, ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಎನ್‌ಜಿಒಗಳನ್ನು ಒಳಗೊಳ್ಳಲಾಗುತ್ತಿದೆ.

ಶಿವಮೊಗ್ಗ ಶ್ರೀಸಾಮಾನ್ಯನ ಸಾಹಸ

■ **ಆತೀಶ್ ಬಿ. ಕನ್ನಾಳೆ** ಶಿವಮೊಗ್ಗ
aatish.kannale@timesofindia.com

ಸರಕಾರದ ಯೋಜನೆಯೊಂದೆಡೆ ಇರಲಿ, ಶಿವಮೊಗ್ಗದಲ್ಲಿ ಪರಿಸರ ಪ್ರೇಮಿಯೊಬ್ಬರು ತನ್ನ ವೈಯಕ್ತಿಕ ಕಾಳಜಿಯಿಂದ ಪಶ್ಚಿಮಘಟ್ಟಗಳ ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ರಕ್ಷಿಸಲು ಮಿಯಾವಾಕಿ ಮಾದರಿಯನ್ನು ಆರಿಸಿಕೊಂಡಿದ್ದಾರೆ.

ಈಶ್ವರವನ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರಾದ ನವ್ಯಶ್ರೀ ನಾಗೇಶ್ ಅವರು ಶಿವಮೊಗ್ಗ ಹೊರವಲಯದ ಅಬ್ಬಲಗೆರೆಯಲ್ಲಿ ಕೇವಲ 20/40 ಅಡಿಯ ಸಣ್ಣ ನಿವೇಶನ ಖರೀದಿಸಿ, ಅಲ್ಲಿ ಸುಮಾರು 150 ಕಾಡು ಜಾತಿಯ ಮರಗಳನ್ನು ಬೆಳೆಸಲು ಸಜ್ಜಾಗಿದ್ದಾರೆ. ಈಗಾಗಲೇ ಇವರು ತಮ್ಮ ಮನೆಯಲ್ಲೇ ಮಿನಿ ಮಿಯಾವಾಕಿ ಮಾದರಿ ಸಿದ್ಧಪಡಿಸಿ ಯಶಸ್ಸು ಕಂಡಿದ್ದಾರೆ.

ಅಳಿವಿನಂಚಿನ ತಳಿಗಳಿಗೆ ಆದ್ಯತೆ: ಆಗುಂಬೆ, ಚಕ್ರ ಮತ್ತು ಉತ್ತರ ಕನ್ನಡದ ಶಿರಸಿಯಿಂದ ಅಪರೂಪದ ಕಾಡು ಜಾತಿಯ ಸಸಿಗಳನ್ನು ತರಿಸಲಾಗುತ್ತಿದೆ. ನೆಲ್ಲಿ, ಬಸವನಪಾದ, ಬಾಗೆ, ಬಿಲ್ವಾರ, ಮತ್ತಿ, ನೇರಲೆ, ಮಹಾಗನಿ, ಕದಂಬ, ಹೊಳೆ ದಾಸವಾಳ, ಪುನರ್ಪುಳಿ, ಬೀಟೆ, ಮಾವು, ಹಲಸು ಸೇರಿದಂತೆ ಹಲವು ಪ್ರಭೇದಗಳನ್ನು ಇಲ್ಲಿ ನೆಡಲಾಗುತ್ತಿದೆ. ವಿಶೇಷವೆಂದರೆ, ಇಲ್ಲಿ ಒಂದೊಂದು ತಳಿಯ ಒಂದೇ ಒಂದು ಮರ ಮಾತ್ರ ಇರಲಿದೆ!

ದಶಕೋತ್ಸವದ ಪ್ರೇರಣೆ: ನಾಗೇಶ್ ಅವರು ಈಗಾಗಲೇ ‘ಈಶ್ವರವನ’ದ ಮೂಲಕ 120 ಪ್ರಭೇದದ ಕಾಡು ಜಾತಿಯ ಮರಗಳನ್ನು ಬೆಳೆಸಿದ್ದು, ಅವು ಇಂದು 60-70 ಅಡಿ ಎತ್ತರಕ್ಕೆ ಬೆಳೆದು ಜೀವವೈವಿಧ್ಯದ ತಾಣವಾಗಿ ಮಾರ್ಪಟ್ಟಿವೆ. ಇದರ 10 ವರ್ಷಗಳ ಯಶಸ್ಸಿನ ಸವಿನೆನಪಿಗಾಗಿ ಶಿವಮೊಗ್ಗದ ಮೊದಲ ಮಿಯಾವಾಕಿ ಕಾಡಿಗೆ ಇವರು ಕೈಹಾಕಿದ್ದಾರೆ.

ಶಿವಮೊಗ್ಗದ ಅಬ್ಬಲಗೆರೆಯಲ್ಲಿ ಮಿಯಾವಾಕಿಗೆ ಸಿದ್ಧವಾಗಿರುವ ಭೂಮಿ.

ಮಿಯಾವಾಕಿ ಕಾಡು ಬೆಳೆಸಲು ಭೂಮಿ ಸಿದ್ಧವಾಗಿದ್ದು, ಪರಿಸರ ದಿನದಂದೇ ಚಾಲನೆ ನೀಡಲಾಗುತ್ತಿದೆ. ಸಾಂಪ್ರದಾಯಿಕ ಕಾಡಿಗೆ ಹೋಲಿಸಿದರೆ ಮಿಯಾವಾಕಿ ಪದ್ಧತಿಯಲ್ಲಿ ಏಕಕಾಲಕ್ಕೆ ಎಲ್ಲ ಗಿಡಗಳಿಗೂ ಕೇವಲ 15-20 ನಿಮಿಷಗಳಲ್ಲಿ ನೀರುಣಿಸಬಹುದು. ಜೂನ್-ಜುಲೈ ಒಳಗೆ ಗಿಡ ನೆಡುವ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು, ಕೆಲವೇ ವರ್ಷಗಳಲ್ಲಿ ಈ ಕಿರು ಅರಣ್ಯ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ.

-**ನವ್ಯಶ್ರೀ ನಾಗೇಶ್** ಶಿವಮೊಗ್ಗ

ರಿಯಾಲ್ಟಿ ಕ್ಷೇತ್ರದಲ್ಲಿ ಹಸಿರು ಕಾಳಜಿ

- ಈಗ ಗ್ರೀನ್ ಬಿಲ್ಡಿಂಗ್‌ಗಳದ್ದೇ ಹವಾ, ಪರಿಸರಸ್ನೇಹಿ ಸ್ಪರ್ಶ
- ಪರಿಸರಸ್ನೇಹಿ ಯೋಜನೆಗಳಿಗೆ ಸರಕಾರದ ಸವಲತ್ತುಗಳ ಬಲ

ಪರಿಸರ ಕಾಳಜಿ ವಿಷಯದಲ್ಲಿ ಈಗ ರಿಯಲ್ ಎಸ್ಟೇಟ್ ಕ್ಷೇತ್ರ ಕೂಡ ಹಸಿರು ಧೋರಣೆ ಅನುಸರಿಸುತ್ತಿದೆ. ಮುಖ್ಯವಾಗಿ ಭಾರತದಲ್ಲಿ ಹೆಚ್ಚುತ್ತಿರುವ ನಗರೀಕರಣವು ಪರಿಸರ ಕಾಳಜಿ ಮತ್ತು ಮಾಲಿನ್ಯ ತಡೆಗಾಗಿ ಹೊಸ ಪರಿಹಾರಗಳನ್ನು ಕಂಡುಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಹಸಿರು ಕಟ್ಟಡದ ಮಾನದಂಡಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.

■ **ವಿಕ ಸುದ್ದಿಲೋಕ** ಬೆಂಗಳೂರು

ಭಾರತದಲ್ಲಿ ಈಗಾಗಲೇ ರಿಯಾಲ್ಟಿ ಕ್ಷೇತ್ರವು ಪರಿಸರ ಕಾಳಜಿಯನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸುತ್ತಿದೆ. ಇಂಧನ ದಕ್ಷತೆ, ನೀರಿನ ಸಂರಕ್ಷಣೆ, ಪರಿಸರಸ್ನೇಹಿ ವಸ್ತುಗಳಿಗೆ ಆದ್ಯತೆ ನೀಡುವ ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ (ಐಜಿಬಿಸಿ) ಪ್ರಮಾಣೀಕೃತ ರಚನೆಗಳು ಭಾರತದಲ್ಲಿ ಹಸಿರು ಕಟ್ಟಡಗಳ ಪ್ರಗತಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಈ ಪ್ರಯತ್ನಗಳು ಪರಿಸರದ ಮೇಲೆ ಮಾಲಿನ್ಯಗಳ ಪರಿಣಾಮಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಎಟಿ ಸಿಒಪಿ26 ಪ್ರಕಾರ, ಭಾರತವು 2070ರ ವೇಳೆಗೆ ನಿವ್ವಳ ಶೂನ್ಯ ಮಾಲಿನ್ಯ ಹೊರಸೂಸುವಿಕೆಯನ್ನು ಸಾಧಿಸಲು ಪ್ರತಿಜ್ಞೆ ಮಾಡಿದೆ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರವು ಈ ಗುರಿಯಲ್ಲಿ ಪ್ರಮುಖ ಪಾತ್ರ ವಹಿಸಿ ಹಸಿರು ಕಟ್ಟಡದ ಅಭ್ಯಾಸಗಳನ್ನು ಅಳವಡಿಸಿಕೊಳ್ಳುತ್ತಿದೆ.

ಹಸಿರು ಬಿಲ್ಡಿಂಗ್ ಉಪಕ್ರಮ: ಹಸಿರು ಕಟ್ಟಡದ ಮಾನದಂಡಗಳಾದ ಐಜಿಬಿಸಿ, ಜಿಆರ್‌ಐಎಚ್‌ಎ ಮತ್ತು ಎಲ್‌ಇಇಡಿ ಪ್ರಮಾಣೀಕರಣಗಳು ಭಾರತದ ರಿಯಾಲ್ಟಿಯಲ್ಲಿ ಹೆಚ್ಚು ಜನಪ್ರಿಯವಾಗಿವೆ. ಇವು ಜವಾಬ್ದಾರಿಯುತ ಪರಿಸರ ಅಭಿವೃದ್ಧಿಯನ್ನು ಬೆಂಬಲಿಸುತ್ತವೆ. ಈ ಪ್ರಮಾಣೀಕರಣಗಳು ಶಕ್ತಿಯ ದಕ್ಷತೆ, ನೀರಿನ ಸಂರಕ್ಷಣೆ, ಕಡಿಮೆ ಇಂಗಾಲದ ಹೆಜ್ಜೆಗುರುತುಗಳಂತಹ ಸುಸ್ಥಿರ ಕಟ್ಟಡ ತತ್ವಗಳನ್ನು ಬೆಂಬಲಿಸುತ್ತವೆ.

ಸ್ಮಾರ್ಟ್ ಸಿಟಿ: ಭಾರತದ ಸ್ಮಾರ್ಟ್ ಸಿಟಿಗಳ ಉಪಕ್ರಮವು ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸುಸ್ಥಿರ ನಗರಾಭಿವೃದ್ಧಿ ಉತ್ತೇಜಿಸುವ ಗುರಿ ಹೊಂದಿದೆ. ಇದು ನವೀಕರಿಸಬಹುದಾದ ಇಂಧನ ಮೂಲ, ಪರಿಣಾಮಕಾರಿ ನೀರು ನಿರ್ವಹಣೆ ಮತ್ತು ಪರಿಸರಸ್ನೇಹಿ ಸಾರಿಗೆ ವ್ಯವಸ್ಥೆಗಳಿಗೆ ಆದ್ಯತೆ ನೀಡುತ್ತದೆ.

ಶಕ್ತಿ ಸಮರ್ಥ ತಂತ್ರಜ್ಞಾನ: ಸೌರ ಫಲಕ, ಇನ್ಸುಲೇಟೆಡ್ ಕಿಟಕಿ, ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಂತಹ ಶಕ್ತಿ ಸಮರ್ಥ ತಂತ್ರಜ್ಞಾನಗಳು ಭಾರತದ ನಿರ್ಮಾಣ ಉದ್ಯಮದಲ್ಲಿ ಕ್ರಾಂತಿ ಮಾಡಿವೆ. ಡೆವಲಪರ್‌ಗಳು ಈ ತಂತ್ರಜ್ಞಾನಗಳನ್ನು ತಮ್ಮ ನಿರ್ಮಾಣ ಯೋಜನೆಗಳಲ್ಲಿ ಅಳವಡಿಸುವ ಮೂಲಕ ಉತ್ತಮ ಹಸಿರು ಮಾನದಂಡ ಕಾಯ್ದುಕೊಳ್ಳುತ್ತಿದ್ದಾರೆ.

ನವೀಕರಿಸಬಹುದಾದ ಇಂಧನ ಮೂಲ: ಪವನ ಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳು ರಿಯಲ್ ಎಸ್ಟೇಟ್ ನಿರ್ಮಾಣಗಳಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತವೆ. ಉದಾಹರಣೆಗೆ ಸೌರ ಶಕ್ತಿ ವ್ಯವಸ್ಥೆಗಳಿರುವ ಹಸಿರು ಕಟ್ಟಡಗಳು ಜನಪ್ರಿಯವಾಗಿದ್ದು, ಇವು ನವೀಕರಿಸಲಾಗದ ಶಕ್ತಿಯ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುತ್ತವೆ.

ಸರಕಾರ ಸಹಯೋಗ: ಹಸಿರು ಕಟ್ಟಡ ಯೋಜನೆಗಳಿಗೆ ತೆರಿಗೆ ವಿನಾಯಿತಿ ಮತ್ತು ಶಕ್ತಿ ದಕ್ಷತೆಯ ನಿಯಮಗಳು ಸೇರಿದಂತೆ ಸರಕಾರದ ವಿವಿಧ ಕಾರ್ಯಕ್ರಮಗಳು ರಿಯಲ್ ಎಸ್ಟೇಟ್ ವಲಯದ ಸುಸ್ಥಿರತೆಯನ್ನು ಬೆಂಬಲಿಸಿವೆ.

ಮನೆಯೇ ಮಿನಿ ಫಾರೆಸ್ಟ್!

ಅಮೀನಗಡದ ಸಮೀಪದ ಸೂಳೇಬಾವಿಯ ಶಿಕ್ಷಕ ಮಾಶ್ಯಾಳ ದಂಪತಿ ಮನೆ ಆವರಣದಲ್ಲಿ ಬೆಳೆದು ನಿಂತ ಗಿಡ, ಮರಗಳು.

■ **ರವಿ ಡಿ.ಎಸ್.** ಅಮೀನಗಡ (ಬಾಗಲಕೋಟೆ)
droupakkanavar@gmail.com

‘ಗಿಡ ನೆಡಿ, ಪರಿಸರ ಉಳಿಸಿ’ ಎಂದು ಮಕ್ಕಳಿಗೆ ಕೇವಲ ಪುಸ್ತಕದ ಪಾಠ ಮಾಡುವುದಕ್ಕಿಂತ, ತಾವೇ ಸ್ವತಃ ಮಾದರಿಯಾಗಿ ನಿಂತರೆ ಆ ಬೋಧನೆಗೆ ನಿಜವಾದ ಮೌಲ್ಯ ಬರುತ್ತದೆ ಎಂಬುದನ್ನು ಸಮೀಪದ ಸೂಳೇಬಾವಿ ಗ್ರಾಮದ ಶಿಕ್ಷಕ ದಂಪತಿ ಸಾಬೀತುಪಡಿಸಿದ್ದಾರೆ.

ಇಲ್ಲಿನ ಪ್ರಾಥಮಿಕ ಶಾಲೆ ಶಿಕ್ಷಕ ಚಂದ್ರಶೇಖರ ಮಾಶ್ಯಾಳ ಹಾಗೂ ಅವರ ಪತ್ನಿ, ಶಿಕ್ಷಕಿ ಶೀಲಾ ಅವರು ತಮ್ಮ ಮನೆಯ ಆವರಣವನ್ನೇ ಒಂದು ಸುಂದರ ‘ಮಿನಿ ಫಾರೆಸ್ಟ್’ (ಕಿರು ಅರಣ್ಯ) ಆಗಿ ಪರಿವರ್ತಿಸುವ ಮೂಲಕ ವಿಶಿಷ್ಟ ಪರಿಸರ ಪ್ರೀತಿ ಮೆರೆದಿದ್ದಾರೆ.

1,000 ಚದರ ಅಡಿಯಲ್ಲಿ ನಂದನವನ ನಿರ್ಮಿಸಿದ ಶಿಕ್ಷಕ ದಂಪತಿ

2018ರಲ್ಲಿ ತಮ್ಮ ಹೊಸ ಮನೆಗೆ ಗೃಹಪ್ರವೇಶ ಮಾಡಿದ ದಿನದಿಂದಲೇ ಈ ದಂಪತಿಗಳ ಹಸಿರು ಪಯಣ ಆರಂಭವಾಯಿತು. ತಮಗಿದ್ದ 1,200 ಚದರ ಅಡಿಯ ಎರಡು ಪ್ಲಾಟ್‌ಗಳ ಪೈಕಿ, ಸುಮಾರು 1,000ಕ್ಕೂ ಹೆಚ್ಚು ಚದರ ಅಡಿ ಜಾಗವನ್ನು ಕೇವಲ ಗಿಡ-ಮರಗಳಿಗಾಗಿಯೇ ಮುಡಿಪಾಗಿಟ್ಟರು. ಕಳೆದ 8 ವರ್ಷಗಳ ಇವರ ನಿರಂತರ ಪರಿಶ್ರಮದ ಫಲವಾಗಿ, ಇಂದು ಇವರ ಮನೆಯ ಆವರಣ ನೋಡುಗರು ಬೆರಗಾಗುವಂತೆ ದಟ್ಟ ಹಸಿರಿನಿಂದ ಕಂಗೊಳಿಸುತ್ತಿದೆ. ವಿಜ್ಞಾನ ಶಿಕ್ಷಕರಾಗಿರುವ ಚಂದ್ರಶೇಖರ್ ಅವರಿಗೆ ಪತ್ನಿ ಶೀಲಾ ಅವರು ಅಷ್ಟೇ ಉತ್ಸಾಹದಿಂದ ಸಾಥ್ ನೀಡಿದ್ದರಿಂದ ಈ ಹಸಿರು ಕ್ರಾಂತಿ ಸಾಧ್ಯವಾಗಿದೆ.

ಸಾಮಾನ್ಯವಾಗಿ ಮನೆಗಳ ಮುಂದೆ ಕೃತಕ ಅಲಂಕಾರಿಕ ವಸ್ತುಗಳನ್ನು ಬಳಸಲಾಗುತ್ತದೆ. ಆದರೆ, ಈ ದಂಪತಿ ಇಡೀ ವಾತಾವರಣವನ್ನು ಪ್ರಕೃತಿಮಯವಾಗಿಸಿದ್ದಾರೆ. ಇವರ ಮನೆಯ ಸುತ್ತಲೂ ಬಗೆಬಗೆಯ ಗಿಡಗಳಿರುವುದರಿಂದ ಬೇಸಿಗೆಯಲ್ಲೂ ಇಲ್ಲಿನ ವಾತಾವರಣ ಸದಾ ತಂಪಾಗಿರುತ್ತದೆ.

ಗಿಡಗಳಿಂದಲೇ ಅಲಂಕಾರ: ನಾನಾ ಜಾತಿಯ ಗಿಡ, ಮರಗಳು ಇಲ್ಲಿದ್ದು, ಇವರ ಮನೆ ಸೇರಿದಂತೆ ಸುತ್ತಲಿನ ವಾತಾವರಣದಲ್ಲೂ ತಂಪು ಇರುವಂತೆ ಮಾಡಿದೆ. ತೆಂಗು, ಅಶೋಕ ಗಿಡದಂತಹ ದೊಡ್ಡ ಮರಗಳು, ಕಾಡು ಬಸಳೆ, ದೊಡ್ಡಪತ್ರೆ, ಶಂಖಪುಷ್ಪ, ಮಂಗರವಳ್ಳಿ, ಅಲೋವೆರಾ, ಶುಗರ್‌ಲೀಫ್, ಪತ್ರೊಡೆ, ಏಲಕ್ಕಿ, ವೀಳ್ಯದೆಲೆ, ಆಯುರ್ವೇದ ಸಸ್ಯ, ನೆಲ್ಲಿಕಾಯಿ, ಮಾವು, ವಾಟರ್ ಆ್ಯಪಲ್, ಸ್ಟಾರ್ ಫ್ರೂಟ್, ಗುಲಾಬಿ, ಕನಕಾಂಬರ, ಡೇರೆ ಹೂ, ಬೋಗನವಿಲ್ಲಾ, ಕಾಕಡ ಮಲ್ಲಿಗೆ, ದುಂಡು ಮಲ್ಲಿಗೆ, ಮೈಸೂರು ಮಲ್ಲಿಗೆ, ಮಳೆಗಾಲ ಮಲ್ಲಿಗೆ, ಆರೇಳು ಬಣ್ಣದ ದಾಸವಾಳ ಹೂವಿನ ಗಿಡಗಳು ಕಣ್ಮನ ಸೆಳೆಯುತ್ತಿವೆ.

DS MAX®

ಡಿಎಸ್ ಮ್ಯಾಕ್ಸ್ ಸ್ಕೈ ಸಂಪಧ

JOY OF LIVING
www.dsmaxproperties.com

Experience 22 Floors of High-Rise Living and the Convenience of a Future Metro Stations. Property Values are about to Soar!

PRM/KA/RERA/1251/308/PR/291225/008366

DS MAX SKY SAMPADHA

ATTIBELE

2 & 3-BHK HOMES ▲ G+22 FLOORS ▼

2-BHK	3-BHK
₹63 LAKHS*	₹92 LAKHS*

Don't wait for the market to move without you. Investing today is smart; waiting until tomorrow is expensive.

#BeatPlasticPollution

WORLD ENVIRONMENT DAY JUNE 5

2, 3 & 4-BHK APARTMENTS FOR SALE IN VARIOUS LOCATIONS

RERA	Location	Landmark	Price	Phone	Floors
PRM/KA/RERA/1250/304/PR/251024/007179	WHITEFIELD	10 MINS. HOPEFARM METRO	₹72.86 L - 1.32 Cr*	8880 461 461	G+14
PRM/KA/RERA/1251/310/PR/210324/006724	SILKBOARD	NEAR SINGASANDRA METRO	₹91.27 L - 1.47 Cr*	8880 013 310	G+14
PRM/KA/RERA/1251/472/PR/250225/007524	AIRPORT ROAD	NEAR PRESTIGE TECH IT PARK	₹87.89 L - 1.21 Cr*	8880 465 465	G+14
PRM/KA/RERA/1251/310/PR/150223/005721	MYSORE ROAD	NEAR CHALLAGHATTA METRO	₹75.00 L - 1.06 Cr*	8880 461 461	G+14
PRM/KA/RERA/1251/308/PR/281125/008287	JIGANI	5 MINS. APC CIRCLE	₹60.78 - 95.35 Lakhs*	8880 003 003	G+14
PRM/KA/RERA/1251/310/PR/151223/006489	BANASHANKARI	OPP. NPS SCHOOL	₹1.45 - 2.17 Cr* (3 & 4-BHK)	8880 461 461	G+3
PRM/KA/RERA/1250/301/PR/251024/007178	YELAHANKA	5 MINS. RAJANUKUNTE	₹56.25 - 97.21 Lakhs*	8880 465 465	G+14
PRM/KA/RERA/1251/446/PR/190301/002464	WHITEFIELD	5 MINS. KADUGODI METRO	₹78.40 - 86.88 Lakhs*	8880 461 461	G+4
PRM/KA/RERA/1251/308/PR/230126/008427	SARJAPURA	SARJAPUR - ATTIBELE ROAD	₹60.01 - 83.25 Lakhs*	8880 003 003	G+4
PRM/KA/RERA/1251/310/PR/050526/008622	MAGADI ROAD	10 MINS. NICE ROAD TOLL	₹92.49 L - 1.23 Cr*	8880 465 465	G+14
PRM/KA/RERA/1251/308/PR/160824/006972	HOSA ROAD	NEAR ELECTRONIC CITY	₹80.01 L - 1.44 Cr*	8880 013 310	G+4
PRM/KA/RERA/1251/308/PR/160824/006973	BANNERGHATTA RD.	NEAR KOPPA GATE	₹59.86 - 85.23 Lakhs*	8880 013 310	G+14

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in *T & C Apply

CREDAI

ಎರಡು ಕಾಯಿದೆಯಿಂದ ಗೊಂದಲ | ಕರ್ನಾಟಕ ಅಪಾರ್ಟ್‌ಮೆಂಟ್ ವಿಧೇಯಕ 2025 ಮಂಡನೆ ನಿರೀಕ್ಷೆ

ಅಪಾರ್ಟ್‌ಮೆಂಟ್ ವಾಸಿಗಳ ಬೇಡಿಕೆ ಈಡೇರುವುದೇ?

■ ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ನೂತನ ಮುಖ್ಯಮಂತ್ರಿಯಾಗುತ್ತಿದ್ದಂತೆ ಬಿರುಸಿನ ಚಟುವಟಿಕೆ ಆರಂಭಿಸಿರುವ ಡಿ.ಕೆ. ಶಿವಕುಮಾರ್, ದೀರ್ಘ ಕಾಲದಿಂದ ನನೆಗುದಿಗೆ ಬಿದ್ದಿರುವ ಹೊಸ ಅಪಾರ್ಟ್‌ಮೆಂಟ್ ಕಾಯಿದೆಯನ್ನು ಜಾರಿಗೊಳಿಸುತ್ತಾರೆ ಎಂಬ ಭರವಸೆ ಅಪಾರ್ಟ್‌ಮೆಂಟ್ ನಿವಾಸಿಗಳಲ್ಲಿ ಮನೆ ಮಾಡಿದೆ.

ರಾಜ್ಯದಲ್ಲಿ ಜಾರಿಯಲ್ಲಿರುವ ಎರಡು ಅಪಾರ್ಟ್‌ಮೆಂಟ್ ಕಾನೂನುಗಳ ಗೊಂದಲಗಳಿಂದ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಈವರೆಗೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಅಪಾರ್ಟ್‌ಮೆಂಟ್‌ಗಳನ್ನು ನಿಯಂತ್ರಿಸಲು ಪ್ರಸ್ತುತ 'ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆ-1972' ಮತ್ತು 'ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ-1960'ನಂತಹ ಎರಡು ವಿಭಿನ್ನ ಕಾನೂನುಗಳು ಜಾರಿಯಲ್ಲಿವೆ. ಆದರೀಗ ಡಿ.ಕೆ. ಶಿವಕುಮಾರ್ ಸಿಎಂ ಆಗಿದ್ದರಿಂದ ಮುಂಬರುವ ಶಾಸನಸಭೆಯಲ್ಲಿ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ-2025 ಮಂಡನೆಯಾಗಲಿದೆ ಎಂಬ ಭರವಸೆ ಮೂಡಿದೆ.

ಪ್ರಸ್ತುತ ಜಾರಿಯಲ್ಲಿರುವ ಕಾಯಿದೆಗಳು ಮತ್ತು ನಿಬಂಧನೆಗಳಲ್ಲಿ ಸ್ಪಷ್ಟತೆ ಇಲ್ಲ. ಇದರಿಂದ ಅಸೋಸಿಯೇಷನ್ ನೋಂದಣಿಯಲ್ಲಿ ಗೊಂದಲ ಮತ್ತು ವಿಳಂಬ ಉಂಟಾಗುತ್ತಿದೆ. ಆದ್ದರಿಂದ ಕರ್ನಾಟಕ ಅಪಾರ್ಟ್‌ಮೆಂಟ್ (ಮಾಲೀಕತ್ವ ಮತ್ತು ನಿರ್ವಹಣೆ) ವಿಧೇಯಕ-2025 ರಾಜ್ಯದ ಅಪಾರ್ಟ್‌ಮೆಂಟ್ ಸಮುದಾಯಗಳಿಗೆ ಪ್ರಮುಖ ಶಾಸನವಾಗಲಿದೆ. ರಾಜ್ಯ ಸರಕಾರ ಪದೇಪದೆ ಭರವಸೆ ನೀಡಿದ ನಂತರವೂ ಉದ್ದೇಶಿತ ಕಾನೂನನ್ನು ದೀರ್ಘಕಾಲದಿಂದ ಬಾಕಿ ಉಳಿಸಿಕೊಂಡಿದೆ. ಈ ಕಾನೂನು ಜಾರಿಯಾದರೆ ಲಕ್ಷಾಂತರ ಅಪಾರ್ಟ್‌ಮೆಂಟ್ ಮಾಲೀಕರು ಮತ್ತು ಮನೆ ಖರೀದಿದಾರರ ಸಮಸ್ಯೆಗಳಿಗೆ ಪರಿಹಾರ ದೊರಕಲಿದೆ. ಈಗ ಸಿಎಂ ಆಗಿರುವ ಡಿ.ಕೆ. ಶಿವಕುಮಾರ್ ಅವರು ಅದನ್ನು ಜಾರಿಗೊಳಿಸುವ ಭರವಸೆ ಇದೆ ಎಂದು ಬೆಂಗಳೂರು ಅಪಾರ್ಟ್‌ಮೆಂಟ್ಸ್ ಫೆಡರೇಷನ್ ಅಧ್ಯಕ್ಷ ಸತೀಶ್ ಮಲ್ಯ ಮಾಹಿತಿ ನೀಡಿದರು.

ಉದ್ದೇಶಿತ ಕಾನೂನಿನ ಕುರಿತು ಡಿಸೆಂಬರ್‌ನಲ್ಲಿ ನಡೆದಿದ್ದ ಚರ್ಚೆ ನಂತರ ಮತ್ತೆ ಯಾವುದೇ ಸಭೆ ನಡೆದಿಲ್ಲ. ಯಾವ ಪ್ರಗತಿಯೂ ಆಗಿಲ್ಲ. ರಾಜ್ಯ ಸರಕಾರ ಈ ಕಾನೂನು ಜಾರಿಗೊಳಿಸಲು ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳುವುದಾದರೆ, ಹಾಲಿ ಇರುವ ಕಾನೂನಿನಡಿ ಅಪಾರ್ಟ್‌ಮೆಂಟ್ ಮಾಲೀಕರಿಗೆ ಸೂಕ್ತ ವ್ಯವಸ್ಥೆ ಮತ್ತು ತಕ್ಷಣದ ಪರಿಹಾರ ಒದಗಿಸಬೇಕು. ಇಲ್ಲದಿದ್ದರೆ, ಡಿ.ಕೆ. ಶಿವಕುಮಾರ್ ತಾವು ನೀಡಿದ ಭರವಸೆಯಂತೆ ಮುಂಬರುವ ಅಧಿವೇಶನದಲ್ಲಿ ಹೊಸ ವಿಧೇಯಕಕ್ಕೆ ಅನುಮೋದನೆ ಪಡೆದು, ಜಾರಿಗೊಳಿಸಬೇಕು ಎಂದು ಬೆಂಗಳೂರು ಸಿಟಿ ಫ್ಲ್ಯಾಟ್ ಓನರ್ಸ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಅನಿಲ್ ಒತ್ತಾಯಿಸಿದರು.

ಕಾಂಗ್ರೆಸ್ ಭರವಸೆ

ಕಳೆದ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ಈ ವಿಧೇಯಕವನ್ನು ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ಆದರೆ, ಸರಕಾರ ರಚನೆಯಾಗಿ ಮೂರು ವರ್ಷಗಳಾದರೂ ಇನ್ನೂ ಜಾರಿಗೊಳಿಸಿಲ್ಲ. ಇದು ಅನುಮಾನಕ್ಕೆ ಕಾರಣವಾಗಿದೆ. ಬೆಂಗಳೂರಿನಲ್ಲಿ 10 ಸಾವಿರಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳಿವೆ. ಇದರಲ್ಲಿ ಕೆಲವನ್ನು ಹೊರತುಪಡಿಸಿ ಉಳಿದೆಲ್ಲ ಅಪಾರ್ಟ್‌ಮೆಂಟ್‌ಗಳು ವಿವಿಧ ಕಾನೂನುಗಳಡಿ ಸರಿಯಾಗಿ ನೋಂದಣಿ ಆಗಿಲ್ಲ. ಅಸ್ತಿತ್ವದಲ್ಲಿರುವ ಸಹಕಾರ ಸಂಘಗಳು, ಕಂಪನಿಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ನೋಂದಾಯಿಸಲ್ಪಟ್ಟಿವೆ. ಬಹುತೇಕ ಸಂಘಗಳು ನೋಂದಣಿಯಾಗದೆ ಹಾಗೇ ಉಳಿದಿವೆ. ಇದು ಅಪಾರ್ಟ್‌ಮೆಂಟ್ ನಿವಾಸಿಗಳ ಸಂಕಷ್ಟಕ್ಕೆ ಕಾರಣವಾಗಿದೆ.

ಸಂಘ ರಚನೆಗೆ ತೊಡಕು

ನಗರದಲ್ಲಿ ಹಲವು ಯೋಜನೆಗಳು ಹಸ್ತಾಂತರದ ಹಂತ ತಲುಪಿವೆ. ಈಗಾಗಲೇ ಹಸ್ತಾಂತರವಾದ ಹಲವು ಅಪಾರ್ಟ್‌ಮೆಂಟ್‌ಗಳಲ್ಲಿ ನಿವಾಸಿಗಳು ಅಸೋಸಿಯೇಷನ್‌ಗಳನ್ನು ರಚಿಸಲು, ಸಾಮಾನ್ಯ ಪ್ರದೇಶಗಳನ್ನು ನಿರ್ವಹಿಸಲು, ನಿರ್ವಹಣೆ ಶುಲ್ಕ ಸಂಗ್ರಹಿಸಲು ಮತ್ತು ಸಾಮೂಹಿಕ ನಿರ್ಧಾರ ಕೈಗೊಳ್ಳಲು ಆಗದ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಒಂದು ಸ್ಪಷ್ಟ ಮತ್ತು ಸಮಗ್ರ ಕಾಯಿದೆ ಅವಶ್ಯಕತೆಯಿದೆ. ಈಗಾಗಲೇ ಪ್ರಸ್ತಾಪಿಸಿರುವ ವಿಧೇಯಕವನ್ನು ಜಾರಿಗೊಳಿಸುವ ಮೂಲಕ ಅಪಾರ್ಟ್‌ಮೆಂಟ್ ಸಮುದಾಯಗಳ ಸುಗಮ ನಿರ್ವಹಣೆಗೆ ದಾರಿ ಮಾಡಿಕೊಡಬೇಕು. ಅದನ್ನು ನೂತನ ಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಡಲಿದ್ದಾರೆ ಎಂದು ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳು ಭರವಸೆ ವ್ಯಕ್ತಪಡಿಸಿವೆ.

ಡಾ.ರಾಜ್ ಒಂದು ಅಭಿನಯ ಗ್ರಂಥ: ನಟಿ ಉಮಾಶ್ರೀ

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಡಾ.ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ' ಮಾಡಲಾಯಿತು.

■ ವಿಕ ಸುದ್ದಿಲೋಕ ಬೆಂಗಳೂರು

ಡಾ.ರಾಜ್‌ಕುಮಾರ್ ಅವರೇ ಒಂದು ಅಭಿನಯ ಗ್ರಂಥ. ಘನ ವ್ಯಕ್ತಿತ್ವದಿಂದ ಅವರು ಸರ್ವಕಾಲಕ್ಕೆ ಮಾದರಿ ಎಂದು ನಟಿ, ವಿಧಾನ ಪರಿಷತ್ ಸದಸ್ಯೆ ಡಾ. ಉಮಾಶ್ರೀ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತ್ಯುತ್ಸವ ಪ್ರಯುಕ್ತ 'ಡಾ.ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ಮೇರುನಟ ರಾಜ್‌ಕುಮಾರ್ ವೈವಿಧ್ಯಮಯ ಪಾತ್ರ ನಿಭಾಯಿಸಿದ್ದಾರೆ. ಬಾಲಿವುಡ್ ಚಿತ್ರರಂಗದಲ್ಲೂ ಡಾ.ರಾಜ್ ಅವರಷ್ಟು ವಿಭಿನ್ನ ಪಾತ್ರ ಮಾಡಿದವರು ಇಲ್ಲ. ದಕ್ಷಿಣ ಭಾರತದ ಕೆಲ ಕಲಾವಿದರು ಭಿನ್ನ ರೀತಿಯ ಪಾತ್ರಗಳನ್ನು ಮಾಡಿದ್ದರೂ ರಾಜಕುಮಾರ್ ಅವರ ತೂಕ ಬೇರೆ ಪ್ರಮಾಣದ್ದು," ಎಂದರು.

"ಗಳಿಸಿದ್ದ ಕೀರ್ತಿ, ಸಂಪತ್ತಿನಿಂದ ರಾಜ್‌ಕುಮಾರ್ ಮನಸ್ಸು ಮಾಡಿದ್ದರೆ ಏನೇನೋ ಆಗಬಹುದಿತ್ತು. ಆದರೆ, ಅವರು ಎಂದೂ ಜನಪ್ರೀತಿಯನ್ನು ಬಿಟ್ಟು ದುಡ್ಡನ್ನು ಬಯಸಲಿಲ್ಲ. ಮಡದಿ ಡಾ. ಪಾರ್ವತಮ್ಮ ಸಿನಿಮಾ ಪ್ರೊಡಕ್ಷನ್ ಆರಂಭಿಸಿದ ಬಳಿಕವಷ್ಟೆ ಅವರು ಹಣ ನೋಡುವಂತಾಯಿತು. ಇಲ್ಲದಿದ್ದರೆ ಅದು ಕೂಡ ಸಾಧ್ಯವಾಗುತ್ತಿರಲಿಲ್ಲ," ಎಂದು ಹೇಳಿದರು.

ಕಸಾಪ ಆಡಳಿತಾಧಿಕಾರಿ ಕೆ.ಎ. ದಯಾನಂದ ಮಾತನಾಡಿ, "ಮೀಸಲಾತಿ ಸಂಬಂಧ ವರದಿ ಪಡೆದು ಅನುಷ್ಠಾನಕ್ಕೆ ತಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜಪ್ರಭುತ್ವದಡಿ ಪ್ರಜಾಪ್ರಭುತ್ವದ ಆಡಳಿತ ನೀಡಿದ್ದ ಭಾರತದ ಏಕೈಕ ಅರಸರು. ಅವರ ಕೊಡುಗೆಯನ್ನು ರಾಜ್ಯ ಎಂದೂ ಮರೆಯಲಾರದು. ಅಂತೆಯೇ, ಡಾ. ರಾಜ್ ತಮ್ಮ ನಟನೆಯಿಂದಲೇ ಸಮಾಜವನ್ನು ತಿದ್ದಿದರು," ಎಂದರು.

ಮಹಾರಾಣಿ ಕ್ಲಸ್ಟರ್ ಕಾಲೇಜಿನ ಪ್ರಭಾರ ಕುಲಪತಿ ಕೆ.ವೈ.ನಾರಾಯಣಸ್ವಾಮಿ, ಡಾ. ರಾಜಕುಮಾರ್ ಪುತ್ರಿ ಲಕ್ಷ್ಮಿ, ಅವರ ಪತಿ ಗೋವಿಂದರಾಜು, ಹಿರಿಯ ನಿರ್ಮಾಪಕ ಎಸ್.ಎ. ಚಿನ್ನೇಗೌಡ ಉಪಸ್ಥಿತರಿದ್ದರು.

ಪ್ರಶಸ್ತಿ ಪ್ರದಾನ

ಹಿರಿಯ ನಟ ಹೊನ್ನವಳ್ಳಿ ಕೃಷ್ಣ ಹಾಗೂ ರಂಗಭೂಮಿ ಕಲಾವಿದೆ ಡಾ.ಸುಮತಿಶ್ರೀ ನವಲಿ ಅವರಿಗೆ ಡಾ.ರಾಜಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಸ್ಸೆಸ್ಸೆಲ್ಸಿ ಕನ್ನಡ ಭಾಷೆ ವಿಷಯ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ 'ಮಹಾಲಕ್ಷ್ಮಿ ಟಿ.ಕೃಷ್ಣರಾಜು ಸವಿನೆನಪಿನ ಪ್ರಶಸ್ತಿ' ವಿತರಿಸಲಾಯಿತು.

ವಿದ್ಯಾರ್ಥಿನಿ ಎಳೆದೊಯ್ದು ಅತ್ಯಾಚಾರ ಯತ್ನ: ಬಂಧನ

■ ವಿಕ ಸುದ್ದಿಲೋಕ ಬೆಂಗಳೂರು

ಪಿಜಿಗೆ ನಡೆದು ಹೋಗುತ್ತಿದ್ದ ಕಾಲೇಜು ವಿದ್ಯಾರ್ಥಿನಿಯನ್ನು ಎಳೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ ಆಘಾತಕಾರಿ ಘಟನೆ ವೈಟ್‌ಫೀಲ್ಡ್ ವ್ಯಾಪ್ತಿಯಲ್ಲಿ ನಡೆದಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದ ಸೈಫಲ್ ಮಂಡಲ್ (25) ಬಂಧಿತ.

ಕೇರಳ ಮೂಲದ 23 ವರ್ಷದ ವಿದ್ಯಾರ್ಥಿನಿಯು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದು, ವೈಟ್‌ಫೀಲ್ಡ್ ವ್ಯಾಪ್ತಿಯ ಕಾಲೇಜು ಸಮೀಪದ ಪಿಜಿಯಲ್ಲಿ ವಾಸವಿದ್ದರು. ಜೂ. 2ರಂದು ಬೆಳಗಿನ ಜಾವ ಸ್ನೇಹಿತೆಯರ ಕೊಠಡಿಯಿಂದ ಹತ್ತಿರದಲ್ಲಿದ್ದ ಪಿಜಿಗೆ ನಡೆದು ಹೋಗುತ್ತಿದ್ದ ಸಂತ್ರಸ್ತೆಯನ್ನು ದುಷ್ಕರ್ಮಿ ಸೈಫಲ್ ಹಿಂಬಾಲಿಸಿದ್ದ.

ಪಿಜಿ ಗೇಟ್‌ಗೆ ಬರುತ್ತಿದ್ದಂತೆ ಸಂತ್ರಸ್ತೆಯನ್ನು ಬಲವಂತವಾಗಿ ರಸ್ತೆ ಸಮೀಪ ಕರೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ. ಇದರಿಂದ ಕಂಗಾಲಾದ ಸಂತ್ರಸ್ತೆಯು ಸಹಾಯಕ್ಕೆ ಕಿರುಚಿದಾಗ ಸ್ಥಳೀಯರು ನೆರವಿಗೆ ಧಾವಿಸಿದ್ದರು. ಈ ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದ ಸೈಫಲ್‌ನನ್ನು ಸ್ಥಳೀಯರು ಹಿಡಿದು 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು. ಘಟನಾ ಸ್ಥಳಕ್ಕೆ ತಕ್ಷಣ ಪೊಲೀಸರು ತೆರಳಿ ಆರೋಪಿಯನ್ನು ವಶಕ್ಕೆ ಪಡೆದಿದ್ದರು.

ಅನಂತರ ಸಂತ್ರಸ್ತೆಯು ನೀಡಿದ ದೂರಿನನ್ವಯ ಅತ್ಯಾಚಾರ ಯತ್ನ ಪ್ರಕರಣ ದಾಖಲಿಸಿ ಆರೋಪಿ ಸೈಫಲ್‌ನನ್ನು ಬಂಧಿಸಿ ಜೈಲಿಗೆ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉದ್ಯೋಗ ಅರಸಿ ನಗರಕ್ಕೆ ಆಗಮಿಸಿದ್ದ ಆರೋಪಿ ಸೈಫಲ್ ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದ. ವೈಟ್‌ಫೀಲ್ಡ್ ಸಮೀಪ ಜೋಪಡಿಗಳಲ್ಲಿ ವಾಸವಿದ್ದ. ಆರೋಪಿಯ ಹಿನ್ನೆಲೆ ಹಾಗೂ ಕೃತ್ಯದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದ್ದಾರೆ.

ಕ್ರಿಮಿನಲ್ ಮೊಕದ್ದಮೆ ಹೂಡಲು ವಿವೇಚನೆ ಬಳಸಿ

■ ವಿಕ ಸುದ್ದಿಲೋಕ ಬೆಂಗಳೂರು

ಕಾರ್ಮಿಕ ಕಾಯಿದೆ ಉಲ್ಲಂಘನೆ ಆರೋಪದ ಮೇರೆಗೆ ಕಂಪನಿಯೊಂದರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿ ನೀಡುವುದಕ್ಕೂ ಮುನ್ನ ಅದಕ್ಕೆ ಸೂಕ್ತ ಕಾರಣಗಳನ್ನು ಸರಕಾರ ನೀಡಬೇಕು ಮತ್ತು ಸ್ವತಂತ್ರ ವಿವೇಚನೆ ಬಳಸಬೇಕು ಎಂದು ಹೈಕೋರ್ಟ್ ಆದೇಶ ನೀಡಿದೆ.

ಅಲ್ಲದೆ, ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಕಾರ್ಮಿಕರನ್ನು ಕೆಲಸದಿಂದ ತಾತ್ಕಾಲಿಕವಾಗಿ ವಜಾ ಮಾಡಿದ್ದ ಆರೋಪದ ಮೇರೆಗೆ ಕೈಗಾರಿಕಾ ವಿವಾದಗಳ ಕಾಯಿದೆಯಡಿ ಕಂಪನಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿ ನೀಡಿ ರಾಜ್ಯ ಸರಕಾರ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ.

ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ನೀಡಿದ್ದ ಕ್ರಮ ಪ್ರಶ್ನಿಸಿ ಪೀಣ್ಯ ಕೈಗಾರಿಕಾ ಪ್ರದೇಶದ ಇಂಟರ್ ನ್ಯಾಷನಲ್ ಟ್ರಿಮ್ಮಿಂಗ್ಸ್ ಆ್ಯಂಡ್ ಲೇಬಲ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗಡೆ ಅವರಿದ್ದ ಏಕಸದಸ್ಯ ಪೀಠ, ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, "ಕೇವಲ ದೂರು ಅಥವಾ ಕಾರ್ಮಿಕ ಇಲಾಖೆಯ ವರದಿ ಯಾಂತ್ರಿಕವಾಗಿ ಒಪ್ಪಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಾರದು. ಸರಕಾರವು ತನ್ನ ಸ್ವತಂತ್ರ ವಿವೇಚನೆ ಬಳಸಿ ನಿರ್ಧಾರ ಕೈಗೊಳ್ಳಬೇಕು. ಯಾವುದೇ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಕ್ರಮಕ್ಕೆ ಅನುಮತಿ ನೀಡುವಾಗ ಅಥವಾ ನಿರಾಕರಿಸುವಾಗ ಅದಕ್ಕೆ ಸೂಕ್ತ ಕಾರಣಗಳನ್ನು ಆದೇಶದಲ್ಲಿ ಕಡ್ಡಾಯವಾಗಿ ದಾಖಲಿಸಬೇಕು," ಎಂದು ಹೇಳಿದೆ.

"ಹಾಲಿ ಪ್ರಕರಣದಲ್ಲಿ ಕೋವಿಡ್ ಸಾಂಕ್ರಾಮಿಕವನ್ನು 'ನೈಸರ್ಗಿಕ ವಿಕೋಪ' ಎಂದು ಪರಿಗಣಿಸಿ ಸಿಬ್ಬಂದಿಯನ್ನು ತೆಗೆದುಹಾಕಲಾಗಿತ್ತೇ ಎಂಬ ಅಂಶ ಮುಖ್ಯ. ವಿವಾದವು ಈಗಾಗಲೇ ಕಾರ್ಮಿಕ ನ್ಯಾಯಾಲಯದ ಪರಿಶೀಲನೆಯಲ್ಲಿದೆ. ಹೀಗಿರುವಾಗ, ಸರಕಾರವು ಯಾವುದೇ ಸ್ವತಂತ್ರ ಕಾರಣಗಳನ್ನು ನೀಡದೆ ಯಾಂತ್ರಿಕವಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಕಾನೂನುಬಾಹಿರ," ಎಂದು ನ್ಯಾಯಪೀಠ ಆದೇಶಿಸಿದೆ.

ಈ ನಡುವೆ, ಸರಕಾರದ ಆದೇಶವನ್ನು ರದ್ದುಗೊಳಿಸಿರುವ ಪೀಠ, ಮುಂದಿನ ಮೂರು ತಿಂಗಳ ಒಳಗಾಗಿ ನಿಯಮಾನುಸಾರ ಹೊಸದಾಗಿ ಅರ್ಜಿ ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಬಹುದಾಗಿದೆ ಎಂದು ಹೇಳಿದೆ.

ಯಾಂತ್ರಿಕವಾಗಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕಾನೂನುಬಾಹಿರ

ಏನು ಪ್ರಕರಣ?

ಲಾಕ್ ಡೌನ್ ಸಂದರ್ಭದಲ್ಲಿ ಅಂದರೆ 2020ರ ಮೇ ತಿಂಗಳಲ್ಲಿ ಅರ್ಜಿದಾರ ಕಂಪನಿಯು ತನ್ನ 112 ಕಾರ್ಮಿಕರ ಪೈಕಿ 61 ಸಿಬ್ಬಂದಿಯನ್ನು ವಜಾಗೊಳಿಸಿತ್ತು. ಅದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಯು ಕಾರ್ಮಿಕ ಆಯುಕ್ತರಿಗೆ ದೂರು ನೀಡಿತ್ತು. ಕಾರ್ಮಿಕ ಇಲಾಖೆಯ ವರದಿ ಆಧರಿಸಿ, ಕೈಗಾರಿಕಾ ವಿವಾದಗಳ ಕಾಯಿದೆ- 1947ರ ಸೆಕ್ಷನ್ 34ರಡಿ ಕಂಪನಿಯ ವಿರುದ್ಧ ಕಾನೂನು ಕ್ರಮ ಜರುಗಿಸಲು 2020ರ ಡಿ.7ರಂದು ರಾಜ್ಯ ಸರಕಾರ ಅನುಮತಿ ನೀಡಿತ್ತು. ಅದನ್ನು ಪ್ರಶ್ನಿಸಿ ಕಂಪನಿಯು ಹೈಕೋರ್ಟ್ ಮೆಟ್ಟಿಲೇರಿತ್ತು.

ಆಟೋಮೊಬೈಲ್ ಡೀಲರ್ ಕೊಲೆ

ಬೆಂಗಳೂರು: ಆಟೋಮೊಬೈಲ್ ವಸ್ತುಗಳ ಡೀಲರ್‌ವೊಬ್ಬರನ್ನು ನಡುರಸ್ತೆಯಲ್ಲಿಯೇ ಅಡ್ಡಗಟ್ಟಿ ಚಾಕುವಿನಿಂದ ಕೊಲೆಗೈದಿದ್ದ ಆರೋಪಿಯನ್ನು ಜಗಜೀವನರಾಂ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೇವರಾಜ್ ಅರಸು ನಗರ ನಿವಾಸಿ ಉಮರ್ ಖಲೀದ್ (38) ಬಂಧಿತ.

ಆರೋಪಿ ಖಲೀದ್ ಬುಧವಾರ ಬೆಳಗಿನ ಜಾವ ಅಕ್ರಂಪಾಷಾ (45) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆಗೈದಿದ್ದ. ತನ್ನ ಪತ್ನಿ ಜತೆ ಅಕ್ರಮ ಸಂಬಂಧ ಹೊಂದಿದ್ದಕ್ಕೆ ಸಿಟ್ಟಾಗಿ ಅಕ್ರಂಪಾಷಾರನ್ನು ಖಲೀದ್ ಕೊಲೆಗೈದಿದ್ದ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾದು ಕೊಂದ: ತನ್ನ ಪತ್ನಿ ಜತೆ ಅಕ್ರಂ ಕೆಲ ವರ್ಷಗಳಿಂದ ಅಕ್ರಮ ಸಂಬಂಧ ಹೊಂದಿರುವುದು ಗೊತ್ತಾದ ಬಳಿಕ ಖಲೀದ್ ದ್ವೇಷ ಸಾಧಿಸುತ್ತಿದ್ದ. ಕೆಲವು ಬಾರಿ ಇಬ್ಬರ ನಡುವೆ ಸಣ್ಣಪುಟ್ಟ ಜಗಳವೂ ಆಗಿತ್ತು. ಮಂಗಳವಾರ ರಾತ್ರಿ ಸಂಬಂಧಿಕರ ಮನೆಯ ಕಾರ್ಯಕ್ರಮಕ್ಕೆ ತೆರಳಿದ್ದ ಅಕ್ರಂ, ಬೈಕ್‌ನಲ್ಲಿ ಒಬ್ಬಂಟಿಯಾಗಿ ಬುಧವಾರ ಮುಂಜಾನೆ ವಾಪಸ್ಸಾಗುತ್ತಿದ್ದರು. ಟಿಪ್ಪು ಚೌಕ್ ಬಳಿ ಬರುತ್ತಿದ್ದಂತೆ ಅಕ್ರಂ ಬೈಕ್ ಅಡ್ಡಗಟ್ಟಿದ್ದ ಖಲೀದ್, ತನ್ನ ಪತ್ನಿ ಜತೆಗಿನ ಸಂಬಂಧ ತ್ಯಜಿಸುವಂತೆ ಜಗಳ ಆರಂಭಿಸಿದ್ದ.

ಇಬ್ಬರ ನಡುವೆ ಜಗಳ ತಾರಕಕ್ಕೇರಿ ಖಲೀದ್ ತನ್ನ ಬಳಿಯಿದ್ದ ಚಾಕುವಿನಿಂದ ಅಕ್ರಂ ಎದೆ, ಹೊಟ್ಟೆ ಸೇರಿ ದೇಹದ ಹಲವು ಭಾಗಗಳಿಗೆ ಏಳೆಂಟು ಬಾರಿ ಇರಿದು ಪರಾರಿಯಾಗಿದ್ದ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅಕ್ರಂ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಲು ಪ್ರಯತ್ನಿಸಿದರೂ ಮಾರ್ಗಮಧ್ಯೆಯೇ ಸಾವನ್ನಪ್ಪಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಡ್ರಾಪ್ ನೆಪದಲ್ಲಿ ಕ್ಯಾಬ್ ಚಾಲಕನ ಅಪಹರಿಸಿ ಸುಲಿಗೆ

ಬೆಂಗಳೂರು: ಡ್ರಾಪ್ ನೆಪದಲ್ಲಿ ಕ್ಯಾಬ್ ಚಾಲಕನನ್ನು ಅಪಹರಿಸಿದ ದುಷ್ಕರ್ಮಿಗಳು ಸುಲಿಗೆ ಮಾಡಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಅದೃಷ್ಟವಶಾತ್ ದುಷ್ಕರ್ಮಿಗಳಿಂದ ತಪ್ಪಿಸಿಕೊಂಡ ಕ್ಯಾಬ್ ಚಾಲಕ ಮನು ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿರುವ ಪೊಲೀಸರು, ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕಿತ್ತಗಾನವಳ್ಳಿಯ ಮನು ತಮ್ಮ ಕ್ಯಾಬ್‌ನಲ್ಲಿ ಕೋನಪ್ಪನ ಅಗ್ರಹಾರದಲ್ಲಿರುವ ಖಾಸಗಿ ಕಂಪನಿಯೊಂದರ ಉದ್ಯೋಗಿಗಳನ್ನು ಡ್ರಾಪ್ ಮತ್ತು ಪಿಕಪ್ ಮಾಡುತ್ತಿದ್ದರು. ಜೂ.2ರಂದು ರಾತ್ರಿ ಮಹಿಳಾ ಉದ್ಯೋಗಿಯನ್ನು ಕೆ.ಆರ್.ಪುರದಲ್ಲಿ ಡ್ರಾಪ್ ಮಾಡಿ ಕಂಪನಿಯ ಭದ್ರತಾ ಸಿಬ್ಬಂದಿ ಜತೆ ವಾಪಸ್ಸಾಗುವಾಗ ಎಚ್‌ಪಿ ಗೇಟ್ ಬಳಿ ಟೀ ಕುಡಿಯಲು ಕ್ಯಾಬ್ ನಿಲ್ಲಿಸಿದ್ದರು. ಈ ವೇಳೆ ನಾಲ್ವರು ಅಪರಿಚಿತರು ಏಕಾಏಕಿ ಕಾರು ಹತ್ತಿಕೊಂಡು ತುರ್ತಾಗಿ ಎಲೆಕ್ಟ್ರಾನಿಕ್ ಸಿಟಿಗೆ ಡ್ರಾಪ್ ಕೊಡುವಂತೆ ಒತ್ತಾಯಿಸಿದ್ದರು. ಹೀಗಾಗಿ, ಭದ್ರತಾ ಸಿಬ್ಬಂದಿಯನ್ನು ಅಲ್ಲಿಯೇ ಬಿಟ್ಟು ಮನು, ಅಲ್ಲಿಂದ ಡ್ರಾಪ್ ಮಾಡಲು ತೆರಳಿದ್ದರು.

ಕಾರು ದೊಡ್ಡತೋಗೂರಿನ ಸಮೀಪ ತೆರಳುತ್ತಿದ್ದಂತೆ ದುಷ್ಕರ್ಮಿಗಳು ಬೆದರಿಸಿ ಮನು ಬಳಿಯಿದ್ದ ಎರಡು ಮೊಬೈಲ್ ಕಸಿದಿದ್ದರು. ಅಲ್ಲದೆ, ಬಲವಂತವಾಗಿ ಫೋನ್ ಪೇ ಪಾಸ್‌ವರ್ಡ್ ಪಡೆದಿದ್ದರು. ಜೀವ ಭಯದಲ್ಲಿ ಕಾರು ಚಾಲನೆ ಮಾಡುತ್ತಿದ್ದ ಮನು ಅವರಿಗೆ ಮಾರಗೊಂಡನಹಳ್ಳಿ ಬಳಿ ಕಾರು ನಿಲ್ಲಿಸುವಂತೆ ಸೂಚಿಸಿದ್ದರು. ಕಾರು ನಿಲ್ಲಿಸಿದ ಮನು ಏಕಾಏಕಿ ಕಾರಿನಿಂದ ಜಿಗಿದು ಓಡತೊಡಗಿದ್ದರು. ಇತ್ತ ದುಷ್ಕರ್ಮಿಗಳು ಕಾರಿನ ಸಮೇತ ಅಲ್ಲಿಂದ ಪರಾರಿಯಾಗಿದ್ದರು.

ನೆರವಾದ ಜಿಪಿಎಸ್

ಕಗ್ಗತ್ತಲಲ್ಲಿ ದುಷ್ಕರ್ಮಿಗಳಿಂದ ಬಚಾವಾಗಿದ್ದ ಮನು, ರಸ್ತೆ ಬದಿಯಿದ್ದ ಅಪಾರ್ಟ್‌ಮೆಂಟ್‌ನ ಭದ್ರತಾ ಸಿಬ್ಬಂದಿ ಬಳಿ ಮೊಬೈಲ್ ಪಡೆದು ಕಂಪನಿಗೆ ಕರೆ ಮಾಡಿ ವಿಷಯ ತಿಳಿಸಿದ್ದ. ಇದೇ ಸಮಯಕ್ಕೆ ಎಚ್‌ಪಿ ಗೇಟ್ ಬಳಿಯೇ ಉಳಿದಿದ್ದ ಭದ್ರತಾ ಸಿಬ್ಬಂದಿಯ ಮಾಹಿತಿಯಿಂದ ಪೊಲೀಸರಿಗೆ ವಿಚಾರ ಗೊತ್ತಾಗಿತ್ತು. ಹೀಗಾಗಿ, ಕ್ಯಾಬ್‌ಗೆ ಅಳವಡಿಸಿದ್ದ ಜಿಪಿಎಸ್ ಸುಳಿವಿನ ಮೇರೆಗೆ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿ ನಿಲ್ಲಿಸಿದ್ದ ಕ್ಯಾಬ್ ಪತ್ತೆ ಮಾಡಿ ಅಲ್ಲಿಗೆ ತೆರಳಿದ್ದರು. ಪೊಲೀಸರನ್ನು ಕಂಡ ಕೂಡಲೇ ದುಷ್ಕರ್ಮಿಗಳು ಕ್ಯಾಬ್ ಬಿಟ್ಟು ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

HMT LIMITED
AUXILIARY BUSINESS DIVISION
JALAHALLI, BANGALORE - 560 013.
NOTICE INVITING TENDER
HMT Limited, Auxiliary Business Division invites sealed tenders in two bid system for allotment of shop on license basis on "As is where is" basis. NIT Ref: HMTL/ABD/Estate/Shops/2026-27/01 Dated 05.06.2026. Last date for submission of bids is **27.06.2026 @2PM**. For details, visit **www.hmtindia.com, https://eprocure.gov.in/cppp/.** Corrigendum(S) if any, shall be posted on above website only.
Estate Department

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು
(ಆರೋಗ್ಯ ಸೌಧ, 3ನೇ ಮಹಡಿ, ಕುಷ್ಟರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು-560 023) ದೂರವಾಣಿ ಸಂಖ್ಯೆ: 080-29552542, ಇ-ಮೇಲ್: eekhsdrp@gmail.com
ಸಂಖ್ಯೆ: ಆಕುಕ/ಕಾ.ಇಂ/ಇಂ.ವಿ/ಬೆಂ/ಸ.ಇಂ-4/ಟೆಂಡರ್/2026-27/04 ದಿನಾಂಕ: 04.06.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ವತಿಯಿಂದ ಬೆಂಗಳೂರು ನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವಿವಿಧ ಆಸ್ಪತ್ರೆಗಳ ನಿರ್ಮಾಣ ಕಾಮಗಾರಿಗಳಿಗಾಗಿ ಸಾಮಾನ್ಯ ವರ್ಗದವರಿಗೆ 05 ಸಂಖ್ಯೆ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರು ಭಾಗವಹಿಸುವ ಸಲುವಾಗಿ ಟೆಂಡರನ್ನು ಆಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರ, ಗುತ್ತಿಗೆದಾರರ ದರ್ಜೆ, ಮುಂಗಡ ಠೇವಣಿ ಹಾಗೂ ಇತರೆ ವಿವರಗಳನ್ನು www.kppp.karnataka.gov.in ಅಂತರ್ ಜಾಲದ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಖಾಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಹಾಗೂ ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 11.06.2026 ರಂದು ಸಂಜೆ 4.00 ರವರೆಗೆ. ಸೂಚನೆ: ಸದರಿ ಟೆಂಡರಿಗೆ ಸಂಬಂಧಿಸಿದಂತೆ ತಿದ್ದುಪಡಿಗಳು ಅಥವಾ ಮುಂದೂಡಿಕೆಗಳು ಇದ್ದಲ್ಲಿ ಅವುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಮುಖಾಂತರವೇ ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಆ&ಕುಕ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/979/ಆಕಾರ್/2026-27

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 03/2026-27 ದಿನಾಂಕ : 04-06-2026
ಅಲ್ಪಾವಧಿ ಟೆಂಡರ್ ಪ್ರಕಟಣೆ
2026-27 ನೇ ಸಾಲಿನಲ್ಲಿ ರಾಮನಗರ ವಿಭಾಗ, ವ್ಯಾಪ್ತಿಯ ಒಟ್ಟು 07 ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ.
ಕ್ರಮ ಸಂಖ್ಯೆ : (01) ರಿಂದ (02) ರ ಕಾಮಗಾರಿಗಳಿಗೆ ಟೆಂಡರ್ ಹಾಗೂ ಕ್ರಮ ಸಂಖ್ಯೆ : (03) ರಿಂದ (07) ರವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. (ಅಂದಾಜು ಮೊತ್ತ ರೂ. 150.00 ಲಕ್ಷದಿಂದ ರೂ. 495.00 ಲಕ್ಷಗಳು).
1) ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 05-06-2026 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ, 2) ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 19-06-2026 ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸುವುದು, 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 20-06-2026 ರ ಸಂಜೆ 4.30 ಗಂಟೆ (ಸಾಧ್ಯವಾದಲ್ಲಿ).
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.
Note : Here after any changes with reference to this Notification will be Notified in KPP Portal only.
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ.
ಡಿಐಪಿಆರ್/ರಾಮನಗರ/85/ಮಣಿಪಾಲ್/2026-27

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ- 04, ಭೂತರಾಮನಹಟ್ಟಿ, ಬೆಳಗಾವಿ - 591156
(ನ್ಯಾಕ್ ಮಾನ್ಯತೆ ಃ+ ಗ್ರೇಡ್ - 2021) PM-USHA (MERU)
E-mail: registrar@rcub.ac.in, aee@rcub.ac.in
Phone No.: 0831-2565234/42
ಕುಲಸಚಿವರ ಕಾರ್ಯಾಲಯ
ಸಂ: ರಾಚವಿ/ಬೆಳಗಾವಿ/ಕ.ವಿ./2026-27/1210 ದಿನಾಂಕ:04.06.2026
ಪತ್ರಿಕಾ ಪ್ರಕಟಣೆಗಾಗಿ
ತಿದ್ದುಪಡಿ ಅಧಿಸೂಚನೆ
ದಿನಾಂಕ 04.06.2026 ರಂದು ಪ್ರಕಟಿಸಿದ ಜಾಹೀರಾತಿನಲ್ಲಿ ಇಂಡೆಂಟ್ ಸಂ. RCUB/2026-27/OW/WORK_INDENT17 ನ್ನು RCUB/2026-27/OW/WORK_INDENT17/CALL-2 ಎಂದು ತಿದ್ದುಪಡಿ ಮಾಡಿ ಓದಲು ತಿಳಿಸಿದೆ.
ಸಹಿ/-
ಕುಲಸಚಿವರು

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ
ನಿರ್ಮಾಣ & ನಿರ್ವಹಣೆ ಸಮೂಹ
ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು-560094
ದೂರವಾಣಿ: (080) 22172041/2476/5660, e-mail: ts.cmghg@isro.gov.in
ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಇ-ಟೆಂಡರಿಂಗ್ ಮೂಲಕ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು	ಇಸ್ರೋ ಮುಖ್ಯಾಲಯ, ಅಂತರಿಕ್ಷ ಭವನ, ಬೆಂಗಳೂರು ಇಲ್ಲಿ ಭದ್ರತೆ ಮತ್ತು ಮಂಭಾಗದ ಕಛೇರಿ ನಿರ್ಮಾಣ-ಸಿವಿಲ್, ಪಿಹೆಚ್, ಎಲೆಕ್ಟ್ರಿಕಲ್ ಮತ್ತು ಎಸಿ ಕಾಮಗಾರಿಗಳು
ಇ-ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಜಿ/ಇಸ್ರೋ-ಹೆಚ್‌ಕ್ಯೂ/ಸಿ/ಸಿ/06/ಪಿ/ಎಬಿ/2026-27 ದಿನಾಂಕ: 03.06.2026
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 267.96 ಲಕ್ಷಗಳು
ಪೂರ್ಣಗೊಳಿಸುವ ಕಾಲಾವಧಿ ತಿಂಗಳುಗಳಲ್ಲಿ	ಐದು (05) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	03.06.2026 ರಂದು 18:10 ರಿಂದ 15.06.2026 ರಂದು 23:59 ಗಂಟೆವರೆಗೆ
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	19.06.2026 ರಂದು 15.30 ಗಂಟೆವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ಟೆಕ್ನೋ-ಕಮರ್ಷಿಯಲ್ ಬಿಡ್)	19.06.2026 ರಂದು 16.30 ಗಂಟೆ
ಮುಂಗಡ ಠೇವಣಿ ಹಣ (ಇಎಂಡಿ)	ರೂ. 5,35,920/-[180 ದಿನಗಳವರೆಗೆ ಮಾನ್ಯತೆ]

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಆಹ್ವಾನದ ವಿವರವಾದ (ಹಿಂದಿ/ಇಂಗ್ಲಿಷ್) ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್ https://isro.gov.in/tenders.html ಹಾಗೂ ಟೆಂಡರ್ ಶುಲ್ಕಕ್ಕೆ https://tenderwizard.com/ISRO ಗೆ ಭೇಟಿ ನೀಡಿ ಪರಿವೀಕ್ಷಿಸಬಹುದು ಮತ್ತು ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ ಹಾಗೂ ಟೆಂಡರ್ ದಸ್ತಾವೇಜುಗಳನ್ನು ಇ-ಟೆಂಡರಿಂಗ್ ವೆಬ್‌ಸೈಟ್ https://tenderwizard.com/ISRO ಇಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-ಮುಖ್ಯಸ್ಥರು ಸಿಎಂಜಿ, ಇಸ್ರೋ ಮುಖ್ಯಾಲಯ

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
ಗೃಹ ಆಯುಕ್ತರ ಕಛೇರಿ, ಕಾವೇರಿ ಭವನ, ಬೆಂಗಳೂರು-560 009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2026-27 ದಿನಾಂಕ: 04-06-2026
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಲಬುರಗಿ ನಗರದ ಶೇಖ್ ರೋಜಾ ಬಡಾವಣೆಯಲ್ಲಿ ನಿರ್ಮಿಸಿರುವ ಗ್ರೀನ್ ಪಾರ್ಕ್ ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 2BHK & 2.5BHK ಫ್ಲಾಟ್‌ಗಳು ಹಾಗೂ ಆಳಂದ ಗ್ರಾಮದ ಸರ್ವೆ ನಂ. 228/2/1 ಮತ್ತು 229/2/1 ರಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ವಿವಿಧ ವರ್ಗದ ಮನೆ/ನಿವೇಶನಗಳನ್ನು (ಬಿಡಿ ನಿವೇಶನಗಳು ಸೇರಿ) ವಿಲೇವಾರಿ ಮಾಡಲು **ದಿನಾಂಕ: 06-02-2026** ರಂದು ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.
ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ-ಲಾಟರಿ ಮುಖಾಂತರ ಪ್ರವರ್ಗವಾರು ವಿಂಗಡಿಸದೇ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಹಂಚಿಕೆ ಮಾಡುವ ಸಂಬಂಧ ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ದಿನಾಂಕವನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ-ಲಾಟರಿ ದಿನಾಂಕ ಮತ್ತು ಸಮಯ
ಕಲಬುರಗಿ ನಗರದ ಶೇಖ್ ರೋಜಾ ಗ್ರೀನ್ ಪಾರ್ಕ್ ವಸತಿ ಸಮುಚ್ಚಯ	05-06-2026	12-06-2026	15-06-2026	17-06-2026 ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ಗೃಹ ಮಂಡಳಿ ಸಭಾಂಗಣ, 4ನೇ ಮಹಡಿ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.
ಆಳಂದ ವಸತಿ ಬಡಾವಣೆ, ಕಲಬುರಗಿ ಜಿಲ್ಲೆ	05-06-2026	12-06-2026	15-06-2026	

ವಿಶೇಷ ಸೂಚನೆ: 1) ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯ ಸೂಚನಾಫಲಕಗಳಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
2) ಹಂಚಿಕೆಯಾದ ಸ್ವತ್ತುಗಳಿಗೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
ಸಹಿ/- ಕಾರ್ಯದರ್ಶಿಗಳು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO986/AAPL/2026-27

ನೈಋತ್ಯ ರೈಲ್ವೆ
ಟೆಂಡರು ಸೂಚನೆ
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಪಾರ್ಸೆಲ್ ನಿರ್ವಹಣಾ ಟೆಂಡರ್‌ಗಳಿಗಾಗಿ GeM ಪೋಟಲ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಬೆಂಗಳೂರು, ಯಶವಂತಪುರ, ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಸ್ ಮತ್ತು ಯಲಹಂಕ ರೈಲ್ವೆ ನಿಲ್ದಾಣಗಳಲ್ಲಿ ವಿವಿಧ ಪ್ಲಾಟ್‌ಫಾರ್ಮ್‌ಗಳು ಮತ್ತು ಪಾರ್ಸೆಲ್ ಕಚೇರಿಗಳ ನಡುವೆ ಮತ್ತು ಪ್ರತಿಯಾಗಿ ಗುತ್ತಿಗೆ ಪಡೆಯದ/ಇಲಾಖೆಯ ಪಾರ್ಸೆಲ್‌ಗಳು/ಲಗೇಜ್‌ಗಳನ್ನು ಲೋಡ್ ಮಾಡುವುದು, ಇಳಿಸುವುದು ಮತ್ತು ವರ್ಗಾಯಿಸುವ ಪಾರ್ಸೆಲ್ ನಿರ್ವಹಣೆ ಚಟುವಟಿಕೆಗಳ ಒಪ್ಪಂದವನ್ನು ನೀಡುವುದಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.06.2026
ಹೆಚ್ಚಿನ ಮಾಹಿತಿಗಾಗಿ https://gem/gov/in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಬೆಂಗಳೂರು
PUB/183/AAMO/PRB/SWR/2026-27
ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)
ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ
ತಾಲೂಕಾ ಆಸ್ಪತ್ರೆ ನರಗುಂದ ತಾ|| ನರಗುಂದ, ಜಿ || ಗದಗ
e-mail : amotlhnrd@gmail.com
ಕ್ರ.ಸಂ: ತಾ.ಆ.ನ/ಸಿ.ಆರ್/ಹೊ.ಗು/ಟೆಂಡರ್/2026-27/72 ದಿನಾಂಕ: 03-06-2026
ಟೆಂಡರ್ ಪ್ರಕಟಣೆ
2026-27 ನೇ ಸಾಲಿಗಾಗಿ ತಾಲೂಕಾ ಆಸ್ಪತ್ರೆ ನರಗುಂದ ಇಲ್ಲಿಗೆ ಅವಶ್ಯವಾಗಿ ಬೇಕಾಗಿರುವ ಗ್ರೂಪ್ "ಡಿ" ಮತ್ತು ನಾನ್ ಕ್ಲಿನಿಕಲ್ ವೃಂದದ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ : **16-06-2026** ರಂದು ಸಮಯ 05:30 ಗಂಟೆಯಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No- DHFWS/2026-27/SE2255 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.
ಸಹಿ/- ಆಡಳಿತ ವೈದ್ಯಾಧಿಕಾರಿಗಳು
ತಾಲೂಕ ಆಸ್ಪತ್ರೆ ನರಗುಂದ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/101/2026-27

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಕಾರವಾರ-581 306
ದೂರವಾಣಿ ಸಂಖ್ಯೆ: 08382-227395
ಸಂಖ್ಯೆ: ಗಭೂಇ/ಉಕಜಿ/GR-02/2026-27 ದಿನಾಂಕ : 04-06-2026
ಇ-ಹರಾಜು ಪ್ರಕಟಣೆ
ಉತ್ತರ ಕನ್ನಡ ಜಿಲ್ಲೆಯ, ಕಾರವಾರ ತಾಲ್ಲೂಕಿನ ಬೈತಖೋಲ ಗ್ರಾಮದ ಬಂದರು ಪ್ರದೇಶದಲ್ಲಿ ದಾಸ್ತಾನಿರುವ ಗ್ರಾನೈಟ್ ಬ್ಲಾಕ್‌ಗಳನ್ನು ಇ-ಹರಾಜು ಮಾಡಲು ಅರ್ಹ ಅರ್ಜಿದಾರರು/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಹರಾಜು ಸಂಖ್ಯೆ: DMG/2026-27/AUCTION67 ಇ-ಹರಾಜು ನೋಟಿಫಿಕೇಷನ್ ಪ್ರತಿ ಮತ್ತು ಅನುಬಂಧಗಳನ್ನು KPP portal Website: www.kppp.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 19-06-2026 ಆಗಿರುತ್ತದೆ. ಇ-ಹರಾಜು ಬಿಡ್ಡಿಂಗ್ ದಿನಾಂಕ: 29-06-2026 ರಿಂದ 02-07-2026 ರಂದು ಸಮಯ ಪೂರ್ವಾಹ್ನ 10:30 ರಿಂದ 17:30 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಅರ್ಜಿಯನ್ನು ಹಾಗೂ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ KPP portal ಮುಖಾಂತರ ಸಲ್ಲಿಸುವುದು.
ಸಹಿ/- ಹಿರಿಯ ಭೂವಿಜ್ಞಾನಿ ಇ-ಹರಾಜು
ಆಹ್ವಾನ ಪ್ರಾಧಿಕಾರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ

ನಗರ ಪಾಲಿಕೆಗಳ ಸಮನ್ವಯ ಕೊರತೆ | ಬಳಕೆಯಾಗದ 100 ಕೋಟಿ ರೂ. ಅನುದಾನ | ಮಾಲಿನ್ಯ ನಿಯಂತ್ರಣಕ್ಕಿಲ್ಲ ಇಚ್ಛಾಶಕ್ತಿ

ಬಳಕೆಯಾಗದ ಅನುದಾನ, ತಗ್ಗದ ವಾಯುಮಾಲಿನ್ಯ

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesofindia.com

ಸಂಗ್ರಹ ಚಿತ್ರ

ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ (ಎನ್‌ಸಿಎಪಿ) ಮಹಾನಗರಕ್ಕೆ 535 ಕೋಟಿ ರೂ. ಅನುದಾನ ದೊರೆತಿದ್ದರೂ, ವಾಯುಮಾಲಿನ್ಯ ಪ್ರಮಾಣ ಮಾತ್ರ ಕಡಿಮೆಯಾಗಿಲ್ಲ. ನಗರ ಪಾಲಿಕೆಗಳ ಅಸಡ್ಡೆ ಮತ್ತು ಸಮನ್ವಯದ ಕೊರತೆಯಿಂದಾಗಿ 100 ಕೋಟಿ ರೂ.ಗಿಂತ ಅಧಿಕ ಅನುದಾನ ಬಳಕೆಯಾಗದೆ ಉಳಿದಿದೆ.

ಕೇಂದ್ರದ ಅರಣ್ಯ ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯವು ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮವನ್ನು (ಎನ್‌ಸಿಎಪಿ) ಜಾರಿ ಮಾಡಿದ್ದು ರಾಜ್ಯದ ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಮತ್ತು ದಾವಣಗೆರೆ ನಗರಗಳನ್ನು ಆಯ್ಕೆ ಮಾಡಿದೆ. ಈ ಜಿಲ್ಲೆಗಳನ್ನು ರಾಷ್ಟ್ರೀಯ ಪರಿವೇಷ್ಠಕ ವಾಯು ಗುಣಮಟ್ಟ ಸಾಧಿಸದ ನಗರಗಳೆಂದು ಗುರುತಿಸಿದೆ. ಈ ನಗರಗಳಲ್ಲಿ ಮಾಲಿನ್ಯ ತಗ್ಗಿಸಲು ಬೆಂಗಳೂರಿಗೆ ಸಂಬಂಧಿಸಿದಂತೆ 44 ಅಂಶಗಳ ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದೆ. ಆದರೆ, ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲ.

ದೇಶಾದ್ಯಂತ ನಿಗದಿತ ವಾಯು ಗುಣಮಟ್ಟದ ಮಾನದಂಡಗಳನ್ನು ತಲುಪಲು ವಿಫಲವಾಗಿರುವ 131 ನಗರಗಳಲ್ಲಿ ಮಾಲಿನ್ಯ ನಿಯಂತ್ರಿಸಲು ಕೇಂದ್ರ ಸರಕಾರವು ಈ ಯೋಜನೆ ಆರಂಭಿಸಿದೆ. ಈ ನಗರಗಳಿಗೆ 15ನೇ ಹಣಕಾಸು ಆಯೋಗದಿಂದ ಅನುದಾನ ಒದಗಿಸಲಾಗಿದೆ. ಅದರಂತೆ ಬೆಂಗಳೂರಿಗೆ 535 ಕೋಟಿ ರೂ. ಲಭ್ಯವಾಗಿದೆ. ಇದರಲ್ಲಿ ಬಿಎಂಟಿಸಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಇತರೆ ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ.

ಬಿಎಂಟಿಸಿಯು ಈ ಅನುದಾನವನ್ನು ಎಲೆಕ್ಟ್ರಿಕ್ ವಾಹನಗಳ ಖರೀದಿ, ಚಾರ್ಜಿಂಗ್ ಘಟಕಗಳ ನಿರ್ಮಾಣಕ್ಕೆ ಬಳಸಿಕೊಂಡಿದೆ. ಆದರೆ, ತ್ಯಾಜ್ಯ ನಿರ್ವಹಣೆ, ನಗರದಲ್ಲಿ ಹಸಿರು ವಲಯಗಳ ವಿಸ್ತರಣೆ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾರ್ಯವು ತೆವಳುತ್ತಾ ಸಾಗಿದೆ.

ಹವಾಮಾನ ವೈಪರೀತ್ಯ ಎದುರಿಸುವ 'ಸಿ 40 ನಗರಗಳ ಜಾಗತಿಕ ಸಂಪರ್ಕ ಜಾಲ'ದಲ್ಲಿ ಬೆಂಗಳೂರು ಸಹ ನಾಯಕತ್ವವನ್ನು ಹೊಂದಿದೆ. ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯು ಆರ್‌ಐ) 269 ಕ್ರಿಯೆಗಳ ಯೋಜನೆಗಳನ್ನು ಸಿದ್ಧಪಡಿಸಿದೆ. ಇಂಧನ, ಕಟ್ಟಡ, ಸಾರಿಗೆ, ಘನತ್ಯಾಜ್ಯ ನಿರ್ವಹಣೆ, ವಾಯು ಗುಣಮಟ್ಟ, ನೀರು, ನಗರ ಯೋಜನೆ, ಹಸಿರೀಕರಣ, ಜೀವವೈವಿಧ್ಯ ಮತ್ತು ವಿಪತ್ತು ನಿರ್ವಹಣೆ ಸೇರಿದಂತೆ ಹಲವು ಕ್ರಿಯೆಗಳನ್ನು ಈ ಯೋಜನೆ ಒಳಗೊಂಡಿದೆ.

ನಗರದಲ್ಲಿ ಗ್ರೀನ್‌ಹೌಸ್ ಗ್ಯಾಸ್ (ಜಿಎಚ್‌ಜಿ) ಹೊರಸೂಸುವಿಕೆಯನ್ನು ಕಡಿತಗೊಳಿಸುವುದು, 2025ರ ವೇಳೆಗೆ ಶೇ. 75ರಷ್ಟು ಬಸ್, ಶೇ. 90ರಷ್ಟು ಕಾರು, ಬೈಕ್‌ಗಳು ಹಾಗೂ ಶೇ. 50ರಷ್ಟು ಸರಕು ಸಾಗಣೆ ವಾಹನಗಳು ವಿದ್ಯುತ್‌ನಿಂದ ಚಲಿಸಬೇಕು. ನಗರದಲ್ಲಿ 'ಹಸಿರು ಹೊದಿಕೆ'ಯನ್ನು 2030ರ ವೇಳೆಗೆ ಶೇ. 10 ಹಾಗೂ 2040ರ ವೇಳೆಗೆ ಶೇ. 20ರಷ್ಟು ವೃದ್ಧಿಸುವುದು, ವಿದ್ಯುತ್ ಉತ್ಪಾದನೆ ಗ್ರಿಡ್‌ಗಳನ್ನು 2050ರ ವೇಳೆಗೆ ಶೇ. 90ರಷ್ಟು ಹೆಚ್ಚಿಸುವುದು, ಮುಚ್ಚಿಹೋಗಿರುವ ಭೂಭರ್ತಿ ಘಟಕಗಳನ್ನು 2030ರೊಳಗೆ 'ಹಸಿರು ತಾಣ ಅಥವಾ ಉದ್ಯಾನ'ಗಳನ್ನಾಗಿ ಪರಿವರ್ತಿಸುವುದು, ವಾಯು ಮಾಲಿನ್ಯ ಮಟ್ಟವನ್ನು ಶೇ. 40ರಷ್ಟು ಕಡಿತಗೊಳಿಸುವುದು, ಕೆರೆಗಳು ಮತ್ತು ಜಲಮೂಲಗಳನ್ನು ಪುನರುಜ್ಜೀವನ ಗೊಳಿಸುವುದು 'ಬೆಂಗಳೂರು ಹವಾಮಾನ ಕ್ರಿಯಾಯೋಜನೆ'ಯ ಪ್ರಮುಖ ಉದ್ದೇಶವಾಗಿದೆ.

ಕೇಂದ್ರದಿಂದ ಅನುದಾನ ಸ್ಥಗಿತ: ಕೇಂದ್ರ ಸರಕಾರದಿಂದ ಈ ಹಿಂದೆ ಬಿಡುಗಡೆ ಮಾಡಿದ್ದ ಅನುದಾನವನ್ನು ಕಾಲಮಿತಿಯೊಳಗೆ ಬಳಸದ ಕಾರಣ ಕಳೆದ 2 ವರ್ಷಗಳಿಂದ ಅನುದಾನ ಸ್ಥಗಿತಗೊಳಿಸಲಾಗಿದೆ. ಪರಿಣಾಮ, ವಾಯುಮಾಲಿನ್ಯ ನಿಯಂತ್ರಣ ಯೋಜನೆಗಳು ನನೆಗುದಿಗೆ ಬಿದ್ದಿವೆ. ದೇಶದಲ್ಲೇ ಶುದ್ಧ ಗಾಳಿ ನಿಧಿಯನ್ನು ಕಡಿಮೆ ಪ್ರಮಾಣದಲ್ಲಿ ಬಳಸಿದ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಅನುದಾನ ಬಳಕೆಯಾಗದಿರುವುದು ಮತ್ತು ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ಚುನಾವಣೆ ನಡೆಯದಿರುವುದೇ ಅನುದಾನ ಸ್ಥಗಿತಕ್ಕೆ ಕಾರಣ ಎನ್ನಲಾಗಿದೆ.

ಕೇಂದ್ರ ಸರಕಾರವು 2023–24 ಮತ್ತು 2024–25ರಲ್ಲಿ ಅನುದಾನ ಬಿಡುಗಡೆ ಮಾಡಿಲ್ಲ. ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲರ್‌ಗಳ ಅವಧಿ 2020ರ ಸೆ.10ರಂದು ಅಂತ್ಯಗೊಂಡಿತು. ಆಗಿನಿಂದ ಚುನಾವಣೆ ನಡೆದಿಲ್ಲ. ಹೀಗಾಗಿ, ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ವಿಳಂಬವಾಗುತ್ತಿದೆ.

ನಿಯಮಗಳ ಪ್ರಕಾರ ಅನುದಾನ ಬಿಡುಗಡೆಗೆ ಹಿಂದಿನ ವರ್ಷ ಲಭ್ಯವಿರುವ ನಿಧಿಯಲ್ಲಿ ಶೇ 75ರಷ್ಟು ಬಳಸಿರಬೇಕು. ಪಿಎಂ 10 ಮಾಲಿನ್ಯ ಮಟ್ಟ ಕಡಿಮೆ ಮಾಡಿರಬೇಕು. ಆದರೆ, ಈ ಎರಡೂ ಷರತ್ತುಗಳನ್ನು ಸಿಲಿಕಾನ್ ಸಿಟಿ ಪೂರೈಸುವಲ್ಲಿ ವಿಫಲವಾಗಿದೆ. ಅಲ್ಲದೆ, ಅನುದಾನ ವೆಚ್ಚದ ವಿವರಗಳು ಸಾರ್ವಜನಿಕವಾಗಿ ಲಭ್ಯವಾಗಿಲ್ಲ.

ಎರಡು ವರ್ಷಗಳಿಂದ ಅನುದಾನ ಸ್ಥಗಿತ



ಕೊರೊನಾ ಬಳಿಕ ನಗರದಲ್ಲಿ ಗಾಳಿಯಲ್ಲಿ ತೇಲಾಡುವ ದೂಳಿನ ಕಣಗಳು (ಪಿಎಂ 10) ಜಾಸ್ತಿಯಾಗಿವೆ. ನಗರದ ಪಿಎಂ 2.5 ಮಟ್ಟವು ರಾಷ್ಟ್ರೀಯ ಮಾನದಂಡಗಳಿಗೆ ಅನುಗುಣವಾಗಿದ್ದರೂ, ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿರುವ ಸುರಕ್ಷಿತ ಮಿತಿಗಿಂತ 4 ರಿಂದ 9 ಪಟ್ಟು ಹೆಚ್ಚಾಗಿದೆ. ಹೀಗಾಗಿ, ನಗರದ ವಾಯು ಗುಣಮಟ್ಟ ಸುಧಾರಣೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕಿದೆ. ಆದರೆ, ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿ ಬಿಡುಗಡೆಯಾಗಿರುವ ಅನುದಾನ ಬಳಸಿಕೊಳ್ಳುವಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸಂಪೂರ್ಣ ವಿಫಲವಾಗಿದೆ. ಹೀಗಾಗಿ, ಎರಡು ವರ್ಷಗಳಿಂದ ಕೇಂದ್ರ ಸರಕಾರದಿಂದ ಅನುದಾನ ಸ್ಥಗಿತಗೊಂಡಿದೆ.

ಹಲವು ದಶಕಗಳ ಕಾಲ ಉದ್ಯಾನನಗರಿ, ನಿವೃತ್ತರ ಸ್ವರ್ಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ನಗರವು ಇಂದು ಸಂಪೂರ್ಣ ವಿರುದ್ಧವಾದ ವಾತಾವರಣ ಹೊಂದಿದೆ. ಕಡುಬೇಸಿಗೆಯಲ್ಲೂ ತಂಪಾದ ಗಾಳಿ ಬರುತ್ತಿತ್ತು. ಆದರೆ, ಈಗಿನ ಈ ಉಷ್ಣ ವೈಪರೀತ್ಯವು ನಿವಾಸಿಗಳನ್ನು ಕಂಗಾಲಾಗಿಸಿದೆ. 2050ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ಸಂಪೂರ್ಣ ಶೂನ್ಯಕ್ಕೆ ಇಳಿಸುವ ಮಹತ್ವಾಕಾಂಕ್ಷೆಯೊಂದಿಗೆ ಈ ಯೋಜನೆಯನ್ನು ರೂಪಿಸಲಾಗಿದೆ. ಆದರೆ, ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಮಾಲಿನ್ಯ ಮಂಡಳಿಯ ನಿಯಮ ಉಲ್ಲಂಘಿಸಿರುವ 512 ಉದ್ದಿಮೆಗಳಿಗೆ 289.85 ಕೋಟಿ ರೂ. ದಂಡ ವಿಧಿಸಲಾಗಿದೆ. ಆದರೆ, 4.77 ಕೋಟಿ ರೂ. ಮಾತ್ರ ವಸೂಲಾಗಿದೆ.

Bennett & Coleman
THE TIMES OF INDIA
VK ವಿಜಯ ಕರ್ನಾಟಕ
VIJAY KARNATAKA
NO.1 READ DAILY IN KARNATAKA*
* Source: IRS 2019
CET
ಬರೆದಿದ್ದೀರಿ...
ಈಗ ಭವಿಷ್ಯದ ದೊಡ್ಡ
ನಿರ್ಧಾರ
ನಿಮ್ಮ ಮುಂದೆ!
ಫಲಿತಾಂಶದ ನಂತರ ಕಾಲೇಜು ಆಯ್ಕೆ
ಕೋರ್ಸ್ ಆಯ್ಕೆ ಕರಿಯರ್ ಆಯ್ಕೆ
ಈ ಎಲ್ಲದಕ್ಕೂ ಸರಿಯಾದ ಮಾರ್ಗದರ್ಶನ
ಪಡೆಯಲು ಬನ್ನಿ.

VK ಎಜುಕೇಷನ್ FAIR
2026
A PREMIER EDUCATIONAL EVENT
11th & 12th ಜೂನ್ 2026
ಗುರುವಾರ ಮತ್ತು ಶುಕ್ರವಾರ
ಸ್ಥಳ: ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾಲಯ
ಜ್ಞಾನಜ್ಯೋತಿ ಸಭಾಂಗಣ,
ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-01
ಹೆಸರು
ನೊಂದಾಯಿಸಲು
QR ಕೋಡ್
ಸ್ಕ್ಯಾನ್ ಮಾಡಿ
ಸಹಯೋಗ: AD6 advertising
A Unit of Sri Sairam Enterprises
ಮಾಹಿತಿಗಾಗಿ ಸಂಪರ್ಕಿಸಿ: 9916079232 / 9686938983

Children's Education Society (Regd.)
THE OXFORD ENGLISH SCHOOL (STATE)
1st Phase, JP Nagar, Bangalore - 560078
Congratulations!
100% SSLC Results for the year 2025-26
MERIT STUDENTS 2025-26

LIKHITH K R 98.88%
SAMRUDH RAI D 97.28%
PAVANI N 96.40%
ANAM JAHAN 96.10%
DHRUVA B 96.10%
SACHIN S C 95.68%
JAHNAVI V 94.88%
SUPRIYA S 94.24%
L A ROSHAN 94.24%
DIPASHREE S 94.00%
VISHRUTH M 94.88%
SHIVANI M L 94.24%
APOORVA A 91.04%
MANVITH M 90.88%
RUQUAIYAH 90.56%
CHETHAN B 90.40%
K POOJA 90.08%
RAVITEJH S 90%
ADMISSIONS ARE OPEN FOR ACADEMIC YEAR 2026 - 27
FOR MORE DETAILS CONTACT : 080 - 61754529 / 501 / 514.
www.theoxford.edu
Dr.SNVL Narasimha Raju, President

ಮೆಟ್ರೊ ನೀಲಿ ಮಾರ್ಗಕ್ಕೆ ಬಂತು ಮೊದಲ ಚಾಲಕರಹಿತ ರೈಲು

ಬೆಂಗಳೂರು: ಟೆಕ್‌ಹಬ್ ಹೊರವರ್ತುಲ ರಸ್ತೆ ಮೂಲಕ ಹಾದು ಹೋಗಲಿರುವ ನಮ್ಮ ಮೆಟ್ರೊ ನೀಲಿ ಮಾರ್ಗಕ್ಕಾಗಿ ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಗುರುವಾರ ಮೊದಲ ಚಾಲಕರಹಿತ ರೈಲನ್ನು ಪೂರೈಸಿದೆ.

ಆರು ಬೋಗಿಗಳ ಈ ರೈಲನ್ನು ಸಿ.ವಿ. ರಾಮನ್ ನಗರದಲ್ಲಿರುವ ಬಿಇಎಂಎಲ್ ಉತ್ಪಾದನಾ ಘಟಕದಿಂದ ಟ್ರೈಲರ್‌ಗಳ ಮೂಲಕ ಬೈಯಪ್ಪನಹಳ್ಳಿ ಡಿಪೋಗೆ ತರಲಾಗಿದೆ.

''ರೈಲನ್ನು ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ (ಪರಿಶೀಲನಾ ವಿಭಾಗ) ಇರಿಸಲಿದ್ದೇವೆ. ಶೀಘ್ರ ಡಿಪೋ ಪರೀಕ್ಷೆಯನ್ನು ಆರಂಭಿಸುತ್ತೇವೆ. ಕಾರಿಡಾರ್ ಸಿದ್ಧವಾದ ತಕ್ಷಣ ರೈಲನ್ನು ಅಲ್ಲಿಗೆ ಸ್ಥಳಾಂತರಿಸಲಾಗುವುದು. ಪ್ರಯಾಣಿಕರ ಸೇವೆಗೆ ನಿಯೋಜಿಸುವ ಮೊದಲು ಈ ರೈಲುಗಳು ಕನಿಷ್ಠ ಐದು ತಿಂಗಳವರೆಗೆ ವಿವಿಧ ತಾಂತ್ರಿಕ ಪರೀಕ್ಷೆಗಳಿಗೆ ಒಳಗಾಗಲಿವೆ,'' ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

''ಈ ರೈಲು ಹೊರತುಪಡಿಸಿ ಮುಂಬರುವ ರೈಲುಗಳಲ್ಲಿ ಆರು ಬೋಗಿಗಳ ಪೈಕಿ ನಾಲ್ಕು ಬೋಗಿಗಳಿಗೆ ಲಗೇಜ್ ರ್‍ಯಾಕ್ ಇರಲಿದೆ. ಬೋಗಿಗಳಲ್ಲಿನ ಎರಡು ಆಸನಗಳ ಬದಲಿಗೆ ಈ ರ್‍ಯಾಕ್ ಅಳವಡಿಸಲಾಗುತ್ತದೆ. ಆದರೆ, ಚಾಲಕರಿರುವ ಮುಂದಿನ ಮತ್ತು ಹಿಂದಿನ ಎರಡು ಟ್ರೈಲರ್ ಬೋಗಿಗಳಲ್ಲಿ ಈ ಸೌಲಭ್ಯ ಇರಲಾರದು. ರೈಲುಗಳು ಎಲ್‌ಸಿಡಿ ಆಧಾರಿತ ಡೈನಾಮಿಕ್ ರೂಟ್-ಮ್ಯಾಪ್ ಡಿಸ್‌ಪ್ಲೇ ಹೊಂದಿರಲಿವೆ,'' ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಉದ್ಯಮಿ ಬೆದರಿಸಿ ₹1.5 ಕೋಟಿ ಸುಲಿಗೆ

ಬೆಂಗಳೂರು: ರಿಯಲ್ ಎಸ್ಟೇಟ್ ಏಜೆಂಟ್‌ಗೆ ಹೆದರಿಸಿ 1.50 ಕೋಟಿ ರೂ. ಹಾಗೂ 500 ಗ್ರಾಂ ಚಿನ್ನದ ಆಭರಣ ದೋಚಿದ್ದಾರೆಂಬ ಆರೋಪದ ಮೇರೆಗೆ ದಂಪತಿ ವಿರುದ್ಧ ಅಮೃತಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಹೆಬ್ಬಾಳದ ಕೆಂಪಾಪುರ ನಿವಾಸಿ, ರಿಯಲ್ ಎಸ್ಟೇಟ್ ಏಜೆಂಟ್ ಎ.ಎಸ್.ರವಿರಾಜ್ ನೀಡಿದ ದೂರಿನ ಮೇರೆಗೆ ಸೌಮ್ಯಾ ಹಾಗೂ ಅಂಬರೀಷ್ ದಂಪತಿ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯಿದೆ ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೂರುದಾರ ರವಿರಾಜ್ 18 ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಒಬ್ಬ ಮಗ ಇದ್ದಾನೆ. ಈ ಮಧ್ಯೆ ಕೌಟುಂಬಿಕ ಕಾರಣಕ್ಕೆ ಪತ್ನಿ ಮತ್ತು ಮಗನಿಂದ ಪ್ರತ್ಯೇಕವಾಗಿ ವಾಸವಾಗಿದ್ದರು. ಈ ಮಧ್ಯೆ ಎಂಟು ವರ್ಷಗಳ ಹಿಂದೆ ಸಾಮಾಜಿಕ ಜಾಲತಾಣದ ಮೂಲಕ ಸೌಮ್ಯಾ ಪರಿಚಯವಾಗಿದ್ದು, ಬಳಿಕ ಇಬ್ಬರೂ ಪರಸ್ಪರ ಪ್ರೀತಿಸಿ ಸಹ ಜೀವನ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಈಗಾಗಲೇ ತನಗೆ ಮದುವೆಯಾಗಿದ್ದು ಪತಿಯಿಂದ ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸಿದ್ದೇನೆ ಎಂದು ಸೌಮ್ಯಾ ಹೇಳಿದ್ದರು. ಅಲ್ಲದೆ, 'ವಿಚ್ಛೇದನ ಪಡೆದ ಬಳಿಕ ಮದುವೆಯಾಗೋಣ' ಎಂದು ನಂಬಿಸಿದ್ದರು. ಫ್ಲ್ಯಾಟ್ ಬಾಡಿಗೆ ಪಡೆದಾಗಲೂ ಬಾಡಿಗೆ ಕರಾರು ಪತ್ರಕ್ಕೆ ಪತ್ನಿ ಎಂದೇ ಸಹಿ ಮಾಡಿದ್ದರು ಎಂದು ರವಿರಾಜ್ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸೌಮ್ಯಾ ಕೇಳಿದಾಗಲೆಲ್ಲ ಹಣ ನೀಡುತ್ತಿದ್ದೆ. 2026ರ ಮೇ ವರೆಗೆ ಸುಮಾರು 1.50 ಕೋಟಿ ರೂ. ಹಾಗೂ 500 ಗ್ರಾಂ ಚಿನ್ನಾಭರಣ ಪಡೆದುಕೊಂಡಿದ್ದಾರೆ ಎಂದು ರವಿರಾಜ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

»08

ADVERTORIAL

ಮಂಡಿ ನೋವಿನ ಉಪಶಮನಕ್ಕೆ ಸರ್ಜರಿ ಇಲ್ಲದೇ ಸುಲಭ ಚಿಕಿತ್ಸೆ

ಸ್ಟೀರಾಯ್ಡ್ ಎಂಬ ಹಾನಿಕಾರಕ ಶಾರ್ಟ್‌ಕಟ್ ಬೇಡ | ಅಲಿವಿಯೇಟ್ ಕ್ಲಿನಿಕ್‌ನಲ್ಲಿದೆ ನೋವಿಗೆ ಸರಳ ಉಪಾಯ

ಪಿಆರ್‌ಪಿ ಥೆರಪಿ: ನಿಮ್ಮ ದೇಹದ ಸ್ವಯಂ ಗುಣಪಡಿಕೆಯ ಸಾಮರ್ಥ್ಯ ಉತ್ತೇಜಿಸಿ ನೋವು ಮಾಯ

ಬೆಂಗಳೂರು: ಮೊಣಕಾಲಿನ ನೋವು (Knee Pain) ಇಂದು ಅನೇಕ ಜನರ ಜೀವನವನ್ನು ತುಂಬಾ ಕಷ್ಟಕರವಾಗಿಸಿದೆ. ವಯಸ್ಸಾದವರು, ಕ್ರೀಡಾ-ಪಟುಗಳಿಂದ ಹಿಡಿದು ಗೃಹಿಣಿಯರ ವರೆಗೆ, ಹಲವರು ಗಾಯ, ಕೀಲು ಸವೆತ ಮತ್ತು ಸಂಧಿವಾತದಿಂದ ತೀವ್ರ ನೋವಿನ ಹಿಡಿತದಲ್ಲಿ ನರಳುತ್ತಿದ್ದಾರೆ. ಮೆಟ್ಟಿಲು ಹತ್ತಲು ತೊಂದರೆ, ಸರಳ ಕೆಲಸವೂ ಕಷ್ಟ, ಪೇನ್ ಕಿಲ್ಲರ್ಸ್ ಮೇಲೆ ಅತಿಯಾದ ಅವಲಂಬನೆ, ಕುಳಿತಿದ್ದ ಜಾಗದಿಂದ ಎದ್ದೇಳಲು ಕಷ್ಟಕರ ಇವೆಲ್ಲವೂ ಅಸ್ಥಿ ಸಂಧಿವಾತದ ಲಕ್ಷಣಗಳಾಗಿವೆ.

'ನೋವು' ನಿಮ್ಮ ದೇಹದೊಳಗಿನ ಸಮಸ್ಯೆ ಸೂಚಿಸುವ ಒಂದು ಪ್ರಬಲ-ವಾದ 'ಎಚ್ಚರಿಕೆ ಸಂದೇಶ' ವಷ್ಟೇ.

ನೋವು ಕಂಡಾಗ, ಬೇಗ ಪರಿಹಾರ ಸಿಗಲಿ ಎಂದು ನಾವು ಬಾಮ್ ಹಚ್ಚುತ್ತೇವೆ, ಪೇನ್ ಕಿಲ್ಲರ್ ಮಾತ್ರೆ ನುಂಗುತ್ತೇವೆ ಅಥವಾ ತಾತ್ಕಾಲಿಕ ಪರಿಹಾರ ನೀಡುವ ಅಡ್ಡಪರಿಣಾಮಗಳು ತುಂಬಿಕೊಂಡಿರುವಂತಹ ಸ್ಟೀರಾಯ್ಡ್ ಚುಚ್ಚುಮದ್ದು ಹಾಕಿಸಿಕೊಳ್ಳುತ್ತೇವೆ. ಈ ರೀತಿ ತಾತ್ಕಾಲಿಕ ಪರಿಹಾರಗಳನ್ನು ಬಳಸಿದಾಗ, ನೋವಿನ 'ಎಚ್ಚರಿಕೆ ಸಂದೇಶ' ಕ್ಷಣಿಕವಾಗಿ ನಿಲ್ಲುತ್ತದೆ. ಆದರೆ, ಸಮಸ್ಯೆಯ ಮುಖ್ಯ ಕಾರಣ (ಕೀಲುಗಳ ಹಾನಿ) ಹಾಗೆಯೇ ಉಳಿದು ಬಿಡುತ್ತದೆ. ಇದರಿಂದ ಸಮಸ್ಯೆಯು ಬುಡದಿಂದಲೇ ಸರಿ ಹೋಗುವುದಿಲ್ಲ.

ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ಅಲಿವಿಯೇಟ್ ಪೇನ್ ಮ್ಯಾನೇಜ್ಮೆಂಟ್ ಕ್ಲಿನಿಕ್‌ನಲ್ಲಿ ಲಭ್ಯವಿರುವ, ಯಾವುದೇ ಅಡ್ಡ ಪರಿಣಾಮಗಳಿಲ್ಲದ, ನೈಸರ್ಗಿಕವಾಗಿ ನೋವನ್ನು ಕಡಿಮೆ ಮಾಡುವ 'PRP' ಚಿಕಿತ್ಸೆಯನ್ನು ಆರಿಸಿಕೊಳ್ಳು-ವುದು ಉತ್ತಮ ಆಯ್ಕೆಯಾಗಿದೆ.

PRPಯು ನೋವಿನ ಮೂಲ ಕಾರಣವನ್ನು ಸರಿಪಡಿಸುವ ಒಂದು ದೀರ್ಘಕಾಲೀನ ಪರಿಹಾರದ ಹುಡುಕಿ.

ಈ ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ:

- **ಮೂಲಕ್ಕೆ ಚಿಕಿತ್ಸೆ:** ನೋವಿಗೆ ಕಾರಣ-ವಾದ ಅಂಗಾಂಶದ ಹಾನಿಯನ್ನು ಇದು ಸರಿಪಡಿಸುತ್ತದೆ. ಇದರಿಂದ ನೋವಿನ ಸಮಸ್ಯೆ ಬುಡದಿಂದಲೇ ಉಪಶಮಿಸಲು ಸಾಧ್ಯವಾಗುತ್ತದೆ.
- **ನಿಮ್ಮದೇ ದೇಹದ ಶಕ್ತಿ ಬಳಕೆ:** ನಿಮ್ಮ ದೇಹದಿಂದ ತೆಗೆದ ರಕ್ತದಲ್ಲಿರುವ ಪ್ಲೇಟ್‌ಲೆಟ್‌ಗಳು (ಗುಣ ಮಾಡುವ ಶಕ್ತಿಯನ್ನು) ಪ್ರತ್ಯೇಕಿಸಿ, ಚುಚ್ಚುಮದ್ದಿನ ಮೂಲಕ ನೋವಿರುವ ಜಾಗಕ್ಕೆ ತಲುಪಿಸಲಾಗುತ್ತದೆ.
- **ದೀರ್ಘಕಾಲೀನ ಉಪಶಮನ:** ಕೇವಲ ತಾತ್ಕಾಲಿಕ ಆರಾಮಕ್ಕಷ್ಟೇ ಸೀಮಿತವಾಗದೆ, ದೀರ್ಘಕಾಲದ ನೋವು ಮುಕ್ತ ಜೀವನಕ್ಕಾಗಿ ರೂಪಿಸಲಾದ ಸುರಕ್ಷಿತ ಮಾರ್ಗವಿದು.
- **ಆಪರೇಷನ್‌ಗೆ ಸೂಕ್ತ ಪರ್ಯಾಯ:** ಶಸ್ತ್ರಚಿಕಿತ್ಸೆ (ಆಪರೇಷನ್) ಬೇಡ ಎನ್ನುವವರಿಗೆ, ಮತ್ತು ಆಪರೇಷನ್‌ಗೆ ಸೂಕ್ತವಲ್ಲದವರಿಗೆ ಈ ಚಿಕಿತ್ಸೆಯು ಒಂದು ದೊಡ್ಡ ವರದಾನ ವೆಂದೇ ಕರೆಯಬಹುದು.

ಈ ಚಿಕಿತ್ಸೆಯು Day Care Procedure ಆಗಿದ್ದು, ಅಂದರೆ ಚಿಕಿತ್ಸೆ ಪಡೆದ ದಿನವೇ ಡಿಸ್ಚಾರ್ಜ್ ಮಾಡಲಾಗುತ್ತದೆ.

ಪಿಆರ್‌ಪಿ ಚಿಕಿತ್ಸೆಯ ಲಾಭಗಳು
- ಆಸ್ಪತ್ರೆಯಲ್ಲಿ ಉಳಿಯಬೇಕಿಲ್ಲ
- 30-60 ನಿಮಿಷದ ಪ್ರಕ್ರಿಯೆ
- ಸ್ಟೀರಾಯ್ಡ್ ಬಳಕೆ ಇಲ್ಲ
- 48 ಗಂಟೆಯಲ್ಲಿ ಕೆಲಸಕ್ಕೆ ಮರಳಿ

ವಿಳಂಬವಿಲ್ಲದೆ ಇದೀಗಲೇ ಕರೆ ಮಾಡಿ ಡಾಕ್ಟರ್ ಅಪಾಯಿಂಟ್‌ಮೆಂಟ್ ಪಡೆದು, ನೋವುರಹಿತ ಪಯಣಕ್ಕೆ ಹೆಜ್ಜೆ ಇರಿಸಿ!

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿವೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು
ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ ದಾಸರಹಳ್ಳಿ
ಸದಾಶಿವನಗರ | ಜಯನಗರ
ಇಂದಿರಾನಗರ | ವೈಟ್‌ಫೀಲ್ಡ್
080 25256878
080 23614888

EDUCATION CORNER | *Special Feature*

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್ಮೆಂಟ್ ಹೊಸ ಡೀಮ್ಡ್ ವಿವಿ ಉದ್ಘಾಟನೆ

ಅಮೆರಿಕದ ಆಲ್ಬನಿ ವಿವಿ ಸಹಯೋಗ | ಕೌಶಲ, ಸಂಶೋಧನಾ ಶಿಕ್ಷಣಕ್ಕೆ ಒತ್ತು


ಆಲ್ಬನಿ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ಜತೆಗೂಡಿ ರಾಮಯ್ಯ ಸಮೂಹ ಸಂಸ್ಥೆಯು ಆರಂಭಿಸುತ್ತಿರುವ 'ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್ಮೆಂಟ್' ಗೆ ಗುರುವಾರ ಚಾಲನೆ ದೊರೆಯಿತು.

ಬೆಂಗಳೂರು: ಅಮೆರಿಕದಲ್ಲಿ ಪ್ರಸಿದ್ಧಿ ಪಡೆದಿರುವ ಆಲ್ಬನಿ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ಜತೆಗೂಡಿ ರಾಮಯ್ಯ ಸಮೂಹ ಸಂಸ್ಥೆಯು ಆರಂಭಿಸುತ್ತಿರುವ 'ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್ಮೆಂಟ್' ಗೆ ಅಧಿಕೃತವಾಗಿ ಗುರುವಾರ ಚಾಲನೆ ದೊರೆಯಿತು.

ಅಮೆರಿಕದಲ್ಲಿ ಸಾರ್ವಜನಿಕ ಮತ್ತು ಸಂಶೋಧನಾ ವಿಶ್ವವಿದ್ಯಾಲಯವಾಗಿ ಪ್ರಸಿದ್ಧಿ ಪಡೆದಿರುವ ಆಲ್ಬನಿಯಾ ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ವಿಜ್ಞಾನ, ತಂತ್ರಜ್ಞಾನವನ್ನು ಜಾಗತಿಕ ಮಟ್ಟದಲ್ಲಿ ಪೂರೈಸುವ ಹಿನ್ನೆಲೆಯಲ್ಲಿ ರಾಮಯ್ಯ ಸಮೂಹ ಸಂಸ್ಥೆಯು ಇದರೊಂದಿಗೆ ಕೈಜೋಡಿಸಿದೆ.

ಹೊಸದಾಗಿ ಆರಂಭಿಸುತ್ತಿರುವ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್ಮೆಂಟ್‌ಗೆ ಗುರುವಾರ ಖಾಸಗಿ ಹೋಟೆಲ್‌ನಲ್ಲಿ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮಾಜಿ ಸಚಿವ ಡಾ.ಎಂ.ಎಂ. ಪಲ್ಲಂರಾಜು, ನಿವೃತ್ತ ಐಎಎಸ್ ಅಧಿಕಾರಿ ಗುರುಚರಣ್ ಗೋಲೆರ್ಕರ್ ಹಾಗೂ ಗೋಕುಲ ಎಜುಕೇಷನ್ ಫೌಂಡೇಶನ್ (ಮೆಡಿಕಲ್) ಅಧ್ಯಕ್ಷರು ಹಾಗೂ ರಾಮಯ್ಯ ಕಾಲೇಜಿನ ಕುಲಪತಿ ಡಾ.ಎಂ.ಆರ್. ಜಯರಾಮ್ ಅಧಿಕೃತವಾಗಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ರಾಮಯ್ಯ ಕಾಲೇಜಿನ ಕುಲಪತಿ ಡಾ.ಎಂ.ಆರ್.ಜಯರಾಮ್, ''ಹೊಸದಾಗಿ ಆರಂಭಿಸುತ್ತಿರುವ ಈ ವಿಶ್ವವಿದ್ಯಾಲಯದ ಪ್ರಮುಖ ಉದ್ದೇಶ ಕೈಗಾರಿಕೆಗಳು ಮತ್ತು ಶಿಕ್ಷಣ ಸಂಸ್ಥೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದಾಗಿದೆ. ಯುವಕರಿಗೆ ಸಾಮಾನ್ಯ ಶಿಕ್ಷಣದ ಜೊತೆ ಕೌಶಲ ಶಿಕ್ಷಣವನ್ನು ನೀಡುತ್ತೇವೆ. ರಾಮಯ್ಯ ಶಿಕ್ಷಣ ಸಂಸ್ಥೆ ಮುಂದಿನ 5 ವರ್ಷದಲ್ಲಿ ಕೌಶಲ ಶಿಕ್ಷಣಕ್ಕಾಗಿಯೇ ಪ್ರತ್ಯೇಕ ವಿಶ್ವವಿದ್ಯಾಲಯ ಆರಂಭಿಸಲಿದೆ. ಈ ಬಗ್ಗೆ ಈಗಾಗಲೇ ಕಾರ್ಯ ಪ್ರಗತಿಯಲ್ಲಿದೆ. ಇಂತಹ ವೇಳೆಯಲ್ಲಿ ನಾವು ಅಮೆರಿಕದ ಪ್ರಮುಖ ವಿಶ್ವವಿದ್ಯಾಲಯದ ಜತೆ ಒಪ್ಪಂದ ಮಾಡಿಕೊಂಡಿರುವುದು ಮಹತ್ವದ ಮೈಲುಗಲ್ಲಾಗಿದೆ. ನಾವು ಪ್ರಾಯೋಗಿಕ ವಿಜ್ಞಾನ ಸಂಶೋಧನೆ ಕಡೆ ಹೆಚ್ಚು ಸಮಯವನ್ನು ನೀಡಲು ಇಚ್ಚಿಸುತ್ತಿದ್ದೇವೆ.'' ಎಂದರು.

ಆಲ್ಬನಿ ಸ್ಟೇಟ್ ಯುನಿವರ್ಸಿಟಿ ಆಫ್ ನ್ಯೂಯಾರ್ಕ್ ಅಧ್ಯಕ್ಷ ರೋಡ್ರಿಗಸ್ ಮಾತನಾಡಿ, ''ದೇಶದಲ್ಲೇ ವಿಶಿಷ್ಟ ಮತ್ತು ವಿಭಿನ್ನವಾದ ವಿಶ್ವವಿದ್ಯಾಲಯ ನಮ್ಮದಾಗಿದೆ. ನಮ್ಮ ಸಂಶೋಧನೆ ಮತ್ತು ರಾಮಯ್ಯ ವಿದ್ಯಾಸಂಸ್ಥೆಯ ಶಿಕ್ಷಣದ ಗುಣಮಟ್ಟ ಎರಡೂ ಸೇರಿಕೊಂಡು ಹೊಸದಾಗಿ ಕಾಲೇಜು ಆರಂಭಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಜಾಗತಿಕ ಮಟ್ಟದಲ್ಲಿ ಶಿಕ್ಷಣವನ್ನು ನೀಡಲಿದೆ. ಇದರಿಂದ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಗಲಿದೆ,'' ಎಂದರು.

> **ವಿದ್ಯಾರ್ಥಿಗಳನ್ನು ಉದ್ಯೋಗಿಗಳನ್ನಾಗಿ ಪರಿವರ್ತಿಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ. ದೇಶದಲ್ಲಿ 1,300ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಇದರಲ್ಲಿ ಕೇವಲ ಶೇ.50ಕ್ಕಿಂತ ಕಡಿಮೆ ವಿಶ್ವವಿದ್ಯಾಲಯಗಳು ಸಂಶೋಧನೆಯಲ್ಲಿ ತೊಡಗಿವೆ. ಇನ್ನೂ 30-40 ವಿಶ್ವವಿದ್ಯಾಲಯಗಳು ಮಾತ್ರವೇ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿವೆ. ಇಂತಹ ಸಂದರ್ಭದಲ್ಲಿ ನಮ್ಮ ವಿವಿಗಳು ಏನು ಮಾಡುತ್ತಿವೆ? ಎಂದು ಪ್ರಶ್ನೆ ಮಾಡಿಕೊಳ್ಳಬೇಕಿದೆ.**
> **- ಪ್ರೊ.ಬಿ.ಎನ್. ರಘುನಂದನ್**
> ಐಐಎಸ್ಸಿ ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗದ ಮಾಜಿ ಡೀನ್

> **ಭಾರತದಲ್ಲಿ ಈ ರೀತಿಯ ಹೊಸ ಪರಿಕಲ್ಪನೆ ಇಟ್ಟುಕೊಂಡಂತಹ ವಿಶ್ವವಿದ್ಯಾಲಯದ ಅವಶ್ಯಕತೆ ಇತ್ತು. ಇದನ್ನು ರಾಮಯ್ಯ ವಿವಿಯು ತೋರಿಸಿಕೊಟ್ಟಿದೆ. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಶಿಕ್ಷಣವನ್ನು ನೀಡುವ ಮೂಲಕ ಪದವೀಧರರಾಗಿ ಬಂದ ತಕ್ಷಣವೇ ಉದ್ಯೋಗ ದೊರೆಯುವಂತೆ ಮಾಡಬೇಕಿದೆ.**
> **- ವೆಂಕಟೇಶ್ ವಲ್ಲೂರಿ**
> ಉಪಾಧ್ಯಕ್ಷ, ರಾಮಯ್ಯ ಅಕಾಡೆಮಿ

ಚಂಪಾ ಸಿರಿಗನ್ನಡ ಪ್ರಶಸ್ತಿಗೆ ಸಾ.ರಾ. ಗೋವಿಂದು ಆಯ್ಕೆ

ಬೆಂಗಳೂರು: ಕರ್ನಾಟಕ ಸ್ವಾಭಿಮಾನಿ ವೇದಿಕೆಯು ಕೊಡಮಾಡುವ 2026ನೇ ಸಾಲಿನ ಚಂಪಾ ಸಿರಿಗನ್ನಡ ಪ್ರಶಸ್ತಿಗೆ ಕನ್ನಡ ಹೋರಾಟಗಾರ ಸಾ.ರಾ. ಗೋವಿಂದು ಆಯ್ಕೆಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಜೂ. 20ರ ಸಂಜೆ 4 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಸಾಹಿತಿ ಡಾ. ಎಸ್.ಜಿ. ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ. ಜಯಮಾಲಾ, ಪ್ರೊ. ಚಂಪಾ ಅವರ ಪುತ್ರಿ ಮೀನಾ ಪಾಟೀಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕನ್ನಡ ಹೋರಾಟಗಾರ ಸಿ.ಕೆ. ರಾಮೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಶಸ್ತಿಯು 10 ಸಾವಿರ ರೂ. ನಗದು, ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರಲಿದೆ ಎಂದು ಕರ್ನಾಟಕ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಶಂಕರ್ ಮೂಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನ್ನಪೂರ್ಣೇಶ್ವರಿ ದೇಗುಲ ವಾರ್ಷಿಕೋತ್ಸವ ಇಂದಿನಿಂದ

ಬೆಂಗಳೂರು: ಬನಶಂಕರಿ ಮೂರನೇ ಹಂತ ವೀರಭದ್ರನಗರ (100 ಅಡಿ ವರ್ತುಲ ರಸ್ತೆ) ದ ಅನ್ನಪೂರ್ಣೇಶ್ವರಿ ದೇವಾಲಯ

ಸೇವಾ ಟ್ರಸ್ಟ್ ವತಿಯಿಂದ ಅನ್ನಪೂರ್ಣೇಶ್ವರಿ ದೇವಾಲಯದ 4ನೇ ವಾರ್ಷಿಕೋತ್ಸವ ಶುಕ್ರವಾರದಿಂದ ಭಾನುವಾರದವರೆಗೆ ನಡೆಯಲಿದೆ.

ಶುಕ್ರವಾರ ಸಂಜೆ 4.30ಕ್ಕೆ ದೇವಾಲಯದಲ್ಲಿ ಗಂಗಾ, ಭಾಗೀರಥಿ ಪೂಜೆ ಹಾಗೂ ಗೋಪೂಜೆಯೊಂದಿಗೆ ದೇವಾಲಯ ಪ್ರವೇಶ, ನಂತರ ಸಂಕಲ್ಪ ಗಣಪತಿ ಪೂಜೆ, ಪುಣ್ಯಾಹ, ದೇವಾ ನಂದಿ ಧ್ವಜಾರೋಹಣ, ನವಗ್ರಹ ಶಾಂತಿ ಕಳಸ ಸ್ಥಾಪನೆ, ಗಣಪತಿ ಹೋಮ, ನವಗ್ರಹ ಹೋಮ, ವಾಸ್ತು ಶಾಂತಿ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶನಿವಾರ ಬೆಳಗ್ಗೆ 7ಕ್ಕೆ ಅನ್ನಪೂರ್ಣೇಶ್ವರಿ ಅಮ್ಮನವರಿಗೆ ಫಲ ಪಂಚಾಮೃತ ಅಭಿಷೇಕ, ಶ್ರೀ ಸೂಕ್ತ ಸಮೇತ ಹರಿದ್ರಾ ಕುಂಕುಮ ಅಭಿಷೇಕ, ವಿಶೇಷ ಪುಷ್ಪಲಂಕಾರ ಮಾಡಲಾಗುವುದು. ಬೆಳಗ್ಗೆ 8.30ಕ್ಕೆ ಮಹಾಸಂಕಲ್ಪದೊಂದಿಗೆ ಸುಬ್ರಹ್ಮಣ್ಯ ಹೋಮ, ಅನ್ನಪೂರ್ಣ ಹೋಮ, ಅಷ್ಟಲಕ್ಷ್ಮಿ ಹೋಮ, ಬಲಿಹರಣ, ಅಷ್ಟಾವಧಾನ ಸೇವೆ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಮಧ್ಯಾಹ್ನ 3ಕ್ಕೆ ಮುಖ್ಯಬೀದಿಗಳಲ್ಲಿ ಅನ್ನಪೂರ್ಣೇಶ್ವರಿ ಅಮ್ಮನವರ ಸಮೇತ ಶನೇಶ್ವರ ಸ್ವಾಮಿ ಮತ್ತು ಮುನೇಶ್ವರ ಸ್ವಾಮಿ ದೇವರ ಮೆರವಣಿಗೆ ನಡೆಯಲಿದೆ. ಭಾನುವಾರ ಬೆಳಗ್ಗೆ 6ಕ್ಕೆ ಶನೇಶ್ವರ ಸ್ವಾಮಿಗೆ ಎಳ್ಳಿನ ಆರತಿ ಹಾಗೂ ಮುನೇಶ್ವರ ಸ್ವಾಮಿಗೆ ತಂಬಿಟ್ಟು ಆರತಿಯೊಂದಿಗೆ ಅಗ್ನಿಕೊಂಡ ಪ್ರವೇಶ ನಡೆಯಲಿದೆ ಎಂದು ಟ್ರಸ್ಟ್‌ನ ಪದಾಧಿಕಾರಿಗಳು ತಿಳಿಸಿದ್ದಾರೆ.

ಭವಿಷ್ಯದ ಸವಾಲು ಎದುರಿಸಲು ಪೂರಕ | ಜಲ ಭದ್ರತೆಯ ಮಾದರಿ ನಗರವನ್ನಾಗಿ ಪರಿವರ್ತಿಸುವ ಉದ್ದೇಶ

ಬಿ-ಗ್ವಿನ್ ಜಾಲ ಸ್ಥಾಪನೆಗೆ ಜಲಮಂಡಳಿ ಚಿಂತನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಜಾಗತಿಕ ಜಲ ನಾವೀನ್ಯತಾ ಜಾಲ (Bangalore global water innovation network-ಬಿ-ಗ್ವಿನ್) ಸ್ಥಾಪನೆ ಮೂಲಕ ಭವಿಷ್ಯದ ಸವಾಲುಗಳನ್ನು ಎದುರಿಸುವುದು ಮತ್ತು ಸುಸ್ಥಿರ ನಗರಾಭಿವೃದ್ಧಿಗೆ ಪೂರಕ ವ್ಯವಸ್ಥೆ ಕಲ್ಪಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಂತನೆ ನಡೆಸಿದೆ.

ಇದು ಜಲ ಮತ್ತು ಒಳಚರಂಡಿ ವಲಯದ ಸವಾಲುಗಳನ್ನು ಎದುರಿಸಲು ಜಗತ್ತಿನ ಜಲ ನಿರ್ವಹಣಾ ಸಂಸ್ಥೆಗಳು, ಸರಕಾರಿ ಸಂಸ್ಥೆಗಳು, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ಕೈಗಾರಿಕಾ ನಾಯಕರು, ಸ್ಟಾರ್ಟಪ್‌ಗಳು, ಇನ್‌ಕ್ಯುಬೇಟರ್‌ಗಳು ಹಾಗೂ ನಾಗರಿಕ ಸಮಾಜವನ್ನು ಒಂದೇ ಸೂರಿನಡಿ ತರುವ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಬೆಂಗಳೂರನ್ನು ಜಲ ನಾವೀನ್ಯತೆ ಕೇಂದ್ರ ಮತ್ತು ಜಲ ಭದ್ರತೆಯ ಮಾದರಿ ನಗರವನ್ನಾಗಿ ಪರಿವರ್ತಿಸುವುದು ಇದರ ದೃಷ್ಟಿಕೋನವಾಗಿದೆ.

ಈ ಸಮಗ್ರ ಯೋಜನೆಯು ಶುದ್ಧ ನೀರು, ಸುಸ್ಥಿರ ಇಂಧನ ಮತ್ತು ಸುರಕ್ಷಿತ ನಗರ ಸಮುದಾಯಗಳ ನಿರ್ಮಾಣಕ್ಕೆ ಒತ್ತು ನೀಡುವ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಾದ ಎಸ್‌ಡಿಜಿ 6, 7 ಮತ್ತು 11ಕ್ಕೆ ನೇರವಾಗಿ ಪೂರಕವಾಗಿರಲಿದೆ. ಅತ್ಯಾಧುನಿಕ 'ಉತ್ಕೃಷ್ಟತಾ ಕೇಂದ್ರದಡಿ (ಸೆಂಟರ್ ಆಫ್ ಎಕ್ಸಲೆನ್ಸ್) ತಂತ್ರಜ್ಞಾನ ನಾವೀನ್ಯತಾ ಹಬ್ ಸ್ಥಾಪಿಸಲಾಗುವುದು. ಈ ಕೇಂದ್ರವು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಮುನ್ಸೂಚನಾ ವಿಶ್ಲೇಷಣೆ, ಸ್ಮಾರ್ಟ್ ಮೀಟರಿಂಗ್ ಮತ್ತು ವಿಕೇಂದ್ರಿಕೃತ ನೀರು ಸಂಸ್ಕರಣಾ ವ್ಯವಸ್ಥೆಗಳ ಸುಧಾರಿತ ಸಂಶೋಧನೆಗೆ ಅವಕಾಶ ಕಲ್ಪಿಸಲಿದೆ. ಒಟ್ಟಾರೆ ಕುಡಿಯುವ ನೀರಿನ ಶುದ್ಧೀಕರಣ ಮತ್ತು ಮರುಬಳಕೆ ತಂತ್ರಜ್ಞಾನವನ್ನು ಆವಿಷ್ಕರಿಸಲಿದೆ.

ನಗರದಾದ್ಯಂತ ದೊಡ್ಡ ಪ್ರಮಾಣದಲ್ಲಿ ಹೊಸ ತಂತ್ರಜ್ಞಾನ ಅಳವಡಿಸುವ ಮೊದಲು ಪ್ರಾಯೋಗಿಕ ಯೋಜನೆ ನಡೆಸಿ, ಕಾರ್ಯಕ್ಷಮತೆ ಮೌಲೀಕರಿಸುವುದು ಇದರ ಕಾರ್ಯತಂತ್ರವಾಗಿದೆ. ಇದರಿಂದ ಜಲಮಂಡಳಿಯ ಬಂಡವಾಳ ಅಪಾಯ ತಗ್ಗಿ, ರಾಯಲ್ಟಿ ಮತ್ತು ಲೈಸೆನ್ಸ್ ಆದಾಯ ಗಳಿಕೆಗೆ ಜಲಮಂಡಳಿಗೆ ಹೊಸ ದಾರಿ ದೊರಕಲಿದೆ. ಅಲ್ಲದೆ, ಜಲ ವಲಯದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಕೌಶಲ ವೃದ್ಧಿ ಮತ್ತು ಜ್ಞಾನ ಹೆಚ್ಚಿಸಿಕೊಳ್ಳಲು ಅನುಕೂಲವಾಗಲಿದೆ.

ಹವಾಮಾನ ವೈಪರೀತ್ಯಕ್ಕೆ ತಕ್ಕಂತೆ ಹೊಂದಿಕೊಳ್ಳುವಿಕೆ, ಸರ್ಕುಲರ್ ಎಕಾನಮಿ (Circular Economy) ಮತ್ತು ಡಿಜಿಟಲ್ ಟ್ರಾನ್ಸ್ ಫಾರ್ಮೇಷನ್‌ನಂತಹ ತಾಂತ್ರಿಕ ಹಾಗೂ ಆಡಳಿತಾತ್ಮಕ ಅಂಶ ಒಳಗೊಂಡಿರುತ್ತದೆ. ಸುಸಜ್ಜಿತ ಡಿಜಿಟಲ್ ಪ್ಲಾಟ್‌ಫಾರ್ಮ್ ತಂತ್ರಜ್ಞಾನ ಸಿದ್ಧವಾಗಲಿದೆ. ಹೀಗೆ, ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಜಾಗತಿಕ ಪಾಲುದಾರಿಕೆಯ ಮೂಲಕ ಮುಂಬರುವ ಪೀಳಿಗೆಗೆ ಸುಸ್ಥಿರ ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸಲು ಜಲಮಂಡಳಿ ಮುಂದಾಗಿದೆ.

ಸುರಕ್ಷಿತ ಜಲ ಭವಿಷ್ಯವೇ ಬೆಂಗಳೂರಿನಂತಹ ಬಲಿಷ್ಠ ಮಹಾನಗರದ ತಳಪಾಯ. 'ಬಿ-ಗ್ವಿನ್' ಜಾಲದ ಸ್ಥಾಪನೆಯ ಮೂಲಕ ಜಲ ನಿರ್ವಹಣೆಯಲ್ಲಿ ಜಾಗತಿಕ ನಾವೀನ್ಯತಾ ಕೇಂದ್ರವಾಗಿ ರೂಪಿಸುತ್ತಿದ್ದು, ಇದು ನಮ್ಮ 'ಬ್ರ್ಯಾಂಡ್ ಬೆಂಗಳೂರು' ಕನಸನ್ನು ಸಾಕಾರಗೊಳಿಸುವ ಐತಿಹಾಸಿಕ ಹೆಜ್ಜೆಯಾಗಿದೆ.

- ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ

ಬೆಂಗಳೂರನ್ನು ಜಾಗತಿಕ ಜಲ-ಭದ್ರತೆಯ ಮಾದರಿ ನಗರವಾಗಿ ರೂಪಿಸುವುದೇ ಪ್ರಮುಖ ಗುರಿ. 'ಬಿ-ಗ್ವಿನ್' ಮೂಲಕ ಯುವ ಸ್ಟಾರ್ಟಪ್‌ಗಳು ಮತ್ತು ಜಾಗತಿಕ ತಂತ್ರಜ್ಞಾನಗಳ ಪ್ರಾಯೋಗಿಕ ಅಳವಡಿಕೆಗೆ ಬೆಂಗಳೂರು ಅತ್ಯುತ್ತಮ ತಾಣವಾಗಲಿದೆ. ಇದು ಕೇವಲ ತಂತ್ರಜ್ಞಾನದ ಅಳವಡಿಕೆಯಲ್ಲ, ಬದಲಾಗಿ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಪೂರಕವಾಗಿ ಮುಂದಿನ ಪೀಳಿಗೆಗೆ ಸುರಕ್ಷಿತ ಮತ್ತು ಸುಸ್ಥಿರ ಜಲ ಭವಿಷ್ಯ ನಿರ್ಮಿಸುವ ನಮ್ಮ ಬದ್ಧತೆಯಾಗಿದೆ.

- ಡಾ. ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ

ಹಳದಿ ಮಾರ್ಗದಿಂದ ಜನರ ಆರೋಗ್ಯ ಸುಧಾರಣೆ: ಐಐಎಸ್ಸಿ

■ **ವಿಕ ಸುದ್ದಿಲೋಕ** ಬೆಂಗಳೂರು

ನಮ್ಮ ಮೆಟ್ರೊ ಹಳದಿ ಮಾರ್ಗವು ಜನರನ್ನು ವಾಯುಮಾಲಿನ್ಯದಿಂದ ಕಾಪಾಡುತ್ತಿದ್ದು, ಪಿಎಂ 2.5 ಮಾಲಿನ್ಯಕಾರಕ ಕಣಗಳಿಂದ ರಕ್ಷಿಸುವಲ್ಲಿ ನೆರವಾಗುತ್ತಿದೆ ಹಾಗೂ ಪರೋಕ್ಷವಾಗಿ ಜನರ ದೈಹಿಕ ಚಟುವಟಿಕೆಗೂ ಪೂರಕವಾಗಿ ಆರೋಗ್ಯ ಕಾಪಾಡುತ್ತಿದೆ.

ಬಯೋಕಾನ್ ಗ್ರೂಪ್‌ನ ಸಹಯೋಗದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಸುಸ್ಥಿರ ಸಾರಿಗೆ ಪ್ರಯೋಗಾಲಯ ನಡೆಸಿದ ಅಧ್ಯಯನ ವರದಿ ಈ ಅಂಶವನ್ನು ಬಹಿರಂಗಪಡಿಸಿದೆ.

ಆರ್.ವಿ.ರಸ್ತೆ-ಬೊಮ್ಮಸಂದ್ರ ಸಂಪರ್ಕಿಸುವ ಹಳದಿ ಮಾರ್ಗ ಸುಗಮ ಸಂಚಾರಕ್ಕೆ ಮಾತ್ರವಲ್ಲದೆ, ಜನರ ಆರೋಗ್ಯ ಕಾಪಾಡುತ್ತಿದೆ ಎಂದು 'ಆರೋಗ್ಯ ಮತ್ತು ಜೀವನದ ಗುಣಮಟ್ಟದ ಮೇಲೆ ಮೆಟ್ರೊ ಹಳದಿ ಮಾರ್ಗದ ಸಮೂಹ ಕ್ಷಿಪ್ರ ಸಾರಿಗೆ (ಎಂಆರ್‌ಟಿ) ವ್ಯವಸ್ಥೆಯ ಪ್ರಭಾವದ ಮೌಲ್ಯಮಾಪನ; ನಗರದ ಸುಸ್ಥಿರ ಸಂಚಾರ ಗ್ರಹಿಕೆ' ಅಧ್ಯಯನ ವರದಿ ಹೇಳಿದೆ.

'ಐಐಎಸ್ಸಿ' ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ ಪ್ರೊ. ಆಶಿಶ್ ವರ್ಮಾ ನೇತೃತ್ವದ ತಂಡವು ಈ ಅಧ್ಯಯನ ನಡೆಸಿದೆ.

ಶೇ 83 ಮಂದಿ ಒಲವು: ನಗರದಲ್ಲಿ ಮೆಟ್ರೊ ಸೌಲಭ್ಯ ಬಳಸಿಕೊಳ್ಳಲು ಹೆಚ್ಚಿನ ಒಲವು ತೋರಿದ್ದಾರೆ. ಸಮೀಕ್ಷೆಗೆ ಪ್ರತಿಕ್ರಿಯಿಸಿದವರಲ್ಲಿ ಶೇ. 83ರಷ್ಟು ಮಂದಿ ತಮ್ಮ ದಿನನಿತ್ಯದ ಅಗತ್ಯದ ಸಂಚಾರಕ್ಕೆ ಇತರೆ ಸಾರಿಗೆ ವಿಧಾನಗಳ ಬದಲಿಗೆ ಹಳದಿ ಮಾರ್ಗದ ಮೆಟ್ರೊದಲ್ಲಿ ಓಡಾಡಲು ಇಚ್ಛಿಸಿದ್ದಾರೆ. ಜತೆಗೆ, ಮೆಟ್ರೊ ನಿಲ್ದಾಣಕ್ಕೆ ನಡೆದು ಹೋಗುವುದರಿಂದ ದೈಹಿಕ ಚಟುವಟಿಕೆಯೂ ಆದಂತಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಮೆಟ್ರೊ ಹಳದಿ ಮಾರ್ಗವು ಜನರ ಆರೋಗ್ಯ ಕಾಪಾಡುತ್ತಿದ್ದು, ಪೂರ್ಣಪ್ರಮಾಣದಲ್ಲಿ ರೈಲುಗಳ ಮೂಲಕ ಈ ಮಾರ್ಗ ಕಾರ್ಯಾಚರಣೆಯಾಗಬೇಕು. ವರದಿಯ ಶಿಫಾರಸುಗಳನ್ನು ಜಾರಿಗೆ ತಂದರೆ ಅನುಕೂಲ.

- ಪ್ರೊ. ಆಶಿಶ್ ವರ್ಮಾ ಪ್ರಮುಖ ಸಂಶೋಧಕರು, ಐಐಎಸ್ಸಿ ಸುಸ್ಥಿರ ಸಾರಿಗೆ ಪ್ರಯೋಗಾಲಯ

ಶೇ. 58ರಷ್ಟು ಜನರು ವ್ಯಾಯಾಮ ಮಾಡುತ್ತಿರಲಿಲ್ಲ. ಹೀಗಾಗಿ, ಅಧಿಕ ರಕ್ತದೊತ್ತಡ ಶೇ.15, ಮಧುಮೇಹ ಶೇ.18 ಮತ್ತು ಉಸಿರಾಟದ ಕಾಯಿಲೆಗಳಿಂದ ಶೇ.4.6ರಷ್ಟು ಜನ ಬಳಲುತ್ತಿದ್ದರು. ಮೆಟ್ರೊಗಾಗಿ ಪ್ರತಿದಿನ ಎರಡು ಬಾರಿ ಸುಮಾರು 10-15 ನಿಮಿಷಗಳ ನಡಿಗೆ ಮಾಡಲಾಗುತ್ತಿದೆ. ಇದು ವಾರಕ್ಕೆ 50-75 ನಿಮಿಷಗಳ ಹೆಚ್ಚುವರಿ ಮಧ್ಯಮ ದೈಹಿಕ ಚಟುವಟಿಕೆಗೆ ದಾರಿಮಾಡಿಕೊಟ್ಟಿದೆ ಎಂದು ತಿಳಿಸಿದೆ.

ಜತೆಗೆ, ಮೆಟ್ರೊ ಪ್ರಯಾಣದಿಂದ ಪಾದಚಾರಿಗಳು ಮತ್ತು ದ್ವಿಚಕ್ರ ವಾಹನ ಸವಾರರು ಪಿಎಂ 2.5 ಮಾಲಿನ್ಯಕಾರಕ ಕಣಗಳಿಂದ ಬಚಾವಾಗುತ್ತಿದ್ದಾರೆ. ಹವಾನಿಯಂತ್ರಿತ, ಮುಚ್ಚಿದ ವಾತಾವರಣದಲ್ಲಿ ಪ್ರಯಾಣಿಸುವುದರಿಂದ ಹೊರಾಂಗಣ ಮಾಲಿನ್ಯಕ್ಕೆ ತುತ್ತಾಗುವ ಪ್ರಮಾಣ ಶೂನ್ಯಕ್ಕೆ ಇಳಿದಿದೆ. ಮುಖ್ಯವಾಗಿ ಕಡಿಮೆ ಆಯಾಸ, ದೈನಂದಿನ ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧ್ಯವಾಗಿದೆ. ಜತೆಗೆ, ಅಪಘಾತದ ಆತಂಕವೂ ಇಲ್ಲ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡವರು ಹೇಳಿದ್ದಾರೆ.

ಶಿಫಾರಸು: ಮೆಟ್ರೊ ಹಾಗೂ ನಗರ ಸಾರಿಗೆ ಬಸ್ ನಿಲ್ದಾಣಗಳ ಮಧ್ಯೆ ಸಂಪರ್ಕ ಕಲ್ಪಿಸುವ ಫೀಡರ್ ಸೇವೆಗಳನ್ನು ಹೆಚ್ಚಿಸಬೇಕು. ಕೊನೆಯ ಮೈಲಿ ಸಂಪರ್ಕ ಬಲಪಡಿಸಲು ಕ್ರಮ ವಹಿಸಬೇಕು. ಪಾದಚಾರಿ ಮಾರ್ಗದ ಮೂಲಸೌಕರ್ಯ ನವೀಕರಿಸಬೇಕು, ದುಬಾರಿ ದರ ಇಳಿಸಬೇಕು ಎಂದು ವರದಿ ಶಿಫಾರಸು ಮಾಡಿದೆ.

30 ಸಾವಿರ ರೂ. ಗಿಂತ ಕಡಿಮೆ ಆದಾಯ ಇರುವವರಿಗೆ ಇದು ಹೊರೆಯಾಗುತ್ತಿದೆ. ಕೆಲವೆಡೆ ಬೈಕ್, ಕಾರು ಬಳಸುವುದೇ ಮೆಟ್ರೊ ದರಕ್ಕಿಂತ ಅಗ್ಗವಾಗುತ್ತಿದೆ. ಹೀಗಾಗಿ, ದರ ಕಡಿಮೆ ಮಾಡಬೇಕು ಎಂದು ಐಐಎಸ್ಸಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

ವರ್ಲ್ಡ್ ಆಫ್ ಹಾಸ್ಪಿಟಾಲಿಟಿ ವಸ್ತು ಪ್ರದರ್ಶನಕ್ಕೆ ಚಾಲನೆ

ಬೆಂಗಳೂರು: 'ವರ್ಲ್ಡ್ ಆಫ್ ಹಾಸ್ಪಿಟಾಲಿಟಿ' ಸಂಸ್ಥೆಯ ಬಹುನಿರೀಕ್ಷಿತ ಬೆಂಗಳೂರು ಆವೃತ್ತಿಯ ವಸ್ತುಪ್ರದರ್ಶನಕ್ಕೆ ಗುರುವಾರ ಚಾಲನೆ ಸಿಕ್ಕಿದ್ದು, ಶನಿವಾರದವರೆಗೆ ನಡೆಯಲಿದೆ.

ಆತಿಥ್ಯ ತಂತ್ರಜ್ಞಾನ, ಅಡುಗೆಮನೆ ಉಪಕರಣ, ಬೇಕರಿ ಮತ್ತು ಸಿಹಿತಿಂಡಿ ಉದ್ಯಮ, ಆಹಾರ ಮತ್ತು ಪಾನೀಯ, ಒಳಾಂಗಣ ವಿನ್ಯಾಸ, ಸ್ವಚ್ಛತಾ ನಿರ್ವಹಣೆ, ಭೋಜನ ಸಾಮಗ್ರಿ, ಶೈತ್ಯೀಕರಣ ಉಪಕರಣ, ಪೀಠೋಪಕರಣ ಹಾಗೂ ಹೋಟೆಲ್ ಸರಬರಾಜು ವಲಯದ ವೈವಿಧ್ಯಮಯ ಮಳಿಗೆಗಳು ಪ್ರದರ್ಶನದಲ್ಲಿ ಇರಲಿವೆ.

ವಾಣಿಜ್ಯ ಸಭೆಗಳು, ಖರೀದಿದಾರ ಮತ್ತು ಮಾರಾಟಗಾರರ ಸಂವಾದಗಳು, ಹೊಸ ಉತ್ಪನ್ನಗಳ ಬಿಡುಗಡೆ ಮತ್ತು ಆತಿಥ್ಯ ರಂಗದ ಪ್ರಮುಖ ಗಣ್ಯರನ್ನು ಒಳಗೊಂಡ ಚರ್ಚಾಗೋಷ್ಠಿಗಳಿಗೆ ಮೇಳವು ಸಾಕ್ಷಿಯಾಗಲಿದೆ.

'ಉದ್ಯಮದ ಪಾಲುದಾರರು ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು, ಹೊಸ ಆವಿಷ್ಕಾರಗಳನ್ನು ಅನ್ವೇಷಿಸಲು, ಸಹಭಾಗಿತ್ವವನ್ನು ಬೆಳೆಸಲು ವೇದಿಕೆಯನ್ನು ಸೃಷ್ಟಿಸುವುದು ನಮ್ಮ ಗುರಿಯಾಗಿದೆ,'' ಎಂದು ಆಯೋಜಕರು ತಿಳಿಸಿದ್ದಾರೆ.

ಪತಿ ಕೊಂದ ಚಾಲಾಕಿ ಬಂಧನ

ತಾನೇ ಪೊಲೀಸರಿಗೆ ದೂರು ನೀಡಿದ್ದ ಹಂತಕಿ | **ಪ್ರಿಯತಮೆ ಸಲುವಾಗಿ ಗೆಳೆಯನ ಕೊಂದ**

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರಿಯಕರನ ಜತೆ ಸೇರಿ ಪತಿಯನ್ನು ಕೊಂದಿದ್ದ ಮಹಿಳೆ ತಾನೇ ಗಂಡನ ನಾಪತ್ತೆ ಬಗ್ಗೆ ದೂರು ನೀಡಿ ಪೊಲೀಸರಿಗೆ ಸಿಕ್ಕಿಬಿದ್ದಿರುವ ಘಟನೆ ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೊಲೆಪಾತಕಗಳಾದ ಅರ್ಚನಾ, ಈಕೆಯ ಪ್ರಿಯಕರ ಪುಷನ್ ಪಾಲ್ ಈಗ ಪೊಲೀಸರ ಅತಿಥಿಗಳಾಗಿದ್ದಾರೆ. ಅನೈತಿಕ ಸಂಬಂಧಕ್ಕೆ ಅಡ್ಡಿ ಕಾರಣಕ್ಕೆ ತನ್ನ ಗಂಡ ಅಭಿಜಿತ್ ಪಂಡಿತ್ (25)ನನ್ನು ಮೇ 27ರಂದು ಪುಷನ್ ಜತೆಗೂಡಿ ಅರ್ಚನಾ ಕೊಲೆ ಮಾಡಿಸಿದ್ದಳು. ಪಶ್ಚಿಮ ಬಂಗಾಳದ ಅಭಿಜಿತ್ ಹಾಗೂ ತ್ರಿಪುರಾದ ಪುಷನ್ ಪಾಲ್, ರಾಜಾನುಕುಂಟೆ ಪತ್ರಿರದ ಖಾಸಗಿ ವಿಲ್ಲಾದಲ್ಲಿ ಕಾವಲುಗಾರರಾಗಿ ಕೆಲ ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಇದೇ ವಿಲ್ಲಾದಲ್ಲಿ ಮನೆಕೆಲಸ ಮಾಡುತ್ತಿದ್ದ ಅರ್ಚನಾಳನ್ನು ಅಭಿಜಿತ್ ಪ್ರೀತಿಸಿ 3 ವರ್ಷಗಳ ಹಿಂದೆ ಮದುವೆಯಾಗಿದ್ದ. ದಂಪತಿ ಇಟಗಲ್‌ಪುರದ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು.

ಪ್ರೀತಿ ಕೊಂದ ಗೆಳೆಯ, ಹೆಂಡ್ತಿ: ಇತ್ತೀಚೆಗೆ ತನ್ನ ಗಂಡನ ಸ್ನೇಹಿತ ಪುಷನ್ ಜತೆ ಅರ್ಚನಾಗೆ ಆತ್ಮೀಯತೆ ಬೆಳೆದಿತ್ತು. ಈ ವಿಚಾರ ಗೊತ್ತಾದ ಬಳಿಕ ಅಭಿಜಿತ್ ವಿರೋಧ ವ್ಯಕ್ತಪಡಿಸಿ ಪತ್ನಿಯನ್ನು ತರಾಟೆಗೆ ತೆಗೆದುಕೊಂಡಿದ್ದ. ಇದರಿಂದ ಸಿಟ್ಟಾದ ಅರ್ಚನಾ ತನ್ನ ಗಂಡನನ್ನು ಕೊಂದರೆ ಪ್ರಿಯಕರ ಪುಷನ್ ಜತೆ ಸುಖವಾಗಿರಬಹುದು ಎಂದು ಆಲೋಚನೆ ಮಾಡಿದ್ದಳು. ಅದರಂತೆ ತನ್ನ ಗಂಡನನ್ನು ಮುಗಿಸುವಂತೆ ಪುಷನ್‌ಗೆ ಸೂಚಿಸಿದ್ದಳು.

ಪ್ರಿಯತಮೆ ಮಾತು ಕೇಳಿದ ಪುಷನ್ ತನ್ನ ಜತೆಗಾರರಿಗೆ ವಿಚಾರ ತಿಳಿಸಿ ಕೃತ್ಯಕ್ಕೆ ಒಪ್ಪಿಸಿದ್ದ. ಮೇ 27ರಂದು ಮುತ್ತಗನೂರು ಸಮೀಪದ ನಿರ್ಜನ ಪ್ರದೇಶಕ್ಕೆ ಅಭಿಜಿತ್‌ನನ್ನು ಕರೆದೊಯ್ದು ಉಸಿರುಗಟ್ಟಿಸಿ ಕೊಂದಿದ್ದರು. ನಂತರ ಮೃತದೇಹವನ್ನು ಅದೇ ಊರಿನ ಕೆರೆ ದಂಡೆಯಲ್ಲಿ ಬಿಸಾಡಿ ಪರಾರಿಯಾಗಿದ್ದರು ಎಂದು ಪೊಲೀಸರು ತಿಳಿಸಿದರು.

ಸಿಕ್ಕಿಬಿದ್ದದ್ದು ಹೇಗೆ?

ಮೇ 28ರಂದು ತನಗೆ ಏನೂ ಗೊತ್ತಿಲ್ಲದಂತೆ ಪೊಲೀಸ್ ಠಾಣೆಗೆ ತೆರಳಿದ್ದ ಅರ್ಚನಾ, ಗಂಡನ ನಾಪತ್ತೆ ಬಗ್ಗೆ ದೂರು ನೀಡಿದ್ದಳು. ಪೊಲೀಸರು ತನಿಖೆ ಚುರುಕುಗೊಳಿಸಿ ಕೆರೆದಂಡೆ ಮೇಲೆ ಬಿದ್ದಿದ್ದ ಮೃತದೇಹ ಪತ್ತೆ ಹಚ್ಚಿ ಅಭಿಜಿತ್‌ನ ಸ್ನೇಹ ವಲಯದ ಬಗ್ಗೆ ಮಾಹಿತಿ ಕೆದಕಿದ್ದರು. ಕೆಲವು ಸ್ನೇಹಿತರನ್ನು ಕರೆಸಿ ಅಭಿಜಿತ್ ಬಗ್ಗೆ ವಿಚಾರಿಸಿದಾಗ ಅರ್ಚನಾ ಹಾಗೂ ಪುಷನ್ ಪ್ರಣಯ ಕಥೆಯೂ ಹೊರಬಂದಿತ್ತು. ಈ ಅನುಮಾನದ ಮೇರೆಗೆ ಪುಷನ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಪ್ರಿಯತಮೆ ಜತೆಗೂಡಿ ಸ್ನೇಹಿತ ಅಭಿಜಿತ್‌ನನ್ನು ಕೊಂದಿದ್ದ ಸತ್ಯ ಒಪ್ಪಿಕೊಂಡಿದ್ದ. ಹೀಗಾಗಿ, ಕೊಲೆಪಾತಕಿ ಅರ್ಚನಾಳನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಮತ್ತಿಬ್ಬರು ಶಾಮೀಲಾಗಿರುವ ಅನುಮಾನವಿದ್ದು, ಬಂಧನಕ್ಕೆ ಕ್ರಮ ವಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಪ್ರಾಯೋಗಿಕ ಶಿಕ್ಷಣಕ್ಕೆ ಆದ್ಯತೆ ಅಗತ್ಯ'

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ 'ಪ್ರಾಜೆಕ್ಟ್ ಪ್ರದರ್ಶನ' ಎಲ್ಲರ ಗಮನಸೆಳೆಯಿತು.

ಮತ್ತಿಕೆರೆಯ ಕಾಲೇಜಿನ ಆವರಣದಲ್ಲಿ ನಡೆದ ಕಾರ್ಯಕ್ರಮ ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆ ಸೃಷ್ಟಿಸಿತು. ಎಂಜಿನಿಯರಿಂಗ್ ಜತೆಗೆ, ಉದ್ಯೋಗಕ್ಕೆ ಸಜ್ಜಾಗುತ್ತಿರುವ 17 ವಿಭಾಗಗಳ ವಿದ್ಯಾರ್ಥಿಗಳು 150 ಮಳಿಗೆಗಳಲ್ಲಿ 446 ವಿವಿಧ ಮಾದರಿಗಳನ್ನು ಪ್ರದರ್ಶಿಸಿದರು.

ಆರ್.ಐ.ಟಿ.ಯ ಹಳೆಯ ವಿದ್ಯಾರ್ಥಿ ಹಾಗೂ ಗ್ಲೋಬಲ್ ಇನ್ಸ್ ಕಂಪನಿ ಸಿಇಒ ಸುಹಾಸ್ ಗೋಪಿನಾಥ್, ಗೋಕುಲ ಎಜುಕೇಷನ್ ಫೌಂಡೇಷನ್‌ನ ಉಪಾಧ್ಯಕ್ಷ ಎಂ.ಆರ್.ಜಾನಕಿರಾಮ್ ಮತ್ತು ಆರ್.ಐ.ಟಿ. ನಿರ್ದೇಶಕ ಎಂ. ಆರ್.ಕೋದಂಡರಾಮ್ 'ಪ್ರಾಜೆಕ್ಟ್ ಪ್ರದರ್ಶನ'ಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸುಹಾಸ್ ಗೋಪಿನಾಥ್, ''ಕೃತಕ ಬುದ್ಧಿಮತ್ತೆಯಿಂದ ಐಟಿ ಕಂಪನಿಗಳಿಗೆ ಹೊಡೆತಬಿದ್ದಿರುವುದು ನಿಜ. ಇದನ್ನು ಉದ್ಯೋಗಿಗಳು ಅರ್ಥ ಮಾಡಿಕೊಳ್ಳಬೇಕು. ಕೌಶಲಗಳನ್ನು ಹೆಚ್ಚಿಸಿಕೊಳ್ಳದಿದ್ದರೆ ಮತ್ತಷ್ಟು ಅಪಾಯವಿದೆ. ಹೀಗಾಗಿ, ಉದ್ಯೋಗಿಗಳು ಕೌಶಲದ ಕಡೆಗೆ ಗಮನಹರಿಸಬೇಕು. ವಿದ್ಯಾರ್ಥಿಗಳು ಹೆಚ್ಚಾಗಿ ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು,'' ಎಂದು ಸಲಹೆ ಮಾಡಿದರು.

ಗೋಕುಲ ಎಜುಕೇಷನ್ ಫೌಂಡೇಷನ್‌ನ ನಿರ್ದೇಶಕ ಎಂ.ಆರ್.ಕೋದಂಡರಾಮ್ ಮಾತನಾಡಿ, ''ಎರಡು ದಿನಗಳ ಪ್ರದರ್ಶನಕ್ಕೆ 1,700ಕ್ಕೂ ಹೆಚ್ಚಿನ ಪ್ರಾಜೆಕ್ಟ್‌ಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 446 ಪ್ರಾಜೆಕ್ಟ್‌ಗಳ ಪ್ರದರ್ಶನಕ್ಕೆ ಅವಕಾಶ ನೀಡಲಾಗಿದೆ,'' ಎಂದರು.

ರಾಮಯ್ಯ ಎಂಜಿನಿಯರಿಂಗ್ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎನ್.ವಿ.ಆರ್.ನಾಯ್ಡು, ಜಿ.ಇ.ಎಫ್. ಕಾರ್ಯನಿರ್ವಾಹಕ ಅಧಿಕಾರಿ ಡಾ. ಎಚ್.ವಿ.ಪಾರ್ಶ್ವನಾಥ್, ಗೋಕುಲ ಎಜುಕೇಷನ್ ಫೌಂಡೇಶನ್‌ನ ಸಲಹೆಗಾರ ಡಾ.ಕರಿಸಿದ್ದಪ್ಪ ಉಪಸ್ಥಿತರಿದ್ದರು.

ಗಮನಸೆಳೆದ ಹೈಬ್ರಿಡ್ ಬೈಕ್

ಪ್ರಾಜೆಕ್ಟ್ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ ಹೈಬ್ರಿಡ್ ಬೈಕ್ ಪ್ರಾಜೆಕ್ಟ್ ಎಲ್ಲರ ಗಮನಸೆಳೆಯಿತು. ಹೈಬ್ರಿಡ್ ಕಾರಿನ ಮಾದರಿಯಲ್ಲೇ ಈ ತಂತ್ರಜ್ಞಾನ ಕಾರ್ಯನಿರ್ವಹಿಸಲಿದೆ. ಇದರೊಂದಿಗೆ ಮಳೆ ನೀರಿನ ಸಂರಕ್ಷಣೆ (ಎ.ಆರ್., ವಿ.ಆರ್), ಸ್ಮಾರ್ಟ್ ಗ್ರಿಡ್ಸ್ ಸೇರಿ ಹಲವು ಪ್ರಾಜೆಕ್ಟ್‌ಗಳು ಎಲ್ಲರ ಗಮನಸೆಳೆದವು.

ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಅವರು ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ, ಅಭಿನಂದನೆ ಸಲ್ಲಿಸಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿ, ಸಂಘದ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ, ಶುಭಾಶಯ ಕೋರಿದರು.

1.50 ಕೋಟಿ ರೂ. ಸುಲಿಗೆ

» ನಮ್ಮ ಮೊದಲ ಪುಟದಿಂದ

'ಅಂಬರೀಷ್ ಅವರನ್ನು ಮದುವೆ ಆಗಿರುವುದನ್ನು ಸೌಮ್ಯಾ ಮುಚ್ಚಿಟ್ಟಿದ್ದರು. ಅದನ್ನು ಪ್ರಶ್ನಿಸಿದಾಗ 'ಅದು ನನ್ನ ವೈಯಕ್ತಿಕ ವಿಚಾರ' ಎಂದು ಬೆದರಿಕೆ ಹಾಕಿದ್ದರು. ಅಲ್ಲದೆ, ಅಂಬರೀಶ್ ಕೂಡ ಕರೆ ಮಾಡಿ ಪ್ರಾಣ ಬೆದರಿಕೆ ಹಾಕಿದ್ದಾರೆ. ಎಂದು ರವಿರಾಜ್ ದೂರಿನಲ್ಲಿ ವಿವರಿಸಿದ್ದಾರೆ.

ತನಿಖೆ ನಡೆಸಲಾಗುತ್ತಿದೆ. ದೂರುದಾರರಿಗೆ ಹಣ ವರ್ಗಾವಣೆ ಮಾಡಿರುವ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ವಿಕ ಫುಡ್ & ನೈಟ್‌ಲೈಫ್

ಎಸ್‌ಐಆರ್: ಶೇ 72ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಸಮರ್ಪಕವಾಗಿ ಕೈಗೊಳ್ಳಲು ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ತಿಳಿಸಿದರು.

ಎಸ್‌ಐಆರ್ ಸಂಬಂಧ ಜಿಬಿಎ ಕೇಂದ್ರ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಎಸ್‌ಐಆರ್‌ಗಾಗಿ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ನಗರ ವ್ಯಾಪ್ತಿಯಲ್ಲಿ ಈಗಾಗಲೇ ಶೇ 72ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. ಉಳಿದ ಮ್ಯಾಪಿಂಗ್ ಕಾರ್ಯವನ್ನೂ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ,'' ಎಂದು ಹೇಳಿದರು.

''ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನಮೂನೆಗಳ ಮೂಲಕ ಅಗತ್ಯ ಮಾಹಿತಿ ಸಂಗ್ರಹಿಸಲಿದ್ದಾರೆ. ಇದಕ್ಕೆ ನಾಗರಿಕರು ಸಹಕಾರ ನೀಡಬೇಕು. ಬಳಿಕ ದತ್ತಾಂಶವನ್ನು ಪರಿಶೀಲಿಸಿ, ತಾಳೆ ಮಾಡಿ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗುವುದು,'' ಎಂದರು.

''ಅರ್ಹ ಮತದಾರರು ಚುನಾವಣಾ ಪ್ರಕ್ರಿಯೆಯಿಂದ ವಂಚಿತರಾಗಬಾರದು ಹಾಗೂ ಯಾವುದೇ ಅನರ್ಹರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಉಳಿಯದಂತೆ ನೋಡಿಕೊಳ್ಳುವ ಉದ್ದೇಶದಿಂದ ಭಾರತೀಯ ಚುನಾವಣಾ ಆಯೋಗವು ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳ ಅನುಸಾರ ಪರಿಷ್ಕರಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ,'' ಎಂದು ಹೇಳಿದರು.

''ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಪೂರ್ವಭಾವಿ ಚಟುವಟಿಕೆ ಅಂಗವಾಗಿ 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಜೂ.16ರೊಳಗೆ ಬಾಕಿ ಇರುವ ನಮೂನೆ-6, 6 ಎ, 7 ಹಾಗೂ 8ರ ಅರ್ಜಿಗಳನ್ನು ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು,'' ಎಂದು ತಿಳಿಸಿದರು.

ಎಸ್‌ಐಆರ್ ವೇಳಾಪಟ್ಟಿಯ ವಿವರ

ಎಸ್‌ಐಆರ್‌ಗೆ ಅರ್ಹತಾ ದಿನಾಂಕ	ಅ.1
ಸಿದ್ಧತೆ, ತರಬೇತಿ ಹಾಗೂ ಮುದ್ರಣ	ಜೂ.20 ರಿಂದ ಜೂ.29
ಬಿಎಲ್‌ಒಗಳಿಂದ ಮನೆ-ಮನೆ ಭೇಟಿ	ಜೂ.30 ರಿಂದ ಜು.29
ಮತಗಟ್ಟೆಗಳ ಮರುಹೊಂದಾಣಿಕೆ	ಜು. 29
ಕರಡು ಮತದಾರರ ಪಟ್ಟಿ ಪ್ರಕಟ	ಆ.5
ಆಕ್ಷೇಪಣೆ ಸಲ್ಲಿಕೆಗೆ ಅವಕಾಶ	ಆ.5 ರಿಂದ ಸೆ.4
ಹಕ್ಕು, ಆಕ್ಷೇಪಣೆಗಳ ವಿಲೇವಾರಿ	ಆ.5 ರಿಂದ ಅ.3
ಅಂತಿಮ ಮತದಾರರ ಪಟ್ಟಿ ಪ್ರಕಟ	ಅ.10



ಮ್ಯಾಪಿಂಗ್ ಮಾಡಿರುವ ವಿವರ

ಬೆಂಗಳೂರು ಜಿಲ್ಲೆ	ಶೇ 78.93
ಕೇಂದ್ರ ನಗರ ಜಿಲ್ಲೆ	ಶೇ 67.53
ದಕ್ಷಿಣ ನಗರ ಜಿಲ್ಲೆ	ಶೇ 67.93
ಉತ್ತರ ನಗರ ಜಿಲ್ಲೆ	ಶೇ 69.23

ನಿಧನ

ಲಲಿತ್ ಜೆ. ರಾವ್

ಬೆಂಗಳೂರು: ಭಾರತೀಯ ಶಾಸ್ತ್ರೀಯ ಸಂಗೀತ ಗಾಯಕಿ ಹಾಗೂ ಆಗ್ರಾ ಘರಾನಾಕ್ಕೆ ಹೆಸರಾಗಿದ್ದ ಸಂಗೀತಗಾರ್ತಿ ಲಲಿತ್ ಜೆ. ರಾವ್ (84) ಮಲ್ಲೇಶ್ವರದಲ್ಲಿ ನಿಧನರಾದರು.

ಲಲಿತ್ ಜೆ. ರಾವ್ ಅವರಿಗೆ ಪತಿ ಜಯವಂತ ರಾವ್, ಪುತ್ರ ಸಂಜೀವ್ ರಾವ್ ಇದ್ದಾರೆ. ಪುತ್ರ ಫ್ರಾನ್ಸ್‌ನಲ್ಲಿದ್ದು, ಅವರು ಬಂದ ಬಳಿಕ ಶುಕ್ರವಾರ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಬಾಲ್ಯದಲ್ಲಿ ಪಂಡಿತ್ ರಾಮರಾವ್ ನಾಯಕ್ ಅವರಲ್ಲಿ ಸಂಗೀತ ಕಲಿತ ಅವರು 12ನೇ ವಯಸ್ಸಿನಲ್ಲಿ ಮೊದಲ ಸಂಗೀತ ಕಛೇರಿ ನೀಡಿದ್ದರು. ಅನಂತರ ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು. ಜಯವಂತ ರಾವ್ ಅವರನ್ನು ಮದುವೆಯಾದ ಬಳಿಕ ದಿಲ್ಲಿಗೆ ಹೋಗಿದ್ದಾಗ ದಿನಕರ ಕಾಯ್ಕಿಣಿ ಅವರಲ್ಲಿ ಸಂಗೀತ ಅಭ್ಯಾಸ ಮಾಡಿದರು. ಪತಿಗೆ ಮುಂಬಯಿಗೆ ವರ್ಗವಾಗಿದ್ದರಿಂದ ಅಲ್ಲಿಗೆ ತೆರಳಿದ ಲಲಿತ್ ಅಲ್ಲಿ ಉಸ್ತಾದ್ ಖಾದಿಮ್ ಹುಸೇನ್ ಖಾನ್ ಅವರ ಶಿಷ್ಯೆಯಾಗಿ ಪ್ರಸಿದ್ಧ ಸಂಗೀತಗಾರ್ತಿಯಾಗಿ ಬೆಳೆದರು.

ಖಯಾಲ್, ಧ್ರುಪದ್, ಧಮಾರ್, ಠುಮ್ರಿ, ತರಾನಾ, ಹರಿ ಮುಂತಾದ ಗಾಯನ ಪ್ರಕಾರಗಳಲ್ಲಿ ಪ್ರವೀಣರಾಗಿದ್ದರು. 'ಸಜನ್ ಮಿಲಾಪ್' ಎಂಬ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಕೇಂದ್ರ ಸರಕಾರದ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಗೌರವ ಸೇರಿದಂತೆ ಹಲವು ಗೌರವಗಳು ಅವರಿಗೆ ದೊರಕಿದ್ದವು.

ಎಲ್ಲಿ-ಏನು? ಶುಕ್ರವಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ: ಸೌಹಾರ್ದ ನೆಲೆಗಳು: ಉಪನ್ಯಾಸ ಮಾಲಿಕೆ ಹಾಗೂ ಮಹಿಳಾ ಮುನ್ನಡೆ ಪುಸ್ತಕ ಸರಣಿ ಬಿಡುಗಡೆ. **ಸ್ಥಳ:** ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರದ ಬಳಿ. ಜೆ.ಸಿ.ರಸ್ತೆ. ಮಧ್ಯಾಹ್ನ 3.30.

ಕಂಠೀರವ ನರಸಿಂಹರಾಜ ಒಡೆಯರ್ ಸಾಂಸ್ಕೃತಿಕ ಕಲಾ ಸಂಘ: ನರಸಿಂಹರಾಜ ಒಡೆಯರ್ ಅವರ 138ನೇ ಜಯಂತ್ಯುತ್ಸವ ಹಾಗೂ ಕಂಚಿನ ಪುತ್ಥಳಿ ಅನಾವರಣ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ. ಉಪಸ್ಥಿತಿ : ಮೈಸೂರು ರಾಜವಂಶಸ್ಥ ಹಾಗೂ ಸಂಸದ

ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್. ಪ್ರಶಸ್ತಿ ಪುರಸ್ಕೃತರು : ಶತಾವಧಾನಿ ಡಾ.ಆರ್. ಗಣೇಶ್, ಬೆಂಗಳೂರು ಇತಿಹಾಸ ತಜ್ಞ ಸುರೇಶ್ ಮೂನ, ಇತಿಹಾಸಕಾರ ಧರ್ಮೇಂದ್ರ ಕುಮಾರ್ ಆರೇನಹಳ್ಳಿ. ಉದ್ಘಾಟನೆ : ಸಂಸದ ತೇಜಸ್ವಿ ಸೂರ್ಯ ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್. **ಸ್ಥಳ:** ಡಾ.ಸಿ. ಅಶ್ವತ್ಥ್ ಕಲಾಭವನ ಮುಂಭಾಗ, ಎನ್.ಆರ್. ಕಾಲೊನಿ. ಸಂಜೆ 4.

ವಿಶ್ವ ಪರಿಸರ ದಿನ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್)/ ರೋಟರಿ ಬೆಂಗಳೂರು ಸಮೃದ್ಧಿ: ವಿಶ್ವ ಪರಿಸರ ದಿನಾಚರಣೆ. ಅಧ್ಯಕ್ಷತೆ: ವಿವಿಯ ಕುಲಪತಿ ಡಾ. ಭಗವಾನ್ ಬಿ.ಸಿ. **ಸ್ಥಳ:** ಲಾಲ್‌ಬಾಗ್ ಪಶ್ಚಿಮ ದ್ವಾರ. ಬೆಳಗ್ಗೆ 7.30-9.

ಆಮ್ ಆದ್ಮಿ ಪಾರ್ಟಿ: ಬೆಂಗಳೂರಿನ ಕಸದ ಸಮಸ್ಯೆ ಪರಿಹಾರಕ್ಕಾಗಿ ದುಂಡುಮೇಜಿನ ಚರ್ಚೆ. ಅಧ್ಯಕ್ಷತೆ : ಎಎಪಿ ರಾಜ್ಯ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ. ವಿಚಾರ ಸಂಕಿರಣ: ಎ ಗೇನ್ ರಿಸೋರ್ಸ್ ಲ್ಯಾಬ್ ನಿರ್ದೇಶಕ ರಾಜೇಶ್ ಬಾಬು, ಪ್ರಾಜೆಕ್ಟ್ ವೃಕ್ಷ ಫೌಂಡೇಶನ್ ಅಧ್ಯಕ್ಷ ವಿಜಯ್ ನಿಶಾಂತ್. **ಸ್ಥಳ:** ವಿನೋಬಾ ಹಾಲ್, ಮೊದಲನೇ ಮಹಡಿ, ಗಾಂಧಿ ಭವನ. ಬೆಳಗ್ಗೆ 10:30 ರಿಂದ ಮಧ್ಯಾಹ್ನ 1.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ 76766 68588

ಯಾದಗಿರಿಯ ಬದ್ದೇಪಲ್ಲಿಯಲ್ಲಿ ಶೇಂಗಾ ಸಂಸ್ಕರಣಾ ಘಟಕ, ರೈತರ ತರಬೇತಿ ಕೇಂದ್ರ ಉದ್ಘಾಟಿಸಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಿಗೂ ಸಂಸ್ಕರಣ ಘಟಕ

■ **ವಿಕ ಸುದ್ದಿಲೋಕ** ಯಾದಗಿರಿ

ಕರ್ನಾಟಕದಲ್ಲಿ ಕೈಗಾರಿಕೆಗಳು ಸೇರಿ ಇತರ ಅಗತ್ಯ ಸೌಕರ್ಯ ಇಲ್ಲದಿರುವ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಲು ಮಹತ್ವಾಕಾಂಕ್ಷೆ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡು ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಏಳೂ ಜಿಲ್ಲೆಗಳಲ್ಲಿ ಏಳು ವಿಧದ ಘಟಕ ಆರಂಭಿಸಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಜಿಲ್ಲೆಯ ಗುರುಮಠಕಲ್ ತಾಲೂಕಿನ ಬದ್ದೇಪಲ್ಲಿ ಗ್ರಾಮದಲ್ಲಿ ಸ್ಥಾಪನೆ ಮಾಡಿರುವ ಶೇಂಗಾ ಸಂಸ್ಕರಣಾ ಘಟಕ, ರೈತರ ತರಬೇತಿ ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರ ಉದ್ಘಾಟಿಸಿ ಮಾತನಾಡಿದರು. ''ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಣ್ಣದಾಗಿ ಪ್ರಯತ್ನ ಆರಂಭಿಸಲಾಗಿದ್ದು, ಇದರ ಭಾಗವಾಗಿ ಯಾದಗಿರಿಯಲ್ಲಿ ಶೇಂಗಾ ಸಂಸ್ಕರಣಾ ಘಟಕ ಮಾಡಲಾಗಿದೆ. ಯಾದಗಿರಿ ಘಟಕವೊಂದೇ ಮಹಿಳೆಯರ ಮೂಲಕ ನಡೆಸಲಾಗುತ್ತಿದೆ,'' ಎಂದರು.

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಬದ್ದೇಪಲ್ಲಿ ಗ್ರಾಮದಲ್ಲಿ ಸ್ಥಾಪನೆ ಮಾಡಿರುವ ಶೇಂಗಾ ಸಂಸ್ಕರಣಾ ಘಟಕ, ರೈತರ ತರಬೇತಿ ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಿದರು.

''ತಲಾದಾಯದಲ್ಲಿ ದೇಶದಲ್ಲಿಯೇ ಬೆಂಗಳೂರು ಮೊದಲ ಸ್ಥಾನದಲ್ಲಿದ್ದರೆ, ಯಾದಗಿರಿ ಕೊನೆಯಿಂದ 2ನೇ ಸ್ಥಾನದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ರಾಜ್ಯದಲ್ಲಿ ಯಾದಗಿರಿ ಜಿಲ್ಲೆಯೇ ಕೊನೆಯ ಸ್ಥಾನದಲ್ಲಿದೆ,'' ಎಂದರು. ''ಯಾದಗಿರಿ ಜಿಲ್ಲೆಯಲ್ಲಿ ಇಷ್ಟು ವರ್ಷಗಳಾದರೂ ಏನೂ ಅಭಿವೃದ್ಧಿ ಆಗಿಲ್ಲ ಎಂದು ನೋವಿನ ಸಂಗತಿ,''ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಶರಣಗೌಡ ಕಂದಕೂರ ವಹಿಸಿದ್ದರು.

> ಶೇಂಗಾ ಸಂಸ್ಕರಣಾ ಘಟಕದ ಮೂಲಕ ಉತ್ಪಾದಿಸುವ ಉತ್ಪನ್ನಗಳನ್ನು ದೇಶಾದ್ಯಂತ ತಲುಪಿಸಬಹುದಾಗಿದೆ. ಕಿರಾಣಿ ಅಂಗಡಿಗಳು, ಸೂಪರ್ ಮಾರ್ಕೆಟ್‌ಗಳು, ಸ್ವಸಹಾಯ ಗುಂಪುಗಳು, ರೆಸ್ಟೋರೆಂಟ್‌ಗಳು, ಮಾಲ್‌ಗಳು ಮತ್ತು ಅಮೆಜಾನ್ ಸೇರಿ ಐಟಿಸಿ ಲಿಮಿಟೆಡ್ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಂತಹ ಬಹು ಮಾರ್ಗಗಳ ಮೂಲಕ ಉತ್ಪನ್ನಗಳ ಮಾರುಕಟ್ಟೆ ವ್ಯಾಪ್ತಿಯನ್ನು ಉದ್ದೇಶಿಸಲಾಗಿದೆ.
> **-ನಿರ್ಮಲಾ ಸೀತಾರಾಮನ್,** ಕೇಂದ್ರ ಹಣಕಾಸು ಸಚಿವೆ

ಯಾದಗಿರಿ ಶೇಂಗಾ ಬ್ರ್ಯಾಂಡಿಂಗ್‌ಗೆ ಕ್ರಮ

ಯಾದಗಿರಿ: ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆ ಮಾವಿನ ಹಣ್ಣಿಗೆ ಹೆಸರು ವಾಸಿಯಾದಂತೆ ಯಾದಗಿರಿ ಜಿಲ್ಲೆ ಶೇಂಗಾಕ್ಕೆ ಹೆಸರುವಾಸಿಯಾಗಲು ಶೇಂಗಾ ಮೌಲ್ಯವರ್ಧನೆಗೆ ಘಟಕ ಸ್ಥಾಪಿಸಲಾಗಿದೆ. ಆದರೆ, ಈ ಘಟಕದ ಒಟ್ಟು ಸಾಮರ್ಥ್ಯದ ಕೇವಲ ಶೇ.15ರಷ್ಟು ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ಜಿಲ್ಲಾಡಳಿತ ಹಾಗೂ ಸ್ಥಳೀಯ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೂಚಿಸಿದರು.

ರಾಯಚೂರಿನಲ್ಲಿ 'ಭಾರತ ವನ ಯೋಜನೆ ಉದ್ಘಾಟನೆ' ನಿಮಿತ್ತ ಗುರುವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜಿಲ್ಲಾಡಳಿತ ಭವನದ ಆವರಣದಲ್ಲಿ ಸಸಿ ನೆಟ್ಟರು. ಎಸ್ಎಂಸಿಐಎಲ್ ಸಂಸ್ಥೆಯ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಆರ್ಥಿಕ ಸಹಯೋಗದೊಂದಿಗೆ 'ತಾಯಿಯ ಹೆಸರಿನಲ್ಲಿ ಒಂದು ಗಿಡ' ಘೋಷಣೆಯಡಿ ಈ ಕಾರ್ಯಕ್ರಮ ನಡೆಯಿತು.

ವ್ಯಾಜ್ಯದಲ್ಲಿ ಗೆದ್ದ ರಾಜ್ಯಸಭಾ ಸದಸ್ಯ ಕಡಾಡಿ

ವಿಮಾನ ಸಂಸ್ಥೆಗೆ ದಂಡ

ಬೆಳಗಾವಿ: ದೋಷಯುಕ್ತ ಟಿಕೆಟ್ ನೀಡಿ ಸೇವಾ ನ್ಯೂನತೆ ಉಂಟುಮಾಡಿದ ಸ್ಪೈಸ್ ಜೆಟ್ ವಿಮಾನ ಸಂಸ್ಥೆಗೆ ಬೆಳಗಾವಿ ಜಿಲ್ಲಾ ಗ್ರಾಹಕರ ಆಯೋಗ ಬಿಸಿ ಮುಟ್ಟಿಸಿದೆ. ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಸಲ್ಲಿಸಿದ ದೂರು ಪರಿಗಣಿಸಿದ ಆಯೋಗ, ಟಿಕೆಟ್ ಮೊತ್ತ 10,927 ರೂ.ಗೆ ವಾರ್ಷಿಕ ಶೇ. 9ರಷ್ಟು ಬಡ್ಡಿ ಸೇರಿಸಿ ಮರುಪಾವತಿ ಮಾಡುವಂತೆ ಗುರುವಾರ ಆದೇಶಿಸಿದೆ. ಅಲ್ಲದೇ ದೂರುದಾರರಿಗೆ ಉಂಟಾದ ಮಾನಸಿಕ ತೊಂದರೆಗೆ ಪರಿಹಾರವಾಗಿ 10,000 ರೂ., ಪ್ರಕರಣದ ವೆಚ್ಚವಾಗಿ 5,000 ರೂ.ಗಳನ್ನು ಪಾವತಿಸುವಂತೆ ಸೂಚಿಸಿದೆ.

ಈರಣ್ಣ ಕಡಾಡಿ ಅವರು 2020ರ ಅ. 9ರಂದು ದಿಲ್ಲಿಯಿಂದ ಬೆಂಗಳೂರಿಗೆ 5,004 ರೂ. ಮೊತ್ತದ ಟಿಕೆಟ್ ಮತ್ತು 2020ರ ನವೆಂಬರ್ 9ರಂದು ಬೆಂಗಳೂರಿನಿಂದ ದಿಲ್ಲಿಗೆ 5,923 ರೂ. ಮೊತ್ತದ ಟಿಕೆಟ್ ಖರೀದಿಸಿ ಪ್ರಯಾಣಿಸಿದ್ದರು. ನಂತರ ಈ ಬಿಲ್ ಮರುಸಂದಾಯ ಮಾಡಲು ಕೋರಿ ಕಡಾಡಿ ಅವರು ರಾಜ್ಯಸಭಾ ಸೆಕ್ರೆಟರಿಯೇಟ್‌ಗೆ ಟಿಕೆಟ್ ಸಲ್ಲಿಸಿದ್ದರು. ಆಗ ಸಕ್ಷಮ ಪ್ರಾಧಿಕಾರ, ''ಟಿಕೆಟ್‌ಗಳು, 'ಆಫರ್ ಟಿಕೆಟ್' ಆಗಿರುವುದರಿಂದ ಮರುಸಂದಾಯ ಮಾಡಲು ಸಾಧ್ಯವಿಲ್ಲ'' ಎಂದು ತಿಳಿಸಿ ಮನವಿ ತಿರಸ್ಕರಿಸಿತ್ತು.

''ವಿಮಾನ ಸಂಸ್ಥೆಯ ನಿಷ್ಕಾಳಜಿ ಮತ್ತು ಸೇವಾ ನ್ಯೂನತೆಯಿಂದ ತಮಗೆ ಮುಜುಗರ ಹಾಗೂ ತೊಂದರೆಯಾಗಿದೆ,'' ಎಂದು ಆರೋಪಿಸಿ ಈರಣ್ಣ ಕಡಾಡಿ ಅವರು ಬೆಳಗಾವಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು. ದೂರು ಸ್ವೀಕರಿಸಿದ ಆಯೋಗವು 1ನೇ ಎದುರುದಾರ ಸ್ಪೈಸ್ ಜೆಟ್ ಮತ್ತು 2ನೇ ಎದುರುದಾರ 'ಈಸ್ ಮೈಟ್ರಿಪ್' ಸೇವಾ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿತ್ತು. 1ನೇ ಎದುರುದಾರ ವಿಮಾನ ಸಂಸ್ಥೆ ವಿಚಾರಣೆಗೆ ಹಾಜರಾಗದ ಕಾರಣ ಆಯೋಗವು ಅದರ ವಿರುದ್ಧ ಏಕಪಕ್ಷೀಯ ಆದೇಶ ಹೊರಡಿಸಿತು. 2ನೇ ಎದುರುದಾರ ಈಸ್ ಮೈಟ್ರಿಪ್ ಸಂಸ್ಥೆ ವಕೀಲರ ಮುಖಾಂತರ ಹಾಜರಾಗಿ, ''ತಾವು ಕೇವಲ ಟಿಕೆಟ್ ಬುಕಿಂಗ್‌ನ ಮಧ್ಯವರ್ತಿ ಸಂಸ್ಥೆಯಾಗಿ ಸೇವೆ ನೀಡಿದ್ದು, ಈ ಪ್ರಕರಣದಲ್ಲಿ ಯಾವುದೇ ಸೇವಾ ನ್ಯೂನತೆ ಆಗಿಲ್ಲ'' ಎಂದು ವಾದ ಮಂಡಿಸಿತ್ತು. ವಾದ-ಪ್ರತಿವಾದ ಆಲಿಸಿದ ಆಯೋಗದ ಅಧ್ಯಕ್ಷ ಮಹಾಂತೇಶ ಶಿಗ್ಲಿ ಹಾಗೂ ಸದಸ್ಯರಾದ ಗಿರೀಶಗೌಡ ಪಾಟೀಲ ಅವರನ್ನು ಒಳಗೊಂಡ ಪೀಠವು, ''ದೂರುದಾರರಿಗೆ ದೋಷಯುಕ್ತ ಆಫರ್ ಟಿಕೆಟ್ ನೀಡಿ ಸ್ಪೈಸ್ ಜೆಟ್ ವಿಮಾನ ಸೇವಾ ಸಂಸ್ಥೆಯು ಸೇವಾ ನ್ಯೂನತೆ ಎಸಗಿದೆ,'' ಎಂದು ''ಟಿಕೆಟ್ ಮೊತ್ತ 10,927 ರೂ.ಗೆ ವಾರ್ಷಿಕ ಶೇ. 9ರಷ್ಟು ಬಡ್ಡಿ ಸಮೇತ ಮರುಸಂದಾಯ ಮಾಡಬೇಕು,'' ಎಂದು ಆದೇಶಿಸಿದೆ.

ಪ್ರತ್ಯೇಕ ಅಪಘಾತ: 9 ಮಂದಿ ಸಾವು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಒಟ್ಟು 9 ಮಂದಿ ಮೃತಪಟ್ಟಿದ್ದಾರೆ ತುಮಕೂರು ಜಿಲ್ಲೆಯಲ್ಲಿ ಮೂವರು, ಚಾಮರಾಜನಗರ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲೂಕು ಕೆಂಕೆರೆ ಗೊಲ್ಲರಹಟ್ಟಿ ಗೇಟ್ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಆಂಧ್ರಪ್ರದೇಶದ ಕರ್ನೂಲ್ ಮೂಲದ ಒಂದೇ ಕುಟುಂಬ ಗಣೇಶ್ವರ್ ರೆಡ್ಡಿ (68) ಮತ್ತು ಇಂದಿರಮ್ಮ (65) ದಂಪತಿ ಹಾಗೂ ಮಗಳು ಸೌಮ್ಯ (39) ಮೃತ ದುರ್ದೈವಿಗಳು.

ಗಣೇಶ್ವರ್ ರೆಡ್ಡಿ ಅವರ ಅಳಿಯ ರವಿಕುಮಾರ್, ಮೊಮ್ಮಕ್ಕಳಾದ ಚರಿತ್ ರೆಡ್ಡಿ (6), ಚಾರ್ವಿ ರೆಡ್ಡಿ (10) ಗಾಯಗೊಂಡಿದ್ದಾರೆ. ರವಿಕುಮಾರ್ ಕಾರು ಚಲಾಯಿಸುತ್ತಿದ್ದರು. ಗೊಲ್ಲರಹಟ್ಟಿ ಗೇಟ್‌ನಲ್ಲಿ ಯೂಟರ್ನ್ ತೆಗೆದುಕೊಳ್ಳುತ್ತಿದ್ದ ಇನ್ನೊಂದು ಕಾರು ಅಡ್ಡಬಂದಾಗ ಅಪಘಾತ ಸಂಭವಿಸಿದೆ. ಅಪಘಾತಕ್ಕೆ ಕಾರಣವಾದ ಕಾರಿನ ಚಾಲಕ ಲೇಪಾಕ್ಷ್ ಗಾಯಗೊಂಡಿದ್ದಾರೆ. ಗಣೇಶ್ವರ್ ರೆಡ್ಡಿ ಕುಟುಂಬ ಮೈಸೂರು ಪ್ರವಾಸದಿಂದ ಆಂಧ್ರಪ್ರದೇಶದ ಕರ್ನೂಲ್‌ಗೆ ತೆರಳುತ್ತಿತ್ತು.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲೂಕು ಕೆಂಕೆರೆ ಗೊಲ್ಲರಹಟ್ಟಿ ಗೇಟ್ ಬಳಿ ಅಪಘಾತದಲ್ಲಿ ಜಖಂಗೊಂಡ ಕಾರು.

ಮಗು, ವೃದ್ಧ ಮರಣ: ಚಾಮರಾಜನಗರ ತಾಲೂಕಿನ ದೊಡ್ಡಮೂಡಹಳ್ಳಿ ಕ್ರಾಸ್ ಬಳಿ ಬುಧವಾರ ರಾತ್ರಿ ಕಾರು ಹಾಗೂ ಸರಕು ಸಾಗಣೆ ವಾಹನದ ಮುಖಾಮುಖಿ ಡಿಕ್ಕಿಯಾಗಿ 7 ತಿಂಗಳ ಗಂಡು ಮಗು ಹಾಗೂ ತುಮಕೂರು ಮೂಲದ ಮುಬಾರಕ್ (70) ಹಾಗೂ ಮೃತಪಟ್ಟಿದ್ದಾರೆ. ತಮಿಳುನಾಡು ಕಡೆಯಿಂದ ಚಾಮರಾಜನಗರದೆಡೆಗೆ ಬರುತ್ತಿದ್ದ ಕಾರಿಗೆ ಚಾ.ನಗರ ಕಡೆಯಿಂದ ತಮಿಳುನಾಡಿನತ್ತ ತೆರಳುತ್ತಿದ್ದ ಗೂಡ್ಸ್ ವಾಹನ ಡಿಕ್ಕಿ ಹೊಡೆದಿದೆ. ಕಾರಿನಲ್ಲಿದ್ದ ಮುಬಾರಕ್ ಸ್ಥಳದಲ್ಲಿಯೇ ಮೃತಪಟ್ಟರೆ, ತೀವ್ರ ಗಾಯಗೊಂಡಿದ್ದ 7 ತಿಂಗಳ ಗಂಡು ಮಗು ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದೆ. ಹಲವರು ಗಾಯಗೊಂಡಿದ್ದಾರೆ.

ತಂದೆ, ಮಗ ಸಾವು: ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ನಂದಿಹಳ್ಳಿ ಸಮೀಪದ ಸೀನಿಬಸಪ್ಪ ಕ್ಯಾಂಪ್ ಬಳಿ ಗುರುವಾರ ಅದಿರು ಲಾರಿ ಡಿಕ್ಕಿ ಹೊಡೆದು ಬೈಕ್‌ನಲ್ಲಿ ತೆರಳುತ್ತಿದ್ದ ಬೆಳ್ಳಿನಾಗರಾಜ (45) ಮತ್ತು ಅವರ ಮಗ ದುರುಗೇಶ (22) ಮೃತಪಟ್ಟಿದ್ದಾರೆ. ಅವರು ಸಂಡೂರಿನಿಂದ ತಮ್ಮ ಸ್ವಗ್ರಾಮ ಕಮತೂರಿಗೆ ಬೈಕ್‌ನಲ್ಲಿ ಹೋಗುತ್ತಿದ್ದರು. ಕುಮಾರಸ್ವಾಮಿ ರಸ್ತೆಯಲ್ಲಿ ವೇಗವಾಗಿ ಬಂದ ಅದಿರು ಲಾರಿ ಬೈಕ್‌ಗೆ ಡಿಕ್ಕಿ ಹೊಡೆಯಿತು.

ಇಬ್ಬರು ಯುವಕರ ದುರ್ಮರಣ

ರಾಯಚೂರು ಜಿಲ್ಲೆ ಮಾನ್ವಿ ಪಟ್ಟಣದಲ್ಲಿ ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದು ರಾಘವೇಂದ್ರ (26) ಮತ್ತು ಪ್ರಿಯಾಂಕ (19) ಮೃತಪಟ್ಟಿದ್ದಾರೆ. ಗಾಯಗೊಂಡ ಕಾಳಮ್ಮ, ಕವಿತಾ, ಸೌಮ್ಯ, ವಿಜಯ ಹಾಗೂ ಮಧು ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂಲತಃ ಬಾಗಲಕೋಟೆ ಜಿಲ್ಲೆ ಹುನಗುಂದ ಪಟ್ಟಣದ ಈ ಕುಟುಂಬದವರು ಮಂತ್ರಾಲಯಕ್ಕೆ ಭೇಟಿ ನೀಡಿ ಕಾರಿನಲ್ಲಿ ಊರಿಗೆ ಮರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ.

ಅಧಿಕ ಬಡ್ಡಿ ಆಮಿಷ: ಆದಿತ್ಯರಾಜ್ ಕ್ಯಾಪಿಟಲ್ ಮೇಲೆ ದಾಳಿ

ಬೆಳಗಾವಿ: ಶಿವಂ ಅಸೋಸಿಯೇಟ್ಸ್ ಹಣಕಾಸು ವಂಚನೆ ಪ್ರಕರಣದ ತನಿಖೆ ನಡೆಯುತ್ತಿರುವಾಗಲೇ, ನಗರದಲ್ಲಿ ಮತ್ತೊಂದು ಹಣಕಾಸು ಸಂಸ್ಥೆ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ನಿಯಮ ಬಾಹಿರ ಠೇವಣಿ ಸಂಗ್ರಹಿಸಿ, ಆ ಹಣವನ್ನು ಬೇರೆಡೆ ಹೂಡಿಕೆ ಮಾಡಿದ ಆರೋಪ ಹಿನ್ನೆಲೆಯಲ್ಲಿ ಆದಿತ್ಯರಾಜ್ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ ಮೇಲೆ ಉಪ ವಿಭಾಗಾಧಿಕಾರಿ ಶ್ರವಣ ನಾಯಕ ನೇತೃತ್ವದ ತಂಡ ಗುರುವಾರ ದಾಳಿ ನಡೆಸಿತು. 'ಕೆಪಿಐಡಿ ಬಡ್ಸ್ ಆ್ಯಕ್ಟ್' ಅಡಿ ಜಿಲ್ಲಾಧಿಕಾರಿ ಕಚೇರಿಯ ತನಿಖಾ ಶಾಖೆಗೆ ಆದಿತ್ಯರಾಜ್ ಕ್ಯಾಪಿಟಲ್ ವಿರುದ್ಧ ದೂರು ಸಲ್ಲಿಕೆಯಾಗಿತ್ತು. ಹೀಗಾಗಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ''ಸದ್ಯ ದಾಖಲೆಗಳ ಪರಿಶೀಲನೆ ನಡೆಯುತ್ತಿದೆ. ಸಂಸ್ಥೆಯ ಒಟ್ಟು ಹಣಕಾಸು ವ್ಯವಹಾರ ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಆರ್‌ಬಿಐ ಹಾಗೂ ಸಹಕಾರ ಕಾಯಿದೆ ಉಲ್ಲಂಘಿಸಿರುವುದು ಪ್ರಾಥಮಿಕ ತನಿಖೆಯಲ್ಲಿ ಕಂಡುಬಂದಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬತ್ತಳಿಕೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಪಾವಗಡ

ದೂರವಾಣಿ:08136-245733 E mail: cdpopvg@gmail.vom

ಸಂ:ಶಿಅಯೋಪಾ:ಕೌ,ದೌ/ಸಿಬ್ಬಂದಿ/ಟೆಂಡರ್/2026-27 ದಿನಾಂಕ: 27.05.2026

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

2026-27ನೇ ಸಾಲಿಗೆ ತುಮಕೂರು ಜಿಲ್ಲೆಯ ಪಾವಗಡ ಶಿಶು ಅಭಿವೃದ್ಧಿ ಯೋಜನಾ ಕಛೇರಿಗೆ ಬಾಹ್ಯ ಸಂಪನ್ಮೂಲದಿಂದ ಸಿಬ್ಬಂದಿ ಸೇವೆಯನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999 ನಿಯಮ 2000ರಡಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಷರತ್ತು ಮತ್ತು ಟೆಂಡರ್ ಅಪ್‌ಲೋಡ್‌ಗೆ ಇ-ಪ್ರಕ್ಯೂರ್‌ಮೆಂಟ್ ವೆಬ್ ಸೈಟ್ https: kppp.karnataka.gov.in ಸಂಪರ್ಕಿಸುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29-06-2026 ಸಂಜೆ 5.00ಗಂಟೆ ಆಗಿರುತ್ತದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಪಾವಗಡ.

DIPR/TUM/91/KSMCA/2026-27

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114 ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ/ಫ್ಯಾಕ್ಸ್: 080-27934470 / 27935412

Email: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಉ.ನಿ/03/2026-27 ದಿನಾಂಕ: 04.06.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

ಮಾಲೀಕರಾದ ಶ್ರೀ ಪಿ. ವಿಶ್ವನಾಥ ರೆಡ್ಡಿ; ಶ್ರೀಮತಿ ಸವಿತ ಮತ್ತು ಇತರರ ಪರವಾಗಿ ಜಿಪಿಎ ದಾರರಾದ ಶ್ರೀ ಶ್ರೀನಿವಾಸುಲು ಕೊಂಡಮುರಿ ಬಿನ್ ಸಿಂಗಯ್ಯ ಕೊಂಡಮುರಿ, ಪಾಲುದಾರರು, ಮೆ॥ ಮಾರ್ಕನ್ ಪ್ರಾಜೆಕ್ಟ್ಸ್ ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸ.ನಂ. 167 ರಲ್ಲಿನ 02 ಎಕರೆ 07 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ** ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು/ ಬರುತ್ತಿದ್ದು, "ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ

ವಾಸಾಸಂಇ/ವಾಪ್ರ/ಎಲ್‌ಸಿ/992/2026-27

ಬಳ್ಳಾರಿ ನಿರ್ಮಿತಿಕೇಂದ್ರ, ಬಳ್ಳಾರಿ,

ಕಡಿಮೆ ವೆಚ್ಚದ ಕಟ್ಟಡ ಸಾಮಗ್ರಿಗಳ ಹಾಗೂ ತಾಂತ್ರಿಕತೆಯ ವರ್ಗಾವಣೆ ಕೇಂದ್ರ. (ಭಾರತ ಸರ್ಕಾರ, ಹುಡ್ಕೋದ ಅನುದಾನತ್ವದಲ್ಲಿ ರಾಜ್ಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆ)

e-mail:bellarynirmithikendra@yahoo.com : 9743113586

ಸಂ:ಬನಿಕೇಬ/ಆಡಳಿತ/ಸ್ಥಿರ ಠೇವಣಿ/2026-27 ದಿನಾಂಕ:04/06/2026

ಪ್ರಕಟಣೆ

ಬಳ್ಳಾರಿ ನಿರ್ಮಿತಿ ಕೇಂದ್ರ, ಬಳ್ಳಾರಿ ಸ್ಥಿರ ಠೇವಣಿಗೆ ಸಂಬಂಧಿಸಿದಂತೆ ರಾಷ್ಟ್ರೀಕೃತ ಅಥವಾ ಸೂಚೀಕೃತ ಬ್ಯಾಂಕ್‌ಗಳಲ್ಲಿ ಬಡ್ಡಿದರವನ್ನು ಪಡೆಯಲು ಪ್ರಕಟಣೆಯನ್ನು ಆಹ್ವಾನಿಸಲಾಗಿರುತ್ತದೆ.

ಸಂಬಂಧಪಟ್ಟ ಬ್ಯಾಂಕ್‌ಗಳು ಬಡ್ಡಿದರ ಪಟ್ಟಿಗಳನ್ನು ಸಲ್ಲಿಸಲುಕೊನೆಯ ದಿನಾಂಕ:12/06/2026 ರ ಸಂಜೆ 4.00 ಗಂಟೆಯೊಳಗಾಗಿ "ಯೋಜನಾ ನಿರ್ದೇಶಕರು, ಬಳ್ಳಾರಿ ನಿರ್ಮಿತಿಕೇಂದ್ರ, ಬಳ್ಳಾರಿ" ಫ್ಯಾಷನ್ ತಂತ್ರಜ್ಞಾನ ಮಹಾವಿದ್ಯಾಲಯ ಬಲಗಡೆ, ವಾಲ್ಮೀಕಿ ಭವನ ಹತ್ತಿರ 1ನೇ ರೈಲ್ವೆಗೇಟ್, ಕೌಲ್‌ಬಜಾರ್, ಬಳ್ಳಾರಿ ಇವರಿಗೆ ಸಲ್ಲಿಸಬಹುದಾಗಿರುತ್ತದೆ. ತಡವಾಗಿ ಸ್ವೀಕೃತಿಯಾಗುವ ಬಡ್ಡಿದರ ಪಟ್ಟಿಗಳನ್ನು ತಿರಸ್ಕರಿಸಲಾಗುವುದು.

ಸ್ವೀಕೃತಿಯಾದ ಬಡ್ಡಿದರಗಳ ಪಟ್ಟಿಗಳನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ಮಾನ್ಯ ಅಧ್ಯಕ್ಷರು, ನಿರ್ಮಿತಿಕೇಂದ್ರ ಹಾಗೂ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಮೊ.ನಂ.9743113586 ಪಡೆಯಬಹುದಾಗಿರುತ್ತದೆ.

ಸಹಿ/- ಯೋಜನಾ ನಿರ್ದೇಶಕರು, ಬಳ್ಳಾರಿ ನಿರ್ಮಿತಿ ಕೇಂದ್ರ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/205

ಸುವರ್ಣ ಕರ್ನಾಟಕ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಯೋಜನಾ ವಿಭಾಗ, ಚಿತ್ರದುರ್ಗ.

Sri Sai Service Station 1st Floor, Turuvanur Road, Chitradurga.
Phone No: (O) 08194 230133, (Fax) 230294,
e-mail : kn-cht@pmgsy.nic.in

ಸಂಖ್ಯೆ: ಕಾ.ಇಂ./ಯೋ.ವಿ./ಚಿದು/ತಾಂತ್ರಿಕ/ಟೆಂಡರ್/ಟಿ.ಎಸ್.ಪಿ/2026-27/44
ದಿನಾಂಕ: 02/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿತ್ರದುರ್ಗ ರವರು 2025-26ನೇ ಸಾಲಿನ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯ ಕಾಯ್ದೆ-2013ರಡಿ ಬಳಕೆಯಾಗದೇ ಇರುವ ಅನುದಾನದಡಿ ಹಂಚಿಕೆಯಾಗಿರುವ ಅನುದಾನಕ್ಕೆ ಲೆಕ್ಕ ಶೀರ್ಷಿಕೆ:4515-00-800-0-07-423 ರಡಿಯಲ್ಲಿ ಮಂಜೂರಾದ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಪ್ಯಾಕೇಜ್ ಸಂಖ್ಯೆ:KSSCTS-10-61:(1) ಮೊಳಕಾಲ್ಮೂರು ತಾಲ್ಲೂಕು ರಾಂಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಭವನದ ಹತ್ತಿರ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, (2) ಮೊಳಕಾಲ್ಮೂರು ತಾಲ್ಲೂಕು ಹುಚ್ಚಂಗಿದುರ್ಗ ಗ್ರಾಮದ ವಾಟರ್ ಮಾರಣ್ಣನ ಮನೆಯಿಂದ ಆಂಜನೇಯ ದೇವಸ್ಥಾನದ ವರೆಗೆ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, (3) ಚಳ್ಳಕೆರೆ ತಾಲ್ಲೂಕು ಕಾಕಿಬೋರಯ್ಯನಹಟ್ಟಿ ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, (4) ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (ಒಟ್ಟು ಪ್ಯಾಕೇಜ್ ಮೊತ್ತ ರೂ.60.00ಲಕ್ಷಗಳು)(ಸಾಮಾನ್ಯ ವರ್ಗ). ಹಾಗೂ ಪ್ಯಾಕೇಜ್ ಸಂಖ್ಯೆ:KSSCTS-10-62: (1) ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ (ಮೊತ್ತ ರೂ.10.00 ಲಕ್ಷಗಳು) (ಎಸ್. ಸಿ ಮೀಸಲಾತಿ) ಹಾಗೂ ಪ್ಯಾಕೇಜ್ ಸಂಖ್ಯೆ: KSSCTS-10-63: (1) ಮೊಳಕಾಲ್ಮೂರು ತಾಲ್ಲೂಕು ಹೊಸದಡಗೂರು ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (ಮೊತ್ತ ರೂ.10.00 ಲಕ್ಷಗಳು) (ಎಸ್.ಟಿ ಮೀಸಲಾತಿ) ಹಾಗೂ ಪ್ಯಾಕೇಜ್ ಸಂಖ್ಯೆ:KSSCTS-10-64:(1) ಚಳ್ಳಕೆರೆ ತಾಲ್ಲೂಕು ಬುಕ್ಕಂಬೂದಿ ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ (ಮೊತ್ತ ರೂ.10.00 ಲಕ್ಷಗಳು) (ಪ್ರವರ್ಗ-1 ಮೀಸಲಾತಿ) ಹಾಗೂ ಪ್ಯಾಕೇಜ್ ಸಂಖ್ಯೆ: KSSCTS-10-65:(1) ಮೊಳಕಾಲ್ಮೂರು ತಾಲ್ಲೂಕು ರಾಮಸಾಗರ ಗ್ರಾಮದ ಎಸ್.ಟಿ ಕಾಲೋನಿಯಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (ಮೊತ್ತ ರೂ.10.00 ಲಕ್ಷಗಳು) (ಪ್ರವರ್ಗ-2(ಎ) ಮೀಸಲಾತಿ) ಒಟ್ಟು 8 ಕಾಮಗಾರಿಗಳ ಅಂದಾಜು ಮೊತ್ತ ರೂ. 100.00 ಲಕ್ಷಗಳು (ಕನಿಷ್ಠ ಅಂ.ಮೊತ್ತ ರೂ.10.00 ಲಕ್ಷಗಳು, ಗರಿಷ್ಠ ಅಂ.ಮೊತ್ತ ರೂ. 60.00 ಲಕ್ಷಗಳು) ಈ ಕಾಮಗಾರಿಗಳಿಗೆ ಅರ್ಹ KPWD/CPWD ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ ಐಟಂ ರೇಟ್ ದರಗಳಂತೆ ಕೆಪಿಪಿ ಪೋರ್ಟಲ್ ಮುಖಾಂತರ ಏಕಲಕೋಟೆ ಮತ್ತು ದ್ವಿಲಕೋಟೆ ಪದ್ಧತಿಯಂತೆ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 05.06.2026 ರಿಂದ ಪಡೆಯ ಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15.06.2026 ರಂದು ಸಂಜೆ 16:30ರವರೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿತ್ರದುರ್ಗ.

DIPR/CTA/KSMCA/149/2026-27

ಕೋನಪ್ಪನ ಅಗ್ರಹಾರ ಪುರಸಭಾ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ - 560100.

ಇ-ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸಕೋಸ/ತಾಶಾ/04/2026-27 ದಿನಾಂಕ: 03-06-2026

ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ 2026-27 ನೇ ಸಾಲಿನ ಸಾಮಾನ್ಯ ಅನುದಾನದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದೆ, ಅದರಂತೆ ಆಸಕ್ತಿಯುಳ್ಳ ಅಧಿಕೃತ ನೋಂದಾಯಿತ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದಾಗಿದೆ. **https://kppp.karnataka.gov.in** ಸದರಿ ಟೆಂಡರ್‌ಗೆ ಭಾಗವಹಿಸುವ ದಿನಾಂಕಗಳು ಈ ಕೆಳಕಂಡಂತಿದ್ದು, ಇನ್ನೂ ಹೆಚ್ಚಿನ ವಿವರಗಳಿಗೆ **ಕೋನಪ್ಪನ ಅಗ್ರಹಾರ ಪುರಸಭೆಯಲ್ಲಿ** ಕಚೇರಿ ವೇಳೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಕ್ರ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಟೆಂಡರ್‌ಗೆ ಇರಿಸಲಾದ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಮೀಸಲಾತಿ
1	DMA/2026-27/OW/WORK_INDENT59161	22.05	1867308.00	46683.00	ಸಾಮಾನ್ಯ
2	DMA/2026-27/EL/WORK_INDENT59162	22.70	1920882.00	48022.00	ಸಾಮಾನ್ಯ
3	DMA/2026-27/IW/WORK_INDENT59153	17.35	1465985.00	36753.00	ಸಾಮಾನ್ಯ

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **17-06-2026 ಸಮಯ: 17.00 ಗಂಟೆವರೆಗೆ** ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18-06-2026 ಸಮಯ: 17.30 ಗಂಟೆಗೆ.** ಮೇಲ್ಕಂಡ ದಿನಾಂಕಗಳನ್ನು ರಜಾ ದಿನಗಳನ್ನಾಗಿ ಘೋಷಿಸಿದ್ದಲ್ಲಿ ಮುಂದಿನ ಕೆಲಸ ದಿನವನ್ನು ಪರಿಗಣಿಸಲಾಗುವುದು.

ಸಹಿ/- ಆಡಳಿತಾಧಿಕಾರಿಗಳು, ಕೋನಪ್ಪನ ಅಗ್ರಹಾರ ಪುರಸಭೆ, ಬೆಂಗಳೂರು ನಗರ ಜಿಲ್ಲೆ.
ಸಹಿ/- ಮುಖ್ಯಾಧಿಕಾರಿಗಳು, ಕೋನಪ್ಪನ ಅಗ್ರಹಾರ ಪುರಸಭೆ, ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ/985/ಅಡ್ವಟೋರ್/2026-27

NATIONAL URBAN HEALTH MISSION

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ) ರವರ ಕಛೇರಿ, ಅನೆಕ್ಸ್ ಕಟ್ಟಡ-2, ಜಿಬಿಎ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು-560002.

ಸಂಖ್ಯೆ: ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿಆರ್/ಪಿ-09/2026-27 ದಿನಾಂಕ: 04-06-2026

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯ NUHM, CHILD HEALTH ಮತ್ತು NTEP ಕಾರ್ಯಕ್ರಮಗಳ ಅಡಿಯಲ್ಲಿ ಖಾಲಿ ಇರುವ ವೈದ್ಯರು ಮತ್ತು ಫಾರ್ಮಸಿಸ್ಟ್ ಹುದ್ದೆಗಳನ್ನು ದಿನಾಂಕ: 31-03-2027 ರ ವರೆಗಿನ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ವಾಕ್ ಇನ್ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl. No.	PROGRAMME NAME	NAME OF THE POST	NO OF POSTS	EDUCATION QUALIFICATION	ROSTER		SALARY/ MONTH	Walk in Place, Date & Time
					RPC	HK		
1	NUHM	MEDICAL OFFICER	14	MBBS with KMC Registration, Age Limit: 45 years	RPC-13 (GM-6, oth-1, F-2, R-2, PH-1), SC-A-1-oth, SC-B-1-oth, ST-1-oth, CAT1-1-oth, 2A-2 (oth-1, F-1), 2B-1-oth)	HK-1 (SC-A -1-oth)	60,000/-	PLACE: Dr. Rajkumar Glass House, Opposite to Annex-3 Building, GBA Head Office, N.R. Square, Bengaluru - 560002. DATE: 11-06-2026 TIME: 10.00 AM to 4.00 PM
2	NUHM	PHARMACIST	18	B-Pharma/ D-Pharma and Registered in State Pharmacy Council., Age Limit: 40 years	RPC-16 (GM-8, oth-2, F-3, R-2, PH-1), SC-A-1-oth, SC-B-1-oth, SC-C-1-oth, ST-1-oth, CAT1-1-oth, 2A-2 (oth-1, F-1), 2B-oth-1)	HK-2 (SC-A -1-oth), GM-1-oth)	20,594/-	
3	NTEP	MEDICAL OFFICER	03	MBBS with KMC Registration, Age Limit: 45 years	RPC-3 (GM-1, oth, SC-A-1-oth, ST-1-oth)	-	60,000/-	
4	CHILD HEALTH	MEDICAL OFFICER	06	MBBS with KMC Registration, Age Limit: 45 years	RPC-6 (GM-3 (oth-1, F-1, R-1), SC-A-1-oth, ST-1-oth, CAT1-1 oth, 2A-1 oth)	-	60,000/-	

ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ. ಆಸಕ್ತರು ಜಿ.ಬಿ.ಎ ವೆಬ್‌ಸೈಟ್‌ನಲ್ಲಿರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ 02 ಪ್ರತಿ Checklist ಹಾಗೂ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳನ್ನು ಒಂದು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ ಹಾಗೂ ಎರಡು ಭಾವಚಿತ್ರಗಳೊಂದಿಗೆ ಮೇಲೆ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಸದರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವೆಬ್‌ಸೈಟ್: **www.bbmp.gov.in** ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ವಿಶೇಷ ಸೂಚನೆ: ಸದರಿ ಪ್ರಕಟಣೆಯು ಎನ್.ಹೆಚ್.ಎಂ ಮಾರ್ಗಸೂಚಿಗೆ ಒಳಪಟ್ಟಿರುತ್ತದೆ.

ಸಹಿ/- ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ)
ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಟ್ರಂಪ್ ಯುದ್ಧ ಅಧಿಕಾರಕ್ಕೆ ಬ್ರೇಕ್?

ಇರಾನ್ ಮೇಲೆ ದಾಳಿ ನಡೆಸದಂತೆ ನಿರ್ಣಯ ಅಂಗೀಕಾರ | ಪ್ರತಿಪಕ್ಷ ಬೆಂಬಲಿಸಿದ ರಿಪಬ್ಲಿಕನ್ ಸಂಸದರು

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಸ್ವಪಕ್ಷದಿಂದಲೇ ಮುಖಭಂಗವಾಗಿದೆ. ಇರಾನ್ ವಿರುದ್ಧದ ಯುದ್ಧಮುಂದುವರಿಸದಂತೆ ತಡೆಯಲು ಸಂಸತ್ ಕೆಳಮನೆಯಲ್ಲಿ (ಪ್ರಜಾಪ್ರತಿನಿಧಿ ಸಭೆ) ಪ್ರತಿಪಕ್ಷ ಡೆಮಾಕ್ರಟಿಕ್ ಜತೆಗೂಡಿದ ರಿಪಬ್ಲಿಕನ್ ಸಂಸದರು 'ಯುದ್ಧ ಅಧಿಕಾರ ನಿರ್ಣಯ' ಅಂಗೀಕರಿಸಿದ್ದಾರೆ.

ಮೂರು ತಿಂಗಳಿನಿಂದ ನಡೆಯುತ್ತಿರುವ ಸಂಘರ್ಷ, ಹೆಚ್ಚುತ್ತಿರುವ ಆರ್ಥಿಕ ನಷ್ಟದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಆಡಳಿತಾರೂಢ ಪಕ್ಷದ ನಾಲ್ವರು ಸಂಸದರು, ಡೆಮಾಕ್ರಟಿಕ್ ಪಕ್ಷದ ಜತೆ ಕೈಜೋಡಿಸುವ ಮೂಲಕ 215–208 ಮತಗಳಿಂದ ಯುದ್ಧ ಅಧಿಕಾರ ನಿರ್ಣಯ ಅಂಗೀಕರಿಸಲು ನೆರವಾದರು.

ಕೆಳಮನೆಯಲ್ಲಿ ಅಂಗೀಕರಿಸಲ್ಪಟ್ಟ ಯುದ್ಧ ಅಧಿಕಾರ ನಿರ್ಣಯ ಮೇಲ್ಮನೆ ಸೆನೆಟ್ ಒಪ್ಪಿಗೆ ಪಡೆಯಬೇಕಿದೆ. ಜತೆಗೆ ಅಧ್ಯಕ್ಷರ ವೀಟೊ ಅಧಿಕಾರ ಪ್ರಯೋಗದ ಪರೀಕ್ಷೆ ಎದುರಿಸಬೇಕಿದೆ. ಎರಡೂ ಮನೆಯಲ್ಲಿ ನಿರ್ಣಯ ಅಂಗೀಕಾರಗೊಂಡಲ್ಲಿ ಅಮೆರಿಕ ಅಧ್ಯಕ್ಷರ ಯುದ್ಧ ಅಧಿಕಾರಕ್ಕೆ ಕತ್ತರಿ ಬೀಳಲಿದೆ. ಇರಾನ್ ವಿರುದ್ಧದ ಯುದ್ಧ ಕೊನೆಗೊಳ್ಳಲಿದೆ ಎಂದು ರಾಜಕೀಯ ತಜ್ಞರು ವಿಶ್ಲೇಷಿಸಿದ್ದಾರೆ.

ಹೌಸ್ ಫಾರಿನ್ ಅಫೇರ್ಸ್ ಕಮಿಟಿಯ ಸದಸ್ಯ ಹಾಗೂ ನ್ಯೂಯಾರ್ಕ್ ಸಂಸದ ಗ್ರೆಗೊರಿ ಮೀಕ್ಸ್ ಅವರು ಯುದ್ಧ ನಿಲ್ಲಿಸುವ ನಿರ್ಣಯ ಮಂಡಿಸಿದರು. ಅಚ್ಚರಿ ಎಂಬಂತೆ ರಿಪಬ್ಲಿಕನ್ ಸಂಸದರಾದ ಥಾಮಸ್ ಮಾಸ್ಸಿ, ಬ್ರಿಯಾನ್ ಫಿಟ್ಜ್‌ಪ್ಯಾಟ್ರಿಕ್, ಟಾಮ್ ಬ್ಯಾರೆಟ್, ವಾರೆನ್ ಡೇವಿಡ್ಸನ್ ಪ್ರತಿಪಕ್ಷ ಮಂಡಿಸಿದ ನಿರ್ಣಯ ಬೆಂಬಲಿಸಿದರು. 215–208ರ ಅಲ್ಪ ಮತಗಳ ಅಂತರದಿಂದ ನಿರ್ಣಯ ಅಂಗೀಕಾರಗೊಂಡಿತು.

ಅಮೆರಿಕ ಸಂಸತ್ ಕಾಂಗ್ರೆಸ್‌ನ ಎರಡೂ ಸದನಗಳಲ್ಲಿ ಟ್ರಂಪ್ ಅವರ ಯುದ್ಧದ ಅಧಿಕಾರವನ್ನು ನಿಯಂತ್ರಿಸಲು ಸಂಸದರು ನಡೆಸುತ್ತಿರುವ ನಿರಂತರ ಪ್ರಯತ್ನಕ್ಕೆ ಮೊದಲ ಜಯ ಲಭಿಸಿದೆ. ಪ್ರತಿಪಕ್ಷದ ಹೋರಾಟವನ್ನು ರಿಪಬ್ಲಿಕನ್ ಸಂಸದರು ಬೆಂಬಲ ವ್ಯಕ್ತಪಡಿಸಿರುವುದು, ಟ್ರಂಪ್‌ಗೆ ಭಾರಿ ಹಿನ್ನಡೆಯಾಗಿದೆ.

ಸಂವಿಧಾನ ಉಲ್ಲಂಘನೆ ಆರೋಪ: ಕೆಳಮನೆಯಲ್ಲಿ 'ಯುದ್ಧ ಅಧಿಕಾರ ನಿರ್ಣಯ' (ವಾರ್ ಪವರ್ ರೆಸಲ್ಯೂಶನ್) ಅಂಗೀಕಾರವಾಗಿರುವುದು ಟ್ರಂಪ್ ಆಡಳಿತದ ನೀತಿಗಳ ವಿರುದ್ಧ ಸಂಸದರ ನಡುವೆ ಹೆಚ್ಚುತ್ತಿರುವ ಭಿನ್ನಾಭಿಪ್ರಾಯವನ್ನು ಬಹಿರಂಗಪಡಿಸಿದೆ. ಯುದ್ಧ ಅಧಿಕಾರ ಕಾಯಿದೆ ಬಳಸಿಕೊಂಡು ಇರಾನ್ ವಿರುದ್ಧ ಸಮರ ಸಾರಿದ ಟ್ರಂಪ್ ಅವರು ಸಂವಿಧಾನ ಉಲ್ಲಂಘಿಸಿದ್ದಾರೆ. 60 ದಿನಗಳ ಯುದ್ಧದ ಬಳಿಕವೂ ಸಂಸತ್ ಒಪ್ಪಿಗೆ ಪಡೆಯದೇ ರಕ್ಷಣಾ ಪಡೆಗಳನ್ನು ಯುದ್ಧ ಭೂಮಿಯಲ್ಲೇ ಉಳಿಸಿದ್ದಾರೆ ಎಂದು ಡೆಮಾಕ್ರಟಿಕ್ ಪಕ್ಷ ಆರೋಪಿಸಿದೆ.

ಸ್ವಪಕ್ಷದ ಸಂಸದರ ವಿರುದ್ಧ ಆಕ್ರೋಶ: ''ಇರಾನ್ ವಿರುದ್ಧದ ಸಂಘರ್ಷ ಕೊನೆಗಾಣಿಸಲು ನಡೆಯುತ್ತಿರುವ ಮಾತುಕತೆಯ ಅಂತಿಮ ಘಟ್ಟದಲ್ಲಿ ಯುದ್ಧ ನಿಲ್ಲಿಸುವ ನಿರ್ಣಯ ಅಂಗೀಕರಿಸಲಾಗಿದೆ. ರಿಪಬ್ಲಿಕನ್ ಪಕ್ಷದ ನಾಲ್ವರು ಕೆಟ್ಟ ಸದಸ್ಯರು ಡೆಮಾಕ್ರಟಿಕ್ ಪಕ್ಷ ಬೆಂಬಲಿಸುವ ಮೂಲಕ ದೇಶದ್ರೋಹಿ ಕೆಲಸ ಮಾಡಿದ್ದಾರೆ,''' ಎಂದು ಟ್ರಂಪ್ ಕಿಡಿಕಾರಿದ್ದಾರೆ.

ನೆಹರು ಆಡಳಿತ ದಾಖಲೆ ಮುರಿಯಲಿದ್ದಾರೆ ಮೋದಿ

ಜೂನ್ 10ಕ್ಕೆ ದೀರ್ಘಕಾಲ ಆಳಿದ ಮೊದಲ ಪ್ರಧಾನಿಯ ದಾಖಲೆಗೆ ಸಡ್ಡು

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ರಾಜಕೀಯ ಜೀವನದಲ್ಲಿ ಹೊಸ ದಾಖಲೆ ಬರೆಯುವ ಸನಿಹದಲ್ಲಿದ್ದಾರೆ. ಜೂನ್ 10 ರಂದು ದೇಶವನ್ನು ಸತತವಾಗಿ ದೀರ್ಘಕಾಲ ಆಳಿದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರು ಅವರ ದಾಖಲೆಯನ್ನು ಮುರಿಯಲಿದ್ದಾರೆ.

ಸ್ವಾತಂತ್ರ್ಯ ನಂತರ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಜವಾಹರಲಾಲ್ ನೆಹರು ಅವರು ಸತತ ಮೂರು ಚುನಾವಣೆ ಗೆಲ್ಲುವ ಮೂಲಕ 4,398 ದಿನಗಳ ಕಾಲ ಅಧಿಕಾರದಲ್ಲಿದ್ದರು. ಸತತ ಮೂರು ಚುನಾವಣೆಯಲ್ಲಿ ಜಯಗಳಿಸಿರುವ ಪ್ರಧಾನಿ ಮೋದಿ ಅವರು ಜೂನ್ 10 ರಂದು 4,399 ದಿನಗಳ ಅಧಿಕಾರ ಅವಧಿ ಪೂರೈಸುವ ಮೂಲಕ ನೆಹರು ಸುದೀರ್ಘ ಆಡಳಿತ ಅವಧಿಯ ದಾಖಲೆಯನ್ನು ಹಿಂದಿಕ್ಕಲಿದ್ದಾರೆ.

ಮುನ್ನಡೆಸುವ ಇರಾದೆ ಹೊಂದಿದ್ದರು. ಹೊಸ ಅಲಿಪ್ತ ನೀತಿಯ ಮೂಲಕ ಪ್ರತ್ಯೇಕ ವಿದೇಶಾಂಗ ನೀತಿ ರೂಪಿಸಿದರು. ಮೋದಿ ಅವರ ಅವಧಿಯಲ್ಲಿ ಜಗತ್ತು ಸಂಘರ್ಷದ ಬೇಗುದಿಯಲ್ಲಿ ಬೇಯುತ್ತಿದೆ. ರಷ್ಯಾ–ಉಕ್ರೇನ್, ಇಸ್ರೇಲ್–ಹಮಾಸ್, ಅಮೆರಿಕ–ಇರಾನ್ ಯುದ್ಧಗಳು ಜಾಗತಿಕವಾಗಿ ಆಹಾರ, ಇಂಧನ ಭದ್ರತೆ ಮೇಲೆ ಪರಿಣಾಮ ಬೀರಿವೆ. ಅಮೆರಿಕ, ರಷ್ಯಾ, ಯುರೋಪ್, ಪಶ್ಚಿಮ ಏಷ್ಯಾ ದೇಶಗಳ ಜತೆ ಬಾಂಧವ್ಯ ರೂಪಿಸಿರುವ ಮೋದಿ ಅವರು, ಸಮಕಾಲೀನ ರಾಜತಾಂತ್ರಿಕ ನೀತಿಯಂತೆ ದೇಶ ಮುನ್ನಡೆಸಿದ್ದಾರೆ.



ಬದಲಾದ ಆಡಳಿತ ಗಾತ್ರ: ನೆಹರು ಕಾಲದಲ್ಲಿ ದೇಶದ ಜನಸಂಖ್ಯೆ 34 ಕೋಟಿಯಷ್ಟಿದ್ದರೆ, ಮೋದಿ ಅವಧಿಯಲ್ಲಿ 140 ಕೋಟಿ ದಾಟಿದೆ. ಮತದಾರರ ಸಂಖ್ಯೆ, ಆರ್ಥಿಕತೆ, ಮಾಧ್ಯಮ ವ್ಯವಸ್ಥೆ, ರಾಜಕೀಯ ಭೂದೃಶ್ಯ ಸೇರಿ ಎಲ್ಲವೂ ಅಗಾಧವಾಗಿ ಬೆಳೆದಿದೆ. ನೆಹರು ಕಾಲದಲ್ಲಿ ಏಕಪಕ್ಷೀಯವಾಗಿದ್ದ ಚುನಾವಣಾ ರಾಜಕೀಯ ವ್ಯವಸ್ಥೆ, ಮೋದಿ ಕಾಲಘಟ್ಟದ ವೇಳೆಗೆ ಸ್ಪರ್ಧಾತ್ಮಕವಾಗಿ ಬಹುಪಕ್ಷೀಯವಾಗಿ ಬದಲಾಗಿದೆ. ಪ್ರಾದೇಶಿಕ ಪಕ್ಷಗಳು ರಾಷ್ಟ್ರ ರಾಜಕಾರಣದ ಮೇಲೆ ಪ್ರಭಾವ ಬೀರುವಷ್ಟರ ಮಟ್ಟಿಗೆ ಬೆಳೆದಿವೆ.

ಇಬ್ಬರು ನಾಯಕರು ದೇಶ ಪರಿವರ್ತನೆಯ ಕಾಲಘಟ್ಟದಲ್ಲಿ ಅಧಿಕಾರ ವಹಿಸಿಕೊಂಡಿದ್ದರು. ಮೊದಲ ಪ್ರಧಾನಿ ನೆಹರು ಅವರು ಸ್ವಾತಂತ್ರ್ಯಗೊಂಡ ಬಳಿಕ ದೇಶದಲ್ಲಿ ರಾಜಕೀಯ ಸ್ಥಿರತೆ ರೂಪಿಸುವ ಜತೆಗೆ ಆರ್ಥಿಕ ಹಿತಾಸಕ್ತಿ ಕಾಯ್ದುಕೊಳ್ಳುವ ದೊಡ್ಡ ಸವಾಲು ಎದುರಿಸಿದರು. ಮೋದಿ ಅವರ ತಮ್ಮ ಅವಧಿಯಲ್ಲಿ ದೇಶವನ್ನು ಜಾಗತಿಕ ಆರ್ಥಿಕತೆಯೊಂದಿಗೆ ಸ್ಪರ್ಧಾತ್ಮಕವಾಗಿಸುವ ವಿಕಸಿತ ಭಾರತ ಕಟ್ಟಲು ಭದ್ರ ಬುನಾದಿ ಹಾಕಿದರು.

ನೆಹರು ಕಾಲಘಟ್ಟದಲ್ಲಿ ಜಗತ್ತು ಶೀತಲ ಸಮರದಲ್ಲಿ ಸಿಲುಕಿತ್ತು. ಅಮೆರಿಕ–ರಷ್ಯಾ ಎರಡು ಶಕ್ತಿ ಕೇಂದ್ರಗಳ ಮಧ್ಯೆ ವಿಭಜನೆಯಾಗಿತ್ತು. ಯಾವುದೇ ಒಕ್ಕೂಟ ಸೇರದೆ ಭಾರತವನ್ನು ಸ್ವತಂತ್ರವಾಗಿ

ನೆಹರು ಅವಧಿಯಲ್ಲಿ ಪತ್ರಿಕೆ, ರೇಡಿಯೊಗಳಿಗೆ ಸೀಮಿತವಾಗಿದ್ದ ಮಾಧ್ಯಮ, ಮೋದಿ ಆಡಳಿತದ ವೇಳೆಗೆ 24 ಗಂಟೆ ಸುದ್ದಿ ಬಿತ್ತರಿಸುವ ನ್ಯೂಸ್ ಚಾನೆಲ್‌ಗಳ ಜತೆಗೆ ಸಾಮಾಜಿಕ ಜಾಲತಾಣಗಳು ಕಾರ್ಯ ನಿರ್ವಹಿಸುತ್ತಿದ್ದು, ಕ್ಷಣಾರ್ಧದಲ್ಲಿ ಸಾರ್ವಜನಿಕ ಅಭಿಪ್ರಾಯ ಬದಲಿಸುವಷ್ಟು ಪ್ರಬಲವಾಗಿ ಬೆಳೆದಿವೆ.

ಪ್ರತ್ಯೇಕ ಕಾಲಘಟ್ಟದಲ್ಲಿ ಭಿನ್ನ ಸಮಸ್ಯೆ

ನೆಹರು ಹಾಗೂ ಮೋದಿ ಅವರು ಭಿನ್ನ ಕಾಲಘಟ್ಟದಲ್ಲಿ ಭಾರತವನ್ನು ಮುನ್ನಡೆಸಿದ್ದಾರೆ. ನಿರ್ಣಾಯಕ ಅವಧಿಯಲ್ಲಿ ದೇಶವನ್ನು ಸಮರ್ಥವಾಗಿ ಬೆಳೆಸಿದ್ದಾರೆ. ಆದರೆ, ಇಬ್ಬರ ಕಾಲಘಟ್ಟದ ಸಮಸ್ಯೆಗಳು, ಸನ್ನಿವೇಶಗಳು ಮಾತ್ರ ವಿಭಿನ್ನವಾಗಿವೆ. ನೆಹರು ಅವರು ಗುಲಾಮಗಿರಿಯಿಂದ ಹೊರ ಬಂದಿದ್ದ ದೇಶಕ್ಕೆ ಭದ್ರವಾದ ಅಡಿಪಾಯ ಹಾಕುವ ಬಹುದೊಡ್ಡ ಸವಾಲು ಎದುರಿಸಿದರು. ಮೋದಿ ಅವರು ಜಾಗತಿಕ ಸಂಘರ್ಷ, ಸಾಂಕ್ರಾಮಿಕ ರೋಗಗಳ, ಆರ್ಥಿಕ ಅಡೆತಡೆಗಳ ನಡುವೆ ಭಾರತವನ್ನು ಮುನ್ನಡೆಸಿದರು.

ಇಸ್ರೇಲ್–ಲೆಬನಾನ್ ಕದನವಿರಾಮ ಒಪ್ಪಂದ

ವಾಷಿಂಗ್ಟನ್: ಅಮೆರಿಕ ಮಧ್ಯಸ್ಥಿಕೆಯಲ್ಲಿ ಇಸ್ರೇಲ್ ಹಾಗೂ ಲೆಬನಾನ್ ನಡುವೆ ಷರತ್ತುಬದ್ಧ ಕದನವಿರಾಮ ಒಪ್ಪಂದ ಏರ್ಪಟ್ಟಿದೆ. ವಾಷಿಂಗ್ಟನ್‌ನಲ್ಲಿ ನಡೆದ ರಾಜತಾಂತ್ರಿಕ ಮಾತುಕತೆ ಬಳಿಕ ಉಭಯ ದೇಶಗಳು ಒಪ್ಪಂದಕ್ಕೆ ಸಹಿ ಹಾಕಿವೆ.

ಔಪಚಾರಿಕ ರಾಜತಾಂತ್ರಿಕ ಸಂಬಂಧಗಳನ್ನು ಹೊಂದದ ಹೊರತಾಗಿಯೂ ಉಭಯ ದೇಶಗಳು ಪೈಲಟ್ ವಲಯ ರಚಿಸಲು ಒಪ್ಪಿಕೊಂಡಿವೆ. ಲೆಬನಾನ್ ಪಡೆಗಳು 'ಪೈಲಟ್ ವಲಯ'ದ ಮೇಲೆ ವಿಶೇಷ ನಿಯಂತ್ರಣ ಹೊಂದಲು ಅವಕಾಶ ನೀಡಲಾಗಿದೆ. ಅಲ್ಲದೇ, ಇತರೆ ಸೇನೆಗಳು, ಅರೆಸೇನಾಪಡೆಗಳು ಈ ವಲಯಕ್ಕೆ ಪ್ರವೇಶಿಸದಂತೆ ನಿರ್ಬಂಧ ಹೇರಲಾಗಿದೆ. ಅಮೆರಿಕ ಜತೆಗಿನ ಸಂಧಾನ ಒಪ್ಪಂದ ಪೂರ್ಣಗೊಳ್ಳಬೇಕಾದರೆ ಲೆಬನಾನ್ ಮೇಲಿನ ಇಸ್ರೇಲ್ ದಾಳಿ ಪೂರ್ಣವಾಗಿ ನಿಲ್ಲಿಸಬೇಕು ಎಂಬ ಇರಾನ್ ಒತ್ತಡ ಹೇರುತ್ತಲೇ ಇದೆ. ಈ ಒತ್ತಾಯದ ನಡುವೆ ಇಸ್ರೇಲ್–ಲೆಬನಾನ್(ಹೆಜ್ಬೊಲ್ಲಾ ಪಡೆ) ಕದನ ವಿರಾಮ ಒಪ್ಪಂದಕ್ಕೆ ಸಹಿ ಹಾಕಿವೆ. ಲೆಬನಾನ್‌ನಲ್ಲಿರುವ ಶತ್ರುಗಳು ಮೊದಲು ದೇಶ ಬಿಟ್ಟು ಹೋಗಬೇಕು. ಲೆಬನೀಸ್ ಜನರ ಮೇಲಿನ ದಾಳಿಯನ್ನು ಕೂಡಲೇ ನಿಲ್ಲಿಸಬೇಕು. ಅಂತಾರಾಷ್ಟ್ರೀಯ ಗಡಿ ರೇಖೆಯಿಂದ ಇಸ್ರೇಲಿ ಸೇನಾಪಡೆಗಳನ್ನು ಹಿಂದಕ್ಕೆ ಪಡೆದುಕೊಳ್ಳಬೇಕು ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ) ಹೇಳಿದೆ.

ಟಿಸಿಎಸ್ ಬಳಿಕ ಮತ್ತೊಂದು ಕಾರ್ಪೊರೇಟ್ ಜಿಹಾದ್!

ಪುಣೆ: ವಿಪ್ರೋ ಟೆಕ್ನಾಲಜೀಸ್ ವಿರುದ್ಧ ಮಾಜಿ ಮಹಿಳಾ ಉದ್ಯೋಗಿಯೊಬ್ಬರು ಗಂಭೀರ ಆರೋಪ ಮಾಡಿದ್ದು, ಧರ್ಮದ ಆಧಾರದ ಮೇಲೆ ತಮಗೆ ಮಾನಸಿಕ ಕಿರುಕುಳ ನೀಡಲಾಗಿದೆ ಎಂದಿದ್ದಾರೆ.

ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಒತ್ತಡ ಹೇರಲಾಗಿದೆ ಹಾಗೂ ಬಲವಂತವಾಗಿ ರಾಜೀನಾಮೆ ಪಡೆಯಲಾಗಿದೆ ಎಂದು ಆರೋಪಿಸಿ ಅವರು ಸಂಸ್ಥೆಗೆ ಕಾನೂನು ನೋಟಿಸ್ ಜಾರಿ ಮಾಡಿದ್ದಾರೆ. ಇತ್ತೀಚೆಗಷ್ಟೇ ಟಿಸಿಎಸ್ ಕಂಪನಿಯ ನಾಸಿಕ್ ಶಾಖೆಯಲ್ಲಿ ಉದ್ಯೋಗಿಗಳಿಗೆ ಕಿರುಕುಳ ನೀಡಿದ ಘಟನೆ ದೇಶಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿತ್ತು. ಆ ಬೆನ್ನಲ್ಲೇ ಸದ್ಯ ಪುಣೆಯ ಹಿಂಜಾವಾಡಿ ಕ್ಯಾಂಪಸ್‌ನಲ್ಲಿರುವ ವಿಪ್ರೋ ಸಂಸ್ಥೆಯಲ್ಲೂ ಕಾರ್ಪೊರೇಟ್ ಜಿಹಾದ್ ಪ್ರಕರಣ ಬೆಳಕಿಗೆ ಬಂದಿದೆ. 'ಹಿಂದೂ ಜನಜಾಗೃತಿ ಸಮಿತಿ' ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಸಂತ್ರಸ್ತ ಮಾಜಿ ಮಹಿಳಾ ಉದ್ಯೋಗಿ ತಮಗಾದ ಕಹಿ ಅನುಭವವನ್ನು ಹಂಚಿಕೊಂಡಿದ್ದಾರೆ. ''ನಾನು ವಿಪ್ರೋ ಸಂಸ್ಥೆಯ ಹಿಂಜಾವಾಡಿ ಕ್ಯಾಂಪಸ್‌ನಲ್ಲಿ ಕೆಲಸ ಮಾಡುತ್ತಿದ್ದಾಗ, ಸಹೋದ್ಯೋಗಿಯೊಬ್ಬರು ನನ್ನ ಮೇಲೆ ಇಸ್ಲಾಂ ಧರ್ಮಕ್ಕೆ ಮತಾಂತರವಾಗುವಂತೆ ನಿರಂತರವಾಗಿ ಒತ್ತಡ ಹೇರುತ್ತಿದ್ದರು. ಅಷ್ಟೇ ಅಲ್ಲದೆ, ಮುಸ್ಲಿಂ ವ್ಯಕ್ತಿಯೊಬ್ಬರ ಜತೆಗೆ ಸಂಬಂಧ ಬೆಳೆಸುವಂತೆಯೂ ಬಲವಂತ ಮಾಡುತ್ತಿದ್ದರು. ಒಂದು ವೇಳೆ ಧರ್ಮ ಬದಲಾಯಿಸಿದರೆ ಅತ್ಯುತ್ತಮ ಜೀವನ ಸಿಗುತ್ತದೆ

ಹಾಗೂ ವಿದೇಶದಲ್ಲಿ ಉದ್ಯೋಗದ ದೊಡ್ಡ ಅವಕಾಶಗಳು ಲಭ್ಯವಾಗುತ್ತವೆ ಎಂದು ಆಮಿಷ ಒಡ್ಡುತ್ತಿದ್ದರು,'' ಎಂದು ಅವರು ಗಂಭೀರ ಆರೋಪ ಮಾಡಿದ್ದಾರೆ. ಆರೋಪಿಸಿದ್ದಾರೆ. ''ಈ ಸೂಕ್ಷ್ಮ ವಿಚಾರವನ್ನು ನಾನು ಕಂಪನಿಯ ಹಿರಿಯ ಅಧಿಕಾರಿಗಳು ಹಾಗೂ ಮಾನವ ಸಂಪನ್ಮೂಲ ವಿಭಾಗದ ಗಮನಕ್ಕೆ ತಂದಿದ್ದೆ. ಆದರೆ ಅವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬದಲಾಗಿ, ದೂರು ನೀಡಿದ ನನ್ನ ವಿರುದ್ಧವೇ ಪ್ರತಿದೂರು ದಾಖಲಾಗುವಂತೆ ಮಾಡಲಾಯಿತು. 2025ರ ಆಗಸ್ಟ್‌ನಲ್ಲಿ ಸಭೆಯೊಂದಕ್ಕೆ ಕರೆದು, ನನ್ನಿಂದ ಬಲವಂತವಾಗಿ ರಾಜೀನಾಮೆ ಪಡೆದು ಕಂಪನಿಯಿಂದ ಹೊರಹಾಕಲಾಯಿತು,'' ಎಂದು ಸಂತ್ರಸ್ತೆ ಅಳಲು ತೋಡಿಕೊಂಡಿದ್ದಾರೆ.

ಅಪ್ಪ–ಅಮ್ಮ ನನ್ನನ್ನು ಕ್ಷಮಿಸಿ, ಮತ್ತೊಮ್ಮೆ ನೀಟ್ ಬರೆಯಲಾರೆ...

ಭೋಪಾಲ್: ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಹಗರಣದ ನಂತರ ತೀವ್ರ ಖಿನ್ನತೆಯಿಂದ ಬಳಲುತ್ತಿದ್ದ ನೀಟ್ ಆಕಾಂಕ್ಷಿ 18 ವರ್ಷದ ಆಕಾಂಕ್ಷಾ ಚತುರ್ವೇದಿ ಮೇ 20ರಂದು ಮಹಾರಾಷ್ಟ್ರದ ನಾಗ್ಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದು ದೇಶಾದ್ಯಂತ ಚರ್ಚೆಗೆ ಕಾರಣವಾಗಿತ್ತು. ಮಧ್ಯಪ್ರದೇಶದ ಮಾವೊಗಂಜ್ ಜಿಲ್ಲೆಯ ಆಕಾಂಕ್ಷಾ ನೇಣಿಗೆ ಶರಣಾಗುವ ಮುನ್ನ ಬರೆದಿಟ್ಟಿದ್ದ ಡೆತ್‌ನೋಟ್ ಸಂಬಂಧಿಕರಿಂದ ಗುರುವಾರ ಬೆಳಕಿಗೆ ಬಂದಿದೆ.

- ಆತ್ಮಹತ್ಯೆಗೆ ಶರಣಾದ ಆಕಾಂಕ್ಷಾ ಡೆತ್‌ನೋಟ್ ಬಯಲು

ಆಕಾಂಕ್ಷಾ ಮೇ 3ರಂದು ನಡೆದ ನೀಟ್–ಯುಜಿ ಪರೀಕ್ಷೆಗೆ ಹಾಜರಾಗಿದ್ದರು. ''ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಬೆಳಕಿಗೆ ಬಂದ ನಂತರ ಆಕಾಂಕ್ಷಾ ತುಂಬಾ ಖಿನ್ನತೆಗೆ ಒಳಗಾಗಿದ್ದಳು. ವರ್ಷಗಟ್ಟಲೆ ನಡೆಸಿದ ಕಠಿಣ ತಯಾರಿ ಮತ್ತು ಕುಟುಂಬದ ಆರ್ಥಿಕ ಸ್ಥಿತಿಗತಿ ಹಾಗೂ ಜೂನ್ 21 ರಂದು ನಡೆಯಲಿರುವ ಮರುಪರೀಕ್ಷೆಯ ಒತ್ತಡವು ಅವಳ ಮಾನಸಿಕ ಯಾತನೆಯನ್ನು ಮತ್ತಷ್ಟು ಹೆಚ್ಚಿಸಿತ್ತು,'' ಎನ್ನುತ್ತಾರೆ ಕುಟುಂಬಸ್ಥರು.

ಆಕಾಂಕ್ಷಾ ಚತುರ್ವೇದಿ, ''ಅಪ್ಪ – ಅಮ್ಮ, ನಿಮ್ಮ ಮಗಳು ಓದಿ ಡಾಕ್ಟರ್ ಆಗ್ತಾಳೆ ಅಂತ ನೀವು ನಂಬಿದ್ರಿ. ಆದರೆ, ನನಗೆ ಮತ್ತೊಮ್ಮೆ ನೀಟ್ ಪರೀಕ್ಷೆ ಬರೆಯುವ ಧೈರ್ಯವಿಲ್ಲ. ನಾನು ನಿಮ್ಮಿಬ್ಬರನ್ನೂ ದುಃಖಕ್ಕೆ ತಳ್ಳುತ್ತಿದ್ದೇನೆ. ಒಂದು ವೇಳೆ ನಾನು ಮತ್ತೊಮ್ಮೆ ಪರೀಕ್ಷೆ ಬರೆದರೂ ಉತ್ತಮ ಅಂಕ ಬರುತ್ತದೆ ಎಂಬ ಗ್ಯಾರಂಟಿ ಇಲ್ಲ,'' ಎಂದು ಡೆತ್‌ನೋಟ್ ಬರೆದಿಟ್ಟಿದ್ದು ಈಗ ಬೆಳಕಿಗೆ ಬಂದಿದೆ. ಮೇ 20ರಂದು ಆಕಾಂಕ್ಷಾ ನಾಗ್ಪುರದಲ್ಲಿ ವಾಸವಿದ್ದ ಕಟ್ಟಡದಲ್ಲಿ ಫ್ಯಾನ್‌ಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

> **ಕೇಂದ್ರ ಸರಕಾರ ಆಂತರಿಕ ದಂಗೆ ಎದುರಿಸುತ್ತಿದೆ. ಆರ್ಥಿಕ ವ್ಯವಸ್ಥೆ ಡೋಲಾಯಮಾನವಾಗಿದೆ. ಪರಿಸ್ಥಿತಿ ನಿಯಂತ್ರಿಸಲು ತುರ್ತು ಪರಿಸ್ಥಿತಿಯ ಸನ್ನಿವೇಶ ಸೃಷ್ಟಿಸಿದೆ. ಆಡಳಿತ ವ್ಯವಸ್ಥೆ ಮೇಲೆ ಪೂರ್ಣ ನಿಯಂತ್ರಣ ಕಳೆದುಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಇನ್ನೊಂದು ವರ್ಷವೂ ಅಧಿಕಾರದಲ್ಲಿ ಉಳಿಯುವುದಿಲ್ಲ.**
> **– ರಾಹುಲ್ ಗಾಂಧಿ** ಲೋಕಸಭೆ ಪ್ರತಿಪಕ್ಷ ನಾಯಕ

ವಿದ್ಯಾರ್ಥಿ ನೇಣಿಗೆ ಶರಣು

ಕೋಟಾ: ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ನಡೆಸಲಾಗುವ ಜಂಟಿ ಪ್ರವೇಶ ಪರೀಕ್ಷೆಗೆ (ಜೆಇಇ) ತಯಾರಿ ನಡೆಸುತ್ತಿದ್ದ 17 ವರ್ಷದ ಬಾಲಕನ ಮೃತದೇಹ ಫ್ಯಾನ್‌ಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಬುಧವಾರ ರಾತ್ರಿ ಪತ್ತೆಯಾಗಿದೆ. ರಾಜಸ್ಥಾನದ ಕೋಟಾದ ರಾಜೀವ್‌ಗಾಂಧಿ ನಗರದಲ್ಲಿರುವ ಪೇಯಿಂಗ್ ಗೆಸ್ಟ್‌ನಲ್ಲಿ ಬಾಲಕ ಉತ್ತರ ಪ್ರದೇಶ ಮೂಲದ ಆರ್ಯನ್ ಓಜಾ ಫ್ಯಾನ್‌ಗೆ ನೇಣು ಹಾಕಿಕೊಂಡಿದ್ದು, ಇದು ಆತ್ಮಹತ್ಯೆ ಎಂಬ ಶಂಕೆ ವ್ಯಕ್ತವಾಗಿದೆ.

ಪಾಕ್ ಅತ್ಯಾಚಾರ ಜಾಲದ ಕರಾಳತೆ ಬಯಲು

ಲಂಡನ್: ಬ್ರಿಟನ್‌ನಲ್ಲಿ ಹಲವು ವರ್ಷಗಳಿಂದ ಹೆಣ್ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ 'ಗ್ರೂಮಿಂಗ್ ಗ್ಯಾಂಗ್' ಪ್ರಕರಣ ಸದ್ದು ಮಾಡಿದೆ. ಅದರಲ್ಲೂ, ಮಕ್ಕಳ ಲೈಂಗಿಕ ಶೋಷಣೆಯಲ್ಲಿ ತೊಡಗಿರುವ ಭಯಾನಕ ಗ್ರೂಮಿಂಗ್ ಗ್ಯಾಂಗ್ ಜಾಲಗಳಲ್ಲಿ ಭಾಗಿಯಾದ ದುರುಳರಲ್ಲಿ ಬಹುತೇಕರು ಪಾಕಿಸ್ತಾನ ಮೂಲದ ಟ್ಯಾಕ್ಸಿ ಚಾಲಕರು ಹಾಗೂ ವ್ಯಾಪಾರಿಗಳು ಎಂಬುದು ತಿಳಿದುಬಂದಿದೆ.

ಸಂಸದ ರೂಪರ್ಟ್ ಲೋವ್ ಅವರು ಇತ್ತೀಚೆಗೆ ಈ ಸಂಬಂಧ ಸಂಸತ್ತಿನಲ್ಲಿ ವರದಿಯೊಂದನ್ನು ಮಂಡಿಸಿ ಭಾಷಣ ಮಾಡಿದ್ದು, ಅದು ಸಂಚಲನ ಮೂಡಿಸಿದೆ. ವರದಿಯಲ್ಲಿ ವರ್ಷಗಟ್ಟಲೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಮಕ್ಕಳು ಹಾಗೂ ಹದಿಹರೆಯದವರ ನೋವಿನ ಕಥೆಗಳಿವೆ. ವ್ಯಾನ್‌ನ ಹಿಂಭಾಗದಲ್ಲಿ ನಾಯಿಗಳನ್ನು ಇಡುವ ಪಂಜರಗಳಲ್ಲಿ ಹುಡುಗಿಯರನ್ನು ಕೂಡಿ ಹಾಕಿ ಲೈಂಗಿಕ ಶೋಷಣೆ ಎಸಗಿದ ಪ್ರಕರಣ, 13 ವರ್ಷದ ಬಾಲಕಿ ಮೇಲೆ ಮೂರು ವರ್ಷ ಕಾಲ 600–700 ದುರುಳರು ಅತ್ಯಾಚಾರ ನಡೆಸಿದ ಪ್ರಕರಣ, ಆಂತರಿಕ ರಕ್ತಸ್ರಾವದಿಂದ ಬಳಲುತ್ತಿದ್ದ ಲೈಂಗಿಕ ಶೋಷಣೆಗೆ ಒಳಗಾದ ಬಾಲಕಿಯೊಬ್ಬಳನ್ನು ಯಾವುದೇ ಪ್ರಶ್ನೆ ಕೇಳದೇ ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ಸಂಗತಿಗಳೂ ವರದಿಯಲ್ಲಿವೆ.

ಬಾಲಕಿ ಮೇಲೆ 700 ದುರುಳರ ಲೈಂಗಿಕ ಕಿರುಕುಳ

ಸಂಸದ ರೂಪರ್ಟ್ ಲೋವ್ ಅವರು ಗುಂಪು ಆಧಾರಿತ ಮಕ್ಕಳ ಲೈಂಗಿಕ ಶೋಷಣೆಯ ಕುರಿತಾದ ಸ್ವತಂತ್ರ ವಿಚಾರಣೆ ಸಮಯದಲ್ಲಿ ಕನಿಷ್ಠ 85 ಪ್ರಕರಣಗಳ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದು ಅದರನ್ನು ಸಂಸತ್ತಿನ ಗಮನಕ್ಕೆ ತಂದರು. ಇದರಲ್ಲಿ ಲೈಂಗಿಕ ದೌರ್ಜನ್ಯ, ಮಕ್ಕಳ ಗರ್ಭಧಾರಣೆ, ಬೆದರಿಕೆ, ಪೊಲೀಸ್ ದುಷ್ಕೃತ್ಯ ಮತ್ತು ಸಾಂಸ್ಥಿಕ ವೈಫಲ್ಯಗಳ ಕುರಿತು ಬೆಳಕು ಚೆಲ್ಲಲಾಗಿದೆ. ವರದಿ ಮಂಡಿಸಿ ಮಾಡಿದ ಭಾಷಣದಲ್ಲಿ ರೂಪರ್ಟ್ ಅವರು, ''ನಾನು 13 ವರ್ಷದವಳಿದ್ದಾಗ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಶುರುವಾಯಿತು. ಸತತ 3 ವರ್ಷಗಳ ಕಾಲ ಸುಮಾರು 600–700 ವಿಭಿನ್ನ ಪುರುಷರು ನನ್ನ ಮೇಲೆ ಎರಗಿದರು. ನನ್ನ ಗುಪ್ತಾಂಗ ಹಾಗೂ ಬೆನ್ನಿನಿಂದ ರಕ್ತಸ್ರಾವವಾಗಿತ್ತು. ಪಾನೀಯದಲ್ಲಿ ಮದ್ಯ ಬೆರೆಸಿ ನನಗೆ ಕುಡಿಸಿ ದೌರ್ಜನ್ಯ ಎಸಗಿದ್ದಾರೆಂದು ನಾನು ಆಸ್ಪತ್ರೆ ಸಿಬ್ಬಂದಿಗೆ ಹೇಳಿದ್ದೆ. ಅವರು ಯಾವುದೇ ಪ್ರಶ್ನೆಗಳನ್ನು ಕೇಳದೆ ನನಗೆ ಮಾತ್ರೆಗಳನ್ನು ನೀಡಿ ಬಿಡುಗಡೆ ಮಾಡಿದ್ದಾರೆ,'' ಎಂಬ ಬಾಲಕಿಯ ಹೇಳಿಕೆಯನ್ನು ಸಾಕ್ಷ್ಯದ ರೂಪದಲ್ಲಿ ಉಲ್ಲೇಖಿಸಿದ್ದು, ಭಾರಿ ಸಂಚಲನ ಮೂಡಿಸಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು
ಆಸ್ತಿ ಅಧಿಕಾರಿಗಳು ಆಸ್ತಿ ವಿಭಾಗ, ರಾಯಚೂರು.

ಸಂಖ್ಯೆ/ಆಅ/ಆವಿ/ಟೆ.ನೋ–193/2026–27 ದಿನಾಂಕ:02–06–2026.

ಟೆಂಡರ್ ಅಧಿಸೂಚನೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮುಖ್ಯ ಆವರಣ, ಮತ್ತು ಇತರೆ ಆವರಣಗಳಲ್ಲಿರುವ ವಿವಿಧ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಭಾಗಗಳಿಗೆ ಹಾಗೂ ಅಲ್ಲಿಯ ಸ್ಥಿರ ಮತ್ತು ಚರಾಸ್ತಿಗಳಿಗೆ, ರಕ್ಷಣೆ ಒದಗಿಸಲು ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಭದ್ರತಾ ಸೇವೆ ಒದಗಿಸಲು ನಿಗದಿತ ನಮೂನೆಯಲ್ಲಿ ನೊಂದಾಯಿತ ಹಾಗೂ ಅರ್ಹ ಭದ್ರತಾ ಏಜನ್ಸಿದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://kppp.karnataka.gov.in ದಲ್ಲಿ ಲಭ್ಯವಿರುತ್ತದೆ. ಟೆಂಡರ್ ವೇಳಾ ಪಟ್ಟಿ :– (1) ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ:– 02–07–2026 ಸಾಯಂಕಾಲ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:– 03–07–2026 ಸಾಯಂಕಾಲ 4.10 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 – 220640) ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://kppp.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ (ಸಹಾಯಕ ದೂರವಾಣಿ ಸಂಖ್ಯೆ : 080–25501216 ಮತ್ತು 25501227) ಪಡೆಯಬಹುದು.

ಸಹಿ/– ಆಸ್ತಿ ಅಧಿಕಾರಿಗಳು
ಕೃವಿವಿ, ರಾಯಚೂರು.

DIP/RCR/98/KSMC&A/100/2026-27

LET TRUTH PREVAIL

THE TIMES OF INDIA

TENDER FOR SALE OF
Printed Waste And Waste Aluminum Plates

Sealed Tenders are invited for sale of Newsprint related Printed waste on full truck load basis and Aluminum Plate waste on monthly basis,(as and when it is required to dispose)for the period **JULY'26 to AUG '26** on **"As is where is basis"**, available from our presses or any other warehouses at Bangalore, Hubli, Mangalore, Mysore, Bagalkot, Gangavathi, Shivamogga, Gulbarga and Belgaum.

List of Materials can be availed and inspected in co-ordination with the following people till **12th June'26** (except Saturday, Sunday and public holidays) between 9.30am to 5.00pm only.

For BCCL-Bangalore, Hubli, Mangalore and Mysore, Mr. Abhishek M Bhandiwad -, 93941 58093
Email-abhishek.bhandiwad@timesofindia.com
For MMCL- all locations, Mr. Shivakumar-7676454575 and Mr. Gangadhar Desai-9343382559.
Email-shivakumar.r@timesofindia.com/desai.g@timesofindia.com

Interested Parties may contact the above-mentioned people and submit the tenders along with separate EMDs for **BENNETT COLEMAN AND CO. LTD. and Metropolitan Media Company Ltd. in the form of DD/Pay order drawn on company's full name (for which tenders are being submitted)10% of the monthly sale value or Rs.1 Lac whichever is lower.** The DD along with the filed up tender forms should be submitted in a sealed cover super-scribed **"QUOTATION FOR WASTE ITEMS"** and reach us latest by **5.00pm on 12 June'26** at the following address :

(1) for Bennett Coleman and Co. Ltd.–The Times of India Press, Business & Commercial Dept., 9/10/11A, Bommasandra Industrial Area, 4th Cross, Bommasandra, Bangalore-560099 and **(2) for Metropolitan Media Company Ltd.** (Vijay Karnataka) – Business & Commercial Dept, Sanjana Plaza, 74/2, 4th& 5th Floor, Elephant Rock Rd., Jayanagar 3rd block, Bengaluru-560011.

The supply against this tender will commence from **1st JULY '2026** onwards. The company reserves the rights to reject any or all tenders without assigning any reason thereof.

SD/-

ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ
ವಿಭಾಗ ನಂ.02, ಬಾಗಲಕೋಟೆ

ನಂ.ಕಾನಿಇಂ/ಬಾ.ಪ.ಅ.ಪ್ರಾ/ವಿ–2/ಟೆಂಡರ ನಂ.01/2026–27/554 ದಿನಾಂಕ: 02.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ.
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬರುವ ಕಾಮಗಾರಿಗಳ ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಲಮ್‌ಸಮ್ ಟರ್ನಕೀ ಆಧಾರದ ಮೇಲೆ ಟೆಂಡರನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ ಮುಖಾಂತರ ಕೆ.ಟಿ.ಪಿ.ಪಿ ನಿಯಮಾಳಿಯಂತೆ ಆಹ್ವಾನಿಸಲಾಗಿದೆ,
1) ಇಂಡೆಂಟ ನಂ: 84, ಟೆಂಡರ್‌ಗಿಟ್ಟ ಮೊತ್ತವು ರೂ. 3586.80 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) ಹಾಗೂ

ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಟೆಂಡರ್ ಹಾಗೂ ಕಾಮಗಾರಿಯ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ 20.06.2026 ಸಂಜೆ 5.00 ಘಂಟೆವರೆಗೆ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ದಿನಾಂಕ:22.06.2026 ರಂದು ಬೆಳಿಗ್ಗೆ 11.00 ಘಂಟೆ (ಸಾಧ್ಯವಾದಲ್ಲಿ) ತಾಂತ್ರಿಕ ಬಿಡ್‌ನ್ನು ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ :24.06.2026 ರಂದು ಬೆಳಿಗ್ಗೆ 11:00 ಘಂಟೆ (ಸಾಧ್ಯವಾದಲ್ಲಿ) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354–297054 ಸಂಪರ್ಕಿಸಬಹುದಾಗಿದೆ.

Please note henceforth, any changes in calendar of events/ corrigendum/ ammendment will be published in KPPP portal only and will not be published in Newspaper.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ.,ವಿಭಾಗ ನಂ.2,ಬಾಗಲಕೋಟೆ

DIPR/BGK/RO-NO-/78/KSMCA/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539–220054.

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026–27/707
ದಿ: 02/06/2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ರಾಯಚೂರು & ಕೊಪ್ಪಳ ಜಿಲ್ಲೆಯ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 10 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿ ಅಂದಾಜು ಕನಿಷ್ಟ ಮೊತ್ತ ರೂ.12.00 ಲಕ್ಷಗಳಿಂದ **ಗರಿಷ್ಠ ಮೊತ್ತ 85.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **05–06–2026** ರಿಂದ ದಿನಾಂಕ: **16–06–2026** ಸಂಜೆ. 17:30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **10–06–2026** ರಂದು ಬೆಳ್ಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ಜರುಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **18–06–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **20–06–2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ ಪೋರ್ಟಲ್" ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.

ಡಿಐಪಿಆರ್/ಕೊಪ್ಪಳ/134/ಕೆಎಸ್‌ಎಂಸಿಎ/2026–27

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ

Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338–272131,

ಕ್ರ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2026–27/1085 ದಿನಾಂಕ: 27–05–2026

(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿದ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1] Last date of request for issue of blank E-bid document through e-Procurment Date: Other works 27-05-2026 To 15-06-2026, 2] Bid Closing & submission Date: 12-06-2026 AT 04:00 PM, 3] Financial Bid Opening Date: 15-06-2026 AT 11:00 AM 4] Pre Bid Meeting Date: [KW-3 & 4 Works Only] 17-06-2026 AT 05:00 PM, 5] Techanical Bid Opening Date: [KW-3 & 4 Works Only] 15-06-2026 AT 11:00 AM 6] Financial Bid Opening Date: [KW-3 & 4 Works Only] 19-06-2026 AT 11:00 AM

General Works Indent No's: 26396, 26397, 26376, 26375, 26373, 26395, 26222, 26204, 26198, 26202, 26558, 26265, 23623, 26307, 26308, 26306

SC Works Indent No's: 23692, ST Works Indent No's: –, Category 1 Works Indent No's: 26199, Category 2A Works Indent No's: –

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/–ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.

DIPR/BGM/RO-NO-369/KSMCA/2026-27

ಮೆಗಾ ನೆಡುತೋಪು ಅಭಿಯಾನ–2026

ಉತ್ತರ ಪ್ರದೇಶದ ಆಮೂಲಾಗ್ರ ಪರಿವರ್ತನೆಯ



PICS: DIPR, UP GOVT

9 ವರ್ಷಗಳು

ಜೀವ ವೈವಿಧ್ಯತೆ ಬಲಪಡಿಸುವ ಹಸಿರು ಉಪಕ್ರಮಗಳು

- ಕಳೆದ ಒಂಬತ್ತು ವರ್ಷಗಳಲ್ಲಿ 242 ಕೋಟಿಗೂ ಅಧಿಕ ಸಸಿ ನೆಟ್ಟಿದ್ದು, ರಾಜ್ಯಾದ್ಯಂತ ಸುಮಾರು 3.38 ಲಕ್ಷ ಎಕರೆಗಳಷ್ಟು ಹಸಿರು ಹೊದಿಕೆ ವಿಸ್ತರಿಸಲಾಗುತ್ತಿದೆ
- ಸಂರಕ್ಷಣೆ ಮತ್ತು ಆವಾಸಸ್ಥಾನ ರಕ್ಷಣಾ ಕ್ರಮಗಳ ಮೇಲೆ ಕೇಂದ್ರೀಕರಿಸುವ ಮೂಲಕ 2018ರಲ್ಲಿ 173 ಇದ್ದ ಹುಲಿಗಳ ಸಂಖ್ಯೆ 2022ರಲ್ಲಿ 205ಕ್ಕೆ ಏರಿಕೆಯಾಗಿದೆ
- ಪರಿಸರ ಸುಸ್ಥಿರತೆಯನ್ನು ಮತ್ತಷ್ಟು ಬಲಪಡಿಸಲು 2026ರ ಮಾನ್ಸೂನ್ ಋತುವಿನಲ್ಲಿ 35 ಕೋಟಿ ಸಸಿ ನೆಡುವ ಗುರಿ ಹೊಂದಲಾಗಿದೆ
- ಗಂಗಾ ಡಾಲ್ಫಿನ್ ಅನ್ನು ರಾಜ್ಯ ಜಲಚರ ಪ್ರಾಣಿ ಎಂದು ಘೋಷಿಸಿದ್ದು, ಇದು ಜಲಚರ ಪರಿಸರ ವ್ಯವಸ್ಥೆ ಸಂರಕ್ಷಿಸುವ ಪ್ರಯತ್ನಗಳನ್ನು ಬಲಪಡಿಸಲಾಗುತ್ತಿದೆ
- ಸಮರ್ಪಿತ ಹಸಿರು ಸ್ಥಳಗಳನ್ನು ರಚಿಸಲು ಮತ್ತು ಜೀವವೈವಿಧ್ಯತೆಯನ್ನು ಉತ್ತೇಜಿಸಲು ಪ್ರತಿ ಜಿಲ್ಲೆಯಲ್ಲಿ ಅಮೃತ್ ವ್ಯಾನ್‌ಗಳನ್ನು ಸ್ಥಾಪಿಸಲಾಗಿದೆ
- ಸಾರಸ್ ಕ್ರೇನ್ ಜನಸಂಖ್ಯೆಯು 20,281ಕ್ಕೆ ಏರಿದ್ದು, ಇದು ನಿರಂತರ ಜೌಗು ಭೂಮಿ ಮತ್ತು ಆವಾಸಸ್ಥಾನ ಸಂರಕ್ಷಣಾ ಉಪಕ್ರಮಗಳನ್ನು ಪ್ರತಿಬಿಂಬಿಸಲಾಗುತ್ತಿದೆ
- ಮುಖ್ಯಮಂತ್ರಿ ಕೃಷಿಕ ವೃಕ್ಷ ಧನ ಯೋಜನೆಯ ಪರಿಚಯವು ಖಾಸಗಿ ಕೃಷಿ ಭೂಮಿಯ ಗಡಿಗಳಲ್ಲಿ ಸಸಿ ನೆಡುವಿಕೆಯನ್ನು ಪ್ರೋತ್ಸಾಹಿಸಲಾಗಿದೆ
- ಉತ್ತರ ಪ್ರದೇಶವು 12 ರಾಮ್‌ಸರ್ ತಾಣಗಳಿಗೆ ಅಂತಾರಾಷ್ಟ್ರೀಯ ಮನ್ನಣೆ ಗಳಿಸಿದ್ದು, ಇದು ಜೌಗು ಪ್ರದೇಶ ಸಂರಕ್ಷಣೆಯ ಪ್ರಮುಖ ರಾಜ್ಯಗಳಲ್ಲಿ ಒಂದೆನಿಸಿದೆ
- ನೆಡುತೋಪು ಅಭಿಯಾನವನ್ನು 'ತಾಯಿ ಹೆಸರಲ್ಲಿ ಒಂದು ಸಸಿ' ಮೂಲಕ ಜನಾಂದೋಲನವಾಗಿ ಪರಿವರ್ತಿಸಿದ್ದು, ಹಲವು ಕುಟುಂಬಗಳನ್ನು ಪರಿಸರ ಸಂರಕ್ಷಣೆಯೊಂದಿಗೆ ಸಂಪರ್ಕಿಸಲಾಗುತ್ತಿದೆ
- ಚಿತ್ರಕೂಟದಲ್ಲಿ ರಾಣಿಪುರ ಹುಲಿ ಮೀಸಲು ಪ್ರದೇಶ ಸ್ಥಾಪನೆ ಸೇರಿದಂತೆ ನಾಲ್ಕು ಹುಲಿ ಮೀಸಲು ಪ್ರದೇಶಗಳೊಂದಿಗೆ ಸಂರಕ್ಷಿತ ಆವಾಸಸ್ಥಾನಗಳನ್ನು ವಿಸ್ತರಿಸಲಾಗಿದೆ

ಉತ್ತರ ಪ್ರದೇಶವು ವಿಶ್ವಪರಿಸರ ದಿನ ಆಚರಿಸುತ್ತಿದ್ದು, ರಾಜ್ಯದ ಪರಿಸರ ಉಪಕ್ರಮಗಳು ಪರಿಸರ ಸಂರಕ್ಷಣೆ ನಿಟ್ಟಿನಲ್ಲಿ ಸಮರ್ಥವಾದ ಬದ್ಧತೆಯನ್ನು ಪ್ರದರ್ಶಿಸುತ್ತವೆ. ಕಳೆದ ಒಂಬತ್ತು ವರ್ಷಗಳಲ್ಲಿ ವಿವಿಧ ಅಭಿಯಾನಗಳ ಮೂಲಕ ಬೃಹತ್ ಪ್ರಮಾಣದ ಸಸಿಗಳನ್ನು ನೆಡುವ ಅಭಿಯಾನಗಳು ಹಸಿರು ಹೊದಿಕೆಯನ್ನು ವಿಸ್ತರಿಸಿವೆ. ಈ ಪ್ರಯತ್ನಗಳು ಪ್ರಬಲ ವನ್ಯಜೀವಿ ಸಂರಕ್ಷಣಾ ಕ್ರಮಗಳಿಂದ ಪೂರಕವಾಗಿರುವುದರ ಪರಿಣಾಮ ಹುಲಿಗಳು, ಆನೆಗಳು ಮತ್ತು ಸಾರಸ್ ಕ್ರೇನ್‌ಗಳ ಜನಸಂಖ್ಯೆ ಹೆಚ್ಚಾಗಿದೆ. ಸರ್ಕಾರವು ಸಂರಕ್ಷಿತ ಪ್ರದೇಶಗಳನ್ನು ವಿಸ್ತರಿಸಿದೆ ಮತ್ತು ಮಾನವ ವನ್ಯಜೀವಿ ಸಂಘರ್ಷವನ್ನು ತಗ್ಗಿಸಲು ಉದ್ದೇಶಿತ ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಂಡಿದೆ. ಜೌಗು ಪ್ರದೇಶ ಗುರುತಿಸುವಿಕೆ, ಸಂರಕ್ಷಣಾ ತಳಿ ಕೇಂದ್ರಗಳ ಸ್ಥಾಪನೆ ಮತ್ತು ಪ್ರಮುಖ ನದಿಗಳ ಪುನರುಜ್ಜೀವನದಲ್ಲೂ ಪ್ರಗತಿ ಸ್ಪಷ್ಟವಾಗಿದೆ. ಈ ಪ್ರಯತ್ನಗಳೊಂದಿಗೆ ನವೀಕರಿಸಬಹುದಾದ ಇಂಧನ ಉಪಕ್ರಮಗಳು ಮತ್ತು ಸ್ವಚ್ಛತಾ ಕ್ರಮಗಳು ಉತ್ತರ ಪ್ರದೇಶದ ಹಸಿರು ಮತ್ತು ಸುಸ್ಥಿರ ಭವಿಷ್ಯಕ್ಕೆ ಕೊಡುಗೆ ನೀಡುತ್ತಿವೆ.

2017-2018	2018-2019	2019-2020	2020-2021	2021-2022	2022-2023	2023-2024	2024-2025	2025-2026
5.72 ಕೋಟಿ	11.77 ಕೋಟಿ	22.60 ಕೋಟಿ	25.87 ಕೋಟಿ	30.53 ಕೋಟಿ	35.49 ಕೋಟಿ	36.16 ಕೋಟಿ	36.81 ಕೋಟಿ	37.21 ಕೋಟಿ

1,900 ನರ್ಸರಿಗಳಲ್ಲಿ 52 ಕೋಟಿಗೂ ಅಧಿಕ ಸಸಿಗಳನ್ನು ಸಿದ್ಧಪಡಿಸಲಾಗುತ್ತಿದೆ (2026)

READER ENGAGEMENT INITIATIVE

₹2,827 ಕೋಟಿ ದಂಡ ಬಾಕಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಕಳೆದ ನವೆಂಬರ್‌ನಲ್ಲಿ ರಿಯಾಯಿತಿ ನೀಡಿದಾಗ ಪೊಲೀಸ್ ಇಲಾಖೆಯ 77.41 ಲಕ್ಷ ಪ್ರಕರಣಗಳಲ್ಲಿ 201 ಕೋಟಿ ರೂ. ಹಾಗೂ ಸಾರಿಗೆ ಇಲಾಖೆಯ 902 ಪ್ರಕರಣಗಳಲ್ಲಿ 29.66 ಲಕ್ಷ ರೂ. ದಂಡ ಪಾವತಿಯಾಗಿತ್ತು. ಈಗ ಪೊಲೀಸ್ ಹಾಗೂ ಸಾರಿಗೆ ಇಲಾಖೆ ಸೇರಿದಂತೆ ಒಟ್ಟಾರೆ 2,827 ಕೋಟಿ ರೂ. ದಂಡ ಬಾಕಿಯಿದ್ದು, ಸರಕಾರ ಶೇ.50ರ ರಿಯಾಯಿತಿಯೊಂದಿಗೆ ದಂಡ ಪಾವತಿಸಲು ವಾಹನ ಮಾಲೀಕರಿಗೆ 20 ದಿನಗಳ ಕಾಲಾವಕಾಶ ನೀಡಿದೆ.

ದಂಡ ಎಲ್ಲಿ ಕಟ್ಟಬೇಕು: ಸಾರಿಗೆ ಇಲಾಖೆ ಪ್ರಕರಣಗಳಲ್ಲಿ ದಂಡ ಬಾಕಿ ಉಳಿಸಿಕೊಂಡಿರುವ ವಾಹನಗಳ ಮಾಲೀಕರು ಸಂಬಂಧಪಟ್ಟ ಆರ್‌ಟಿಒ ಕಚೇರಿಗಳಿಗೆ ಖುದ್ದಾಗಿ ಹೋಗಿ ಬಾಕಿ ದಂಡ ಪಾವತಿಸುವ ಮೂಲಕ ರಿಯಾಯಿತಿ ಪಡೆಯಬಹುದು.

ಇನ್ನು, ಪೊಲೀಸ್ ಇಲಾಖೆಯು ಇ-ಚಲನ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ವಾಹನ ಸವಾರರು ಸಂಚಾರ ಪೊಲೀಸ್ ಠಾಣೆಗಳು, ಸಂಚಾರ ನಿರ್ವಹಣಾ ಕೇಂದ್ರ (ಟಿಎಂಸಿ), ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ವೆಬ್‌ಸೈಟ್‌ಗಳಲ್ಲಿ ವಿವರ ಪಡೆದು ದಂಡ ಪಾವತಿಸಬಹುದು. ಜಿಲ್ಲೆಗಳಲ್ಲಿ ಸಮೀಪದ ಪೊಲೀಸ್ ಠಾಣೆಗಳಿಗೆ ಖುದ್ದು ಭೇಟಿ ಕೊಟ್ಟು ರಿಯಾಯಿತಿ ದರದಲ್ಲಿ ದಂಡ ಕಟ್ಟಬಹುದು. ಆನ್‌ಲೈನ್‌ನಲ್ಲಿ ಕರ್ನಾಟಕ ಸ್ಟೇಟ್ ಪೊಲೀಸ್ (ಕೆಎಸ್‌ಪಿ) ಆ್ಯಪ್, ಬೆಂಗಳೂರು ಸಂಚಾರ ಪೊಲೀಸ್ ವಿಭಾಗದ ಬಿಟಿಪಿ ಅಸ್ತ್ರಂ ಆ್ಯಪ್ ಮೂಲಕ ದಂಡ ಪಾವತಿಸಬಹುದು.

ಮತ್ತೆ ಆರು ಆರೋಪಿಗಳ ಬಂಧನ

ಭೀಮಾ ತೀರದ ಹತ್ಯಾಕಾಂಡ

ವಿಜಯಪುರ: ಭೀಮಾ ನದಿ ತೀರದ ಚಡಚಣ ತಾಲೂಕಿನ ಗೋವಿಂದಪುರದಲ್ಲಿ ನಡೆದ ಹತ್ಯಾಕಾಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಆರು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಗೋವಿಂದಪುರದ ಅಪ್ಪುಗೌಡ ಲಕ್ಕನಗೌಡ ಪಾಟೀಲ (49), ಶಂಕ್ರೆಪ್ಪ ಮಾದೇವ ಆರಕೇರಿ (33), ಅಪ್ಪಾಸಾಬ ಅಲಿಯಾಸ್ ಕಿಶನ್ ಶಂಕರ ಭೋವಿ (56), ಸತ್ಯೆಪ್ಪ ಜಕ್ಕಪ್ಪ ಬಿರಾದಾರ (46), ಸುಲ್ತಾನ ಮಾದೇವ ಬಿರಾದಾರ (24), ಮಹೇಶ ಬೆಳ್ಳೆಣ್ಣಿ ಬಿರಾದಾರ (25) ಬಂಧಿತ ಆರೋಪಿಗಳು. ಜೂನ್ 1ರಂದು ಬಂಧಿಸಿದ 12 ಜನರು ಸೇರಿ ಬಂಧಿತರ ಸಂಖ್ಯೆ 18ಕ್ಕೆ ಏರಿದಂತಾಗಿದೆ ಎಂದು ಎಸ್‌ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಸಿಎನ್‌ಜಿಗೆ ಜಿಲ್ಲೆಗೊಂದು ದರ!

ದರ ಅಸಮಾನತೆಗೆ ವಾಹನ ಮಾಲೀಕರ ಅಸಮಾಧಾನ

ಪರಿಸರ ಸ್ನೇಹಿ ಇಂಧನ ಬಳಕೆಗೆ ಪ್ರೋತ್ಸಾಹ ಆಶಯಕ್ಕೆ ಧಕ್ಕೆ

■ **ರವಿಭಾರತಿ ಗೋಸಾವಿ** ಬೆಳಗಾವಿ
ravi.gosavi@timesofindia.com

ವಿಕ ವಿಶೇಷ

ಪರಿಸರ ಸ್ನೇಹಿ ಹಾಗೂ ಕಡಿಮೆ ವೆಚ್ಚದ ಇಂಧನ ಎಂಬ ಕಾರಣಕ್ಕೆ 'ಸಿಎನ್‌ಜಿ' (ಸಾಂದ್ರೀಕೃತ ನೈಸರ್ಗಿಕ ಅನಿಲ) ಬಳಸುವಂತೆ ಸರಕಾರಗಳು ಸಲಹೆ ನೀಡುತ್ತಿವೆ. ಆದರೆ, ಸಿಎನ್‌ಜಿ ದರದಲ್ಲಿ ಜಿಲ್ಲೆಯಿಂದ ಜಿಲ್ಲೆಗಿರುವ ವ್ಯತ್ಯಾಸ ವಾಹನ ಮಾಲೀಕರಲ್ಲಿ ಅಸಮಾಧಾನ ಮೂಡಿಸಿದೆ. ಬೆಂಗಳೂರಿನಲ್ಲಿ ಪ್ರತಿ ಕೆ.ಜಿಗೆ 95 ರೂ. ಇದ್ದರೆ ಬೆಳಗಾವಿಯಲ್ಲಿ 100 ರೂ. ಇದೆ. ಇನ್ನುಳಿದ ಜಿಲ್ಲೆಗಳ ದರವೂ ಏಕಪ್ರಕಾರವಿಲ್ಲ.

''ರಾಜ್ಯದ ಇತರ ಜಿಲ್ಲೆಗಳಲ್ಲಿ ಸಿಎನ್‌ಜಿ ಕಡಿಮೆ ದರಕ್ಕೆ ದೊರೆಯುತ್ತಿರುವಾಗ, ಬೆಳಗಾವಿಯಲ್ಲಿ ಮಾತ್ರ ಹೆಚ್ಚಿನ ದರ ಪಾವತಿಸುವಂತಾಗಿರುವುದು ಸರಿಯಲ್ಲ, ಸಿಎನ್‌ಜಿ ದರ ಏಕಪ್ರಕಾರದಲ್ಲಿರಬೇಕು,'' ಎಂದು ವಾಹನ ಮಾಲೀಕ ಶಿವಾನಂದ ಪಾಟೀಲ ಅಭಿಪ್ರಾಯಪಟ್ಟರು.

ದರ ವ್ಯತ್ಯಾಸ ಏಕೆ?: ವಿಜಯಪುರ, ಬಾಗಲಕೋಟೆ, ಹಾವೇರಿ, ಕೊಪ್ಪಳ, ಹಾಸನ, ಕೊಡಗು, ಕೋಲಾರ, ಶಿವಮೊಗ್ಗ, ಉತ್ತರ ಕನ್ನಡ, ಮಂಡ್ಯ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರತಿ ಕೆ.ಜಿ ಸಿಎನ್‌ಜಿ ದರ 91.50 ರೂ. ಇದೆ. ರಾಮನಗರದಲ್ಲಿ 85.25 ರೂ. ಹಾಗೂ ದಾವಣಗೆರೆಯಲ್ಲಿ 84 ರೂ., ತುಮಕೂರಿನಲ್ಲಿ 87 ರೂ.ದರ ಇದೆ. ಒಂದೇ ರಾಜ್ಯದಲ್ಲಿ ಇಷ್ಟೊಂದು ವ್ಯತ್ಯಾಸ ಇರುವುದು ಗ್ರಾಹಕರಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

- ರಾಜ್ಯದಲ್ಲಿ ಗರಿಷ್ಠ ಸಿಎನ್‌ಜಿ ದರ: ಬೆಳಗಾವಿಯಲ್ಲಿ 100 ರೂ.
- ರಾಜ್ಯದಲ್ಲಿ ಕನಿಷ್ಠ ದರ: ದಾವಣಗೆರೆಯಲ್ಲಿ 84 ರೂ.
- ಗರಿಷ್ಠ ವ್ಯತ್ಯಾಸ: 16 ರೂ.
- ಬೆಂಗಳೂರಿಗಿಂತ ಬೆಳಗಾವಿಯಲ್ಲಿ 5 ರೂ. ಅಧಿಕ.

> **ಸಿಎನ್‌ಜಿ ದರ ನಿಗದಿ ಅಧಿಕಾರ ಪಂಪ್ ಮಾಲೀಕರು ಅಥವಾ ನಿರ್ವಾಹಕರ ಬಳಿ ಇಲ್ಲ, ಅನಿಲ ಪೂರೈಕೆ ಕಂಪನಿಗಳು ನಿಗದಿಪಡಿಸುವ ದರದ ಪ್ರಕಾರ ಮಾರಾಟ ಮಾಡಲಾಗುತ್ತದೆ.**
> -ಬೆಳಗಾವಿಯಲ್ಲಿ ಸಿಎನ್‌ಜಿ ಪೂರೈಸುವ ಖಾಸಗಿ ಕಂಪನಿ ವ್ಯವಸ್ಥಾಪಕ

ಸಿಎನ್‌ಜಿ ದರ ನಿಗದಿಯಲ್ಲಿ ಅನಿಲ ಖರೀದಿ ವೆಚ್ಚ, ಪೂರೈಕೆ ಮೂಲ, ಪೈಪ್‌ಲೈನ್, ಸಾಗಣೆ ವೆಚ್ಚ ಮತ್ತು ವಿತರಣಾ ವ್ಯವಸ್ಥೆ ಪ್ರಮುಖ ಪಾತ್ರ ವಹಿಸುತ್ತವೆ. ಈ ಕಾರಣಗಳಿಂದ ಜಿಲ್ಲೆಯಿಂದ ಜಿಲ್ಲೆಗೆ ದರದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಆದರೆ, ಗ್ರಾಹಕರ ದೃಷ್ಟಿಯಿಂದ ಒಂದೇ ರಾಜ್ಯದಲ್ಲಿ 16 ರೂ. ಗಳಷ್ಟು ದರ ವ್ಯತ್ಯಾಸ ಚರ್ಚೆಗೆ ಕಾರಣವಾಗಿದೆ. ಪರಿಸರ ಸ್ನೇಹಿ ಇಂಧನ ಬಳಕೆ ಉತ್ತೇಜಿಸುವ ಜತೆಗೆ ಗ್ರಾಹಕರಿಗೆ ನ್ಯಾಯಸಮ್ಮತ ದರವೂ ಸಿಗಬೇಕು ಎಂಬುದು ವಾಹನ ಮಾಲೀಕರ ಅಭಿಮತ.

ಒಂದೊಂದು ರೀತಿ ದರ: ಕೇಂದ್ರ ಸರಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿ ಕರ್ನಾಟಕದ ಜಿಲ್ಲೆಗಳಲ್ಲಿ ಬೇರೆಬೇರೆ ಕಂಪನಿಗಳಿಗೆ ಸಿಎನ್‌ಜಿ ವಿತರಣೆಗೆ ಪರವಾನಗಿ ನೀಡಿದೆ. ಗೇಲ್ ಗ್ಯಾಸ್, ಮೆಗಾ ಸಿಎನ್‌ಜಿ, ಇಂಡಿಯನ್ ಆಯಿಲ್, ಅದಾನಿ ಗ್ಯಾಸ್, ಮಹಾರಾಷ್ಟ್ರ ನ್ಯಾಚುರಲ್ ಗ್ಯಾಸ್ ಲಿಮಿಟೆಡ್(ಎಂಎನ್‌ಜಿಎಲ್) ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಕಂಪನಿಗಳು ಪ್ರಮುಖವಾಗಿವೆ. ಇದೇ ರೀತಿ ಹಲವು ಕಂಪನಿಗಳು ಪೆಟ್ರೋಲ್ ಹಾಗೂ ಡೀಸೆಲ್ ಪೂರೈಸುತ್ತಿದ್ದರೂ, ದರದಲ್ಲಿ 16 ರೂ. ಗಳಷ್ಟು ವ್ಯತ್ಯಾಸ ಇಲ್ಲ, ಪೆಟ್ರೋಲ್, ಡಿಸೇಲ್‌ಗೆ ಇಲ್ಲದ ದರ ವ್ಯತ್ಯಾಸ ಸಿಎನ್‌ಜಿಗೇಕೆ? ಎಂಬುದು ವಾಹನ ಮಾಲೀಕರ ಪ್ರಶ್ನೆ.

ಕುಡಿವ ನೀರಿಲ್ಲ, ರಸ್ತೆ ಸರಿಯಿಲ್ಲ

ಮೈ ಡಿಯರ್ ಸಿಎಂ
ಶ್ರೀಸಾಮಾನ್ಯನ ಕಾಗದ

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನಲ್ಲಿ ಪ್ರಸಕ್ತ ಬೇಸಿಗೆಯಲ್ಲಿ ತೀವ್ರ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಿದ್ದು, ಸಾರ್ವಜನಿಕರು ಹಾಗೂ ಜಾನುವಾರುಗಳು ಕುಡಿಯುವ ನೀರಿಗಾಗಿ ಹನಿಹನಿಗೂ ಪರದಾಡುವಂತಾಗಿದೆ. ಇದರೊಂದಿಗೆ ತಾಲೂಕಿನ ಪ್ರಮುಖ ಗ್ರಾಮೀಣ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಗುಂಡಿಬಿದ್ದು ವಾಹನ ಸಂಚಾರ ಮತ್ತು ಸಾರ್ವಜನಿಕರ ಓಡಾಟ ದುಸ್ತರವಾಗಿದೆ. ನಮ್ಮ ಭಾಗದ ಈ ಗಂಭೀರವಾದ ಕುಡಿವ ನೀರಿನ ಸಮಸ್ಯೆ ಮತ್ತು ರಸ್ತೆ ಸಂಪರ್ಕದ ಅವ್ಯವಸ್ಥೆಯನ್ನು ತಕ್ಷಣವೇ ಪರಿಹರಿಸಿ, ತುರ್ತು ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿ ವಿನಂತಿ.

- **ಶಿವಾನಂದ್ ದೇವಾನಿ** ಅಫಜಲಪುರ, ಕಲಬುರಗಿ

ALVA'S Education Foundation
ALVA'S LAW COLLEGE
(AFFILIATED TO KARNATAKA STATE LAW UNIVERSITY AND RECOGNIZED BY BAR COUNCIL OF INDIA)
SUNDARI ANANDA ALVA CAMPUS, VIDYAGIRI, MOODUBIDIRE-57427, D.K
REQUIRES FACULTY
APPLICATIONS ARE INVITED FOR THE POST OF
ASSISTANT PROFESSOR
LAW · POLITICAL SCIENCE · SOCIOLOGY · COMMERCE · MANAGEMENT
QUALIFICATION
Post graduate degree in relevant subject with NET/SLET
MINIMUM 3 - 5 YEARS EXPERIENCE
Eligible candidates may mail their updated bio-data to
principal@alvaslawcollege.com
+91 9035355086
Alva's Journalism

ಕಲಬುರಗಿಯಲ್ಲಿ ಚಾರುಶ್ರೀ, ವೈದ್ಯರತ್ನ ಪ್ರಶಸ್ತಿ ಪ್ರದಾನ

ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ನಡೆದ ಜೈನ ಧರ್ಮದ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸಾಹಿತಿ ಡಾ.ಹಂಪ ನಾಗರಾಜಯ್ಯ ಅವರಿಗೆ ಚಾರುಶ್ರೀ ಹಾಗೂ ವೈದ್ಯೆ ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ ಅವರಿಗೆ ವೈದ್ಯರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರವಣಬೆಳಗೊಳದ ದಿಗಂಬರ ಜೈನ ಮಠದ ಜಗದ್ಗುರು ಸ್ವಸ್ತಿ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾಚಾರ್ಯವರ್ಯ ಸ್ವಾಮೀಜಿ, ಹೈದರಾಬಾದ್‌ನ ಮಲ್ಲಾರೆಡ್ಡಿ ವಿಶ್ವವಿದ್ಯಾಪೀಠದ ಉಪಾಧ್ಯಕ್ಷೆ ಡಾ.ಸಿ.ಎಚ್.ಪ್ರೀತಿ ರೆಡ್ಡಿ, ಕೇಂದ್ರೀಯ ವಿವಿಯ ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ್ ಇದ್ದರು.

ನಿವೃತ್ತ ಅಧಿಕಾರಿಗೆ ಬ್ಲಾಕ್‌ಮೇಲ್

ಮೈಸೂರು: ಯುವತಿಯೊಂದಿಗೆ ನಗ್ನವಾಗಿ ವಿಡಿಯೊ ಚಾಟ್ ಮಾಡಿದ್ದ ನಿವೃತ್ತ ಸರಕಾರಿ ಅಧಿಕಾರಿಯೊಬ್ಬರು, ಆಕೆಯ ಬ್ಲಾಕ್‌ಮೇಲ್‌ಗೆ ಹೆದರಿ 9.45 ಲಕ್ಷ ರೂ. ಕಳೆದುಕೊಂಡಿದ್ದಾರೆ. ಕುವೆಂಪು ನಗರದ ನಿವಾಸಿಯಾದ 74ರ ವೃದ್ಧ ಹಣ ಕಳೆದುಕೊಂಡವರು. ಅವರಿಗೆ ಫೇಸ್‌ಬುಕ್ ಮೂಲಕ ಯುವತಿಯ ಪರಿಚಯವಾಗಿದ್ದು, ಮೊಬೈಲ್ ಸಂದೇಶ ಕಳುಹಿಸಿ ಆಕೆಯೊಂದಿಗೆ ಸ್ನೇಹ ಬೆಳೆಸಿದರು. ಈ ವೇಳೆ ಆಕೆಯೊಂದಿಗೆ ನಗ್ನವಾಗಿ ವಿಡಿಯೊ ಚಾಟ್ ಮಾಡಿದ್ದು, ಇದನ್ನು ಆಕೆ ರೆಕಾರ್ಡ್ ಮಾಡಿಕೊಂಡು, ಹಣ ನೀಡದೆ ಇದ್ದರೆ ಬಹಿರಂಗ ಪಡಿಸುವುದಾಗಿ ಬ್ಲಾಕ್‌ಮೇಲ್ ಮಾಡಿದ್ದಾಳೆ.

ಒತ್ತಡಕ್ಕೆ ಮಣಿದು, ಆಕೆಯ ಬ್ಯಾಂಕ್ ಖಾತೆಗೆ ಹಂತಹಂತವಾಗಿ 9.45 ಲಕ್ಷ ರೂ. ವರ್ಗಾಯಿಸಿದ್ದರು. ಮತ್ತೆ ಬ್ಲಾಕ್‌ಮೇಲ್ ಮುಂದುವರಿದಾಗ ಆಕೆಯ ವಿರುದ್ಧ ನಿವೃತ್ತ ಸರಕಾರಿ ಅಧಿಕಾರಿ ದೂರು ನೀಡಿದ್ದಾರೆ. ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೋಟದಲ್ಲಿ ಕಾಡಾನೆ ಸಾವು

ಸುಂಟಿಕೊಪ್ಪ (ಕೊಡಗು): 7ನೇ ಹೊಸಕೋಟೆ ವ್ಯಾಪ್ತಿಯ ತೊಂಡೂರು ಗ್ರಾಮದ ತೋಟವೊಂದರಲ್ಲಿ ಕಾಡಾನೆ ಮೃತಪಟ್ಟಿದೆ. ಬುಧವಾರ ರಾತ್ರಿ ಆಹಾರ ಅರಸಿ ಬಂದ 25ರಿಂದ 30 ವರ್ಷ ಪ್ರಾಯದ ಗಂಡಾನೆ ಮೃತಪಟ್ಟಿದೆ. ಕಾಡಾನೆಯು ಕೆಸರಿನಲ್ಲಿ ಹೂತುಕೊಂಡಿರುವ ಸ್ಥಿತಿಯಲ್ಲಿದ್ದು, ಮೇಲೇಳಲು ಆಗದೆ ಉಸಿರುಗಟ್ಟಿ ಸತ್ತಿರಬಹುದು ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಮೇಲೆ ನಿಖರ ಕಾರಣ ತಿಳಿದು ಬರಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಮ ಆಡಳಿತಾಧಿಕಾರಿ ಆತ್ಮಹತ್ಯೆ

ಮೇಲಧಿಕಾರಿಗಳ ಕಿರುಕುಳ: ಆರೋಪ

ಬಸವಕಲ್ಯಾಣ (ಬೀದರ್): ಗ್ರಾಮ ಆಡಳಿತ ಅಧಿಕಾರಿ ಮಹಾದೇವ (27) (ವಿಎ) ತಮ್ಮ ಮನೆಯಲ್ಲಿ ನೇಣಿಗೆ ಶರಣಾದ ಘಟನೆ ತಾಲೂಕಿನ ಕಾಂಬಳೆವಾಡಿ ಗ್ರಾಮದಲ್ಲಿ ನಡೆದಿದೆ. ಇಲಾಖೆಯ ಮೇಲಧಿಕಾರಿಗಳ ಕಿರುಕುಳ ಹಾಗೂ ಅತಿಯಾದ ಕೆಲಸದ ಒತ್ತಡ ಆತ್ಮಹತ್ಯೆಗೆ ಕಾರಣ ಎಂದು ಆರೋಪಿಸಲಾಗಿದೆ. ಮಹಾದೇವ ಬುಧವಾರ ಸಂಜೆ ತಮ್ಮ ನಿವಾಸದಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೇಲಧಿಕಾರಿಗಳು ಸಣ್ಣಪುಟ್ಟ ವಿಷಯಗಳಿಗೂ ಕಿರುಕುಳ ನೀಡುತ್ತಿದ್ದರು. ಅನಗತ್ಯ ಒತ್ತಡ ಹೇರುತ್ತಿದ್ದರು ಎಂದು ಮಹಾದೇವ ಅವರ ಕುಟುಂಬದವರು ಆರೋಪಿಸಿದ್ದಾರೆ. ಮೃತನ ತಾಯಿ ಜಾನಕಬಾಯಿ ದೂರಿನ್ವಯ ಮಂಠಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎನ್‌ಎಂಡಿಸಿಯಿಂದ ನಿಯಮಬಾಹಿರ ಅದಿರು ಸಾಗಣೆ'

■ **ವಿಕ ಸುದ್ದಿಲೋಕ** ಬಳ್ಳಾರಿ

''ಕೇಂದ್ರ ಸರಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್‌ಎಂಡಿಸಿ) ನಿಯಮಬಾಹಿರವಾಗಿ ಅದಿರು ಸಾಗಣೆ ಮಾಡುತ್ತಿದೆ,'' ಎಂದು ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್.ಹಿರೇಮಠ ಗಂಭೀರ ಆರೋಪ ಮಾಡಿದರು.

''ಮೈನಿಂಗ್ ಪ್ರದೇಶದಿಂದ ಕನ್ವೇಯರ್ ಬೆಲ್ಟ್ ಮೂಲಕ ಅದಿರು ಸಾಗಣೆ ಮಾಡಬೇಕು ಎಂಬ ನಿಯಮವಿದೆ. ಆದರೆ, ಎನ್‌ಎಂಡಿಸಿ ಲಾರಿಗಳ ಮೂಲಕವೇ ಅದಿರು ಸಾಗಣೆ ಮಾಡಿ ನಿಯಮ ಉಲ್ಲಂಘಿಸಿದೆ. ಕೆಲವು ವರ್ಷಗಳಿಂದ ಕನ್ವೇಯರ್ ಬೆಲ್ಟ್ ಕಾರ್ಯನಿರ್ವಹಿಸುತ್ತಿಲ್ಲ. ಅದಿರು ಹೊತ್ತ ಲಾರಿಗಳು ಸಂಡೂರು ತಾಲೂಕಿನ ರಣಜಿತ್ ಪುರ, ನರಸಿಂಗಪುರ ಹಾಗೂ ಸುಬ್ಬರಾಯನಹಳ್ಳಿ ಮೂಲಕ ಸಂಚರಿಸುವುದರಿಂದ ಅಪಘಾತಗಳು ಹೆಚ್ಚುತ್ತಿವೆ. ಮತ್ತೊಂದೆಡೆ ಧೂಳಿನಿಂದ ಸುತ್ತಲಿನ ಗ್ರಾಮಸ್ಥರಲ್ಲಿ ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ,'' ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

''2021ರಲ್ಲಿ ಎನ್‌ಎಂಡಿಸಿ ಸಲ್ಲಿಸಿದ ಪರಿಸರ ಅನುಸರಣಾ ವರದಿಯಲ್ಲಿ ಕಬ್ಬಿಣದ ಅದಿರು ಸಾಗಣೆಗೆ ಪ್ರತ್ಯೇಕ ಕನ್ವೇಯರ್ ಬೆಲ್ಟ್ ವ್ಯವಸ್ಥೆಯಿದೆ ಎಂದು ತಿಳಿಸಿತ್ತು. ಆದರೆ, ಕನ್ವೇಯರ್ ಬೆಲ್ಟ್ ಕಾರ್ಯನಿರ್ವಹಣೆ ಸ್ಥಗಿತಗೊಂಡಿದೆ. ಈ ವಿಷಯವನ್ನು ಕೇಂದ್ರ ಉನ್ನತಾಧಿಕಾರ ಸಮಿತಿ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ವಾಸ್ತವಾಂಶವನ್ನು ಉದ್ದೇಶಪೂರ್ವಕವಾಗಿ ಮರೆಮಾಚಿರುವುದು, ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಉಲ್ಲಂಘಿಸಿರುವುದು ಹಾಗೂ ಗ್ರಾಮಸ್ಥರನ್ನು ನಿರಂತರ ಅಪಾಯಕ್ಕೆ ದೂಡುತ್ತಿರುವುದರಿಂದ ಎನ್‌ಎಂಡಿಸಿ ವಿರುದ್ಧ ಕ್ರಮ ಕೈಗೊಳ್ಳಬೇಕು,'' ಎಂದು ಆಗ್ರಹಿಸಿದರು.

AMG LINE

DIGITAL LIGHT

AI ROUTINES

Make the smart move with STAR Agility+. Avail up to 50% lower EMIs and only pay for the distance you subscribe to drive. Effortlessly Upgrade, Retain or Return your vehicle with Guaranteed Future Value. All this, while you retain full ownership of your Star.

EMI starting from ₹55 831
ROI starting from 6.99%
Attractive Trade-in Benefits with Welcome Program

Akshaya Motors Showrooms & Service Centers: Bengaluru - Koramangala, Mysore Road & Hosur Road - +91 9513727171
Mysuru - Hebbal Industrial Area - +91 9019455055 | Hubballi - PB Road Rayapur - +919015089089

Scan the QR code to connect with us on WhatsApp.

Mercedes-Benz India Pvt Ltd. (CIN: U34102PN1994PTC083160)
Accessories, colors, and fitments shown may not be part of standard specifications of models available in India. For more details, please refer to the Product Brochure applicable for Indian market. For more information on working of airbags, please refer to the detailed owner's manual available on the Mercedes-Benz India official website. '140 Years Benefits' can be availed as per the applicable terms & conditions. Final price and offers may vary based on applicable taxes, levies, and vehicle pricing at the time of invoicing. Finance is at the sole discretion of financier, Mercedes-Benz Financial Services India Pvt. Ltd. (CIN U67190TN2010FTC077890). Terms & Conditions apply on offers.